# ಯುಗದಶ್ರ

- ವಿವೇಕ ಮತ್ತು ವಿಶ್ವಾಸ
- ಇಸ್ಲಾಂ ಪರಿಪೂರ್ಣ ಮತಸ್ವಾತಂತ್ರ್ಯವನ್ನು ನೀಡುತ್ತದೆ
- ಭಾರತೀಯ ಸಂವಿಧಾನ ಮತ್ತು ಮತಸ್ವಾತಂತ್ರ್ಯ ಮಸೂದೆ
- ಭುಟ್ಟೋ ಪ್ರಕರಣ
- ಅಹ್ಮದಿಯಾ ಖಲೀಫರ ಸಂದೇಶ
- ಇಸ್ಲಾಂ ಮತ ತತ್ತ್ವಜ್ಞಾನ

ತ್ರೈ ಮಾಸಿಕ
ಜೂನ್ 1979
ಇಹ್‌ಸಾನ್ 1358
ಬೆಲೆ: 1-00

ಮತಕಾರ್ಯದಲ್ಲಿ ಬಲಾತ್ಕಾರವಿಲ್ಲ; ಸನ್ಮಾರ್ಗವು ದುರ್ಮಾರ್ಗದಿಂದ ಬೇರ್ಪಟ್ಟು ತಿಳಿಯುವಂತೆ ವ್ಯತ್ಯಸ್ತವಾಗಿದೆ.

—ಪವಿತ್ರ ಖುರ್‌ಆನ್ (2:257)

# ಯುಗರಶ್ಮಿ ತ್ರೈಮಾಸಿಕ


23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575001.

ಸಂಪುಟ: 5 ಎಪ್ರಿಲ್-ಜೂನ್ 1979/ಶಹಾದತ್-ಇಹ್‌ಸಾನ್ 1358 ಸಂಚಿಕೆ: 1

ಸಂಪಾದಕ: ಮುಹಮ್ಮದ್ ಯೂಸುಫ್


ವಿಷಯ ಸೂಚಿಕೆ: ಪುಟ


| | |
|---|---|
| *ಯುಗರಶ್ಮಿಯ ಐದನೆಯ ವಯಸ್ಸು ... | 1 |
| *ವಿವೇಕ ಮತ್ತು ವಿಶ್ವಾಸ ... | 2 |
| *ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... | 3 |
| *ಇಸ್ಲಾಂ ಪರಿಪೂರ್ಣ ಮತಸ್ವಾತಂತ್ರ್ಯವನ್ನು ನೀಡುತ್ತದೆ ... | 4 |
| *ಭಾರತೀಯ ಸಂವಿಧಾನ ಮತ್ತು ಮತಸ್ವಾತಂತ್ರ್ಯ ಮಸೂದೆ ... | 5 |
| *ಭುಟ್ಟೋ ಪ್ರಕರಣ ... | 9 |
| *ಒಂದು ತಪ್ಪು ಭಾವನೆ ... | 23 |
| *ಅಹ್ಮದಿಯಾ ಖಲೀಫರ ಸಂದೇಶ ... | 24 |
| *ಸಂಪಾದಕರಿಗೆ ಪತ್ರ ... | 27 |
| *ಅಹ್ಮದಿಯಾ ವಾರ್ತೆಗಳು ... | 28 |
| *ಪುಸ್ತಕ ವಿಭಾಗ — ಇಸ್ಲಾಂ ಮತ ತತ್ತ್ವಜ್ಞಾನ | |

ಮಂಗಳೂರಿನ ನೆಹರೂ ಮೈದಾನದಲ್ಲಿ ನಡೆದ 9ನೇ ಅಖಿಲ ಭಾರತ ಕೈಗಾರಿಕಾ ಮತ್ತು ಕೃಷಿ ಪ್ರದರ್ಶನವನ್ನು ಉದ್ಘಾಟಿಸಿದ ಕರ್ನಾಟಕ ಕೃಷಿ ಸಚಿವರಾದ ಶ್ರೀ ಕೆ. ಎಚ್. ರಂಗನಾಥರವರು. 'ಬುಕ್ ಸೆಂಟರ್ ಅಹ್ಮದಿಯಾ'ವನ್ನು ಸಂದರ್ಶಿಸಿದಾಗ ಸಚಿವರಿಗೆ ಖುರ್‌ಆನಿನ ಇಂಗ್ಲಿಷ್ ಭಾಷಾಂತರ ಮತ್ತು ಇತರ ಅಹ್ಮದಿಯಾ ಸಾಹಿತ್ಯಗಳನ್ನು ಕಾಣಿಕೆಯಾಗಿ ನೀಡಲಾಯಿತು.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪುಟ: 5 | ಎಪ್ರಿಲ್–ಜೂನ್ 1979 / ಶಹಾದತ್–ಇಹ್‌ಸಾನ್ 1358 | ಸಂಚಿಕೆ: 1

## ಯುಗರಶ್ಮಿಯ ಐದನೆಯ ವಯಸ್ಸು

ಈ ಸಂಚಿಕೆಯೊಂದಿಗೆ "ಯುಗರಶ್ಮಿ" ತನ್ನ ಐದನೆಯ ಪುಟ್ಟ ಹೆಜ್ಜೆಯನ್ನಿಡುತ್ತಿದೆ. ಈ ಶುಭ ಸಂದರ್ಭದಲ್ಲಿ ನಾವು ಸರ್ವಶಕ್ತನಾದ ಅಲ್ಲಾಹು ನಮಗಿತ್ತ ನೆರವಿವಾಗಿ ಅವನನ್ನು ಕೊಂಡಾಡುತ್ತೇವೆ, ಹಾಗೂ ನಮ್ಮ ವಾಚಕರಿಗೂ ಅಭ್ಯುದಯ ಕಾಂಕ್ಷಿಗಳಿಗೂ ಶುಭಕಾಮನೆಗಳನ್ನು ಬಯಸುತ್ತೇವೆ.

ಇಸ್ಲಾಮಿನ ಹೆಸರು ಇಂದು ಅತ್ಯಂತ ಕಳಂಕಿತವಾಗಿದೆ. ಇಸ್ಲಾಮಿನ ಶತ್ರುಗಳ ಹಾಗೆಯೇ 'ಮಿತ್ರ'ರೆಂದು ಹೇಳಿಕೊಳ್ಳುವವರು ಸಹ ಇಂದು ಇಸ್ಲಾಮಿನ ಮುಖಕ್ಕೆ ಕೆಸರನ್ನೆರಚುತ್ತಿದ್ದಾರೆಂಬುದು ಒಂದು ಕಟುಸತ್ಯವಾಗಿದೆ. ಇಂದಿನ ಲೋಕವು 'ಇಸ್ಲಾಂ ಧರ್ಮ'ದ 'ಕರಾಳ ಕೃತ್ಯ'ಗಳನ್ನು ಭಯಗ್ರಸ್ತವಾಗಿ ವೀಕ್ಷಿಸುತ್ತಿದೆ.

ಆದರೆ ಇಸ್ಲಾಂ ಕ್ರೂರ ಧರ್ಮವೇ? ಇಸ್ಲಾಮಿನ ಮುಖಕ್ಕೆ ಬಳಿಯಲಾದ ಮಸಿಯನ್ನು ತೊಳೆದು ಅದರ ಸುಂದರ ರೂಪವನ್ನು ಲೋಕಕ್ಕೆ ತೋರಿಸಿಕೊಡುವ ಹೊಣೆ ಮುಸ್ಲಿಮರೆಂದು ಅಭಿಮಾನಗೊಳ್ಳುವ ಎಲ್ಲರಿಗೂ ಇಂದು ಇನ್ನೊಮ್ಮೆ ಬಂದೊದಗಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಿಸಬೇಕೆಂದು ಯುಗರಶ್ಮಿಗೆ ಅಭಿಲಾಷೆ ಇದೆ. ನಮ್ಮ ಇಚ್ಛೆಯನ್ನು ಅಲ್ಲಾಹು ಪೂರೈಸಿಕೊಡಲಿಯೆಂದು ಆ ಸರ್ವವಲ್ಲಭನನ್ನು ನಾವು ಬೇಡಿಕೊಳ್ಳುತ್ತೇವೆ.

—ಸಂಪಾದಕ.

# * ವಿವೇಕ ಮತ್ತು ವಿಶ್ವಾಸ *

ಪರಲೋಕದಲ್ಲಿ ಶಾಶ್ವತ ಆನಂದಕ್ಕೋ ನರಕ ಯಾತನೆಗೋ ಕಾರಣೀಭೂತವಾಗುವ ವಿಶ್ವಾಸಗಳನ್ನೂ ತತ್ವಗಳನ್ನೂ ಸರಿಯಾಗಿ ಅನ್ವೇಷಣೆ ಮಾಡಿ ತಿಳಿದುಕೊಂಡು ಅನಂತರ ಸತ್ಯವಾದುದನ್ನು ಸ್ವೀಕರಿಸಿ ಅಸತ್ಯವಾದುದನ್ನು ಉಪೇಕ್ಷಿಸುವಾಗ ಒಬ್ಬ ಮನುಷ್ಯನ ಯಥಾರ್ಥ ಜ್ಞಾನ ಮತ್ತು ಬುದ್ಧಿಶಾಲಿತ್ವ ವ್ಯಕ್ತವಾಗುತ್ತದೆ. ತಾನು ಕೈಗೊಂಡ, ಮೋಕ್ಷಕ್ಕೆ ಮೂಲಕಾರಣವಾಗಿರುವ ವಿಶ್ವಾಸ ಸಿದ್ಧಾಂತಗಳನ್ನು ಸುಶಕ್ತ ಹಾಗೂ ಸುಸ್ಥಿರವಾದ ಅಡಿಪಾಯದಲ್ಲಿ ಅವನು ಭದ್ರಪಡಿಸಬೇಕಾದುದು ಅತ್ಯಾವಶ್ಯಕವಾಗಿದೆ. ಅದು ಕೇವಲ ತನ್ನ ತಾಯಿಯಿಂದ ಅಥವಾ ದಾಯಿಯಿಂದ ಬಾಲ್ಯದಲ್ಲಿ ಕಲಿತ ಪಾಠಗಳನ್ನು ಮಾತ್ರ ಆಧಾರವಾಗಿರಿಸಿಕೊಂಡದ್ದಾಗಿರಬಾರದು. ಏಕೆಂದರೆ, ಸತ್ಯವೆಂಬುದಕ್ಕೆ ಒಂದು ಚಿಕ್ಕ ರುಜುವಾತಾದರೂ ಇಲ್ಲದೆ ಕೇವಲ ಮಿಥ್ಯಾಸಂಕಲ್ಪಗಳನ್ನೂ ವಿಶ್ವಾಸಭ್ರಮೆಗಳನ್ನೂ ಆಶ್ರಯಿಸಿಕೊಂಡಿರುವುದು ಸ್ವಯಂ ವಂಚಿಸಲ್ಪಡಲಿಕ್ಕೆಯೇ ಹೇತುವಾಗುತ್ತದೆ. ತಮ್ಮ ಮತಗ್ರಂಥಗಳನ್ನಾಗಲಿ ಅದರಲ್ಲಿ ಅಡಕವಾದ ಸಿದ್ಧಾಂತಗಳನ್ನಾಗಲಿ ಸ್ವೀಕರಿಸುವುದರಿಂದ ಮಾತ್ರ ಮೋಕ್ಷ ಲಭಿಸುವುದೆಂದು ನಂಬಿ ಇತರ ಎಲ್ಲಾ ಗ್ರಂಥಾವಲಂಬಿಗಳು ಶಾಶ್ವತ ನರಕವನ್ನು ಹೊಂದುವರೆಂದು ಘೋಷಿಸುವವರು ತಮ್ಮ ವಾದಗಳನ್ನು...... ಬುದ್ಧಿಪರವಾಗಿಯೂ ಸಮರ್ಥಿಸಲಿಕ್ಕೆ ಪ್ರಾಪ್ತರಾಗಿರಬೇಕೆಂದು ವಿವೇಕವಿದ್ದವರೆಲ್ಲಾ ಒಪ್ಪುವರು. ದೈವವಚನಗಳು ಯಾವಾಗಲೂ ವಿಶ್ವಸನೀಯಗಳೆಂದಾದರೂ ವಿಶ್ವಾಸ ದಾರ್ಢ್ಯತೆಯ ಅತ್ಯುನ್ನತ ಸ್ಥಾನಗಳಿಗೆ ಮನುಷ್ಯನು ಏರುವುದು ದಿವ್ಯ ಪ್ರಕಟನೆಗಳ ಮೂಲಕವೇ ಆಗಿದ್ದರೂ ವ್ಯಕ್ತ ಮತ್ತು ಪ್ರತ್ಯಕ್ಷವಾದ ರೀತಿಯಲ್ಲಿ ಸಂಪೂರ್ಣ ತಪ್ಪೆಂದು ರುಜುವಾತುಪಡಿಸಿ ತೋರಿಸಲಾಗುವ ಒಂದು ಅಧ್ಯಾಪನೆ ದೈವಪ್ರೋಕ್ತವಾದ ಒಂದು ಗ್ರಂಥದಲ್ಲಿ ಕಾಣಲ್ಪಡುವ ಪಕ್ಷದಲ್ಲಿ ಆ ಅಧ್ಯಾಪನೆ ಎಂದಿಗೂ ಸತ್ಯವಾಗಿರಲಿಕ್ಕೆ ಸಾಧ್ಯವಿಲ್ಲ; ಮಾತ್ರವಲ್ಲ ಅಂತಹ ಅವಿವೇಕಯುತ ಅಧ್ಯಾಪನ ಅಡಕವಾದ 'ದೈವವಚನ' ಅಸತ್ಯವೋ ಸೇರಿಸಲ್ಪಟ್ಟದ್ದೋ ಕೃತ್ರಿಮವೋ ಆಗಿರಬಹುದು. ಒಂದು ಸಂಗತಿ ಸರಿಯೋ ತಪ್ಪೋ ಎಂದು ಮತ್ತು ಸಾಧ್ಯವೋ ಅಸಾಧ್ಯವೋ ಎಂದು ನಿರ್ಣಯಿಸುವುದು ವಿವೇಕದ ಮೂಲಕವಾದುದರಿಂದ ಮೋಕ್ಷಕ್ಕೆ ಸಂಬಂಧಿಸಿದ ತತ್ವಗಳ ಸತ್ಯಾಸತ್ಯತೆಗಳು ಸಹ ವಿವೇಕವನ್ನು ಆಧಾರವಾಗಿರಿಕೊಂಡು ಸ್ವೀಕರಿಸಲ್ಪಡಬೇಕು ಅಥವಾ ತಳ್ಳಲ್ಪಡಬೇಕು. ವಿಭಿನ್ನ ಮತಪ್ರಮಾಣಗಳು ಸತ್ಯವಾದುವುಗಳೆಂದು ಸಾಕ್ಷ್ಯಪಡಿಸಲು ಸಾಧ್ಯವಾಗದೆ ಬುದ್ಧಿಪರವಾಗಿ ಅವು ಅಸತ್ಯ ಮತ್ತು ಅಪ್ರಾಯೋಗಿಕವೆಂದು ಸ್ಪಷ್ಟವಾಗುವಾಗ ಅಂತಹ ಮತಾನುಯಾಯಿಗಳ ಪೈಕಿ ಒಬ್ಬನ ವಿಶ್ವಾಸ ಸರಿಯೆಂದೂ ಮತ್ತೊಬ್ಬನ ವಿಶ್ವಾಸ ತಪ್ಪೆಂದೂ........ ನಮಗೆ ಹೇಗೆ ತಿಳಿಯಲು ಸಾಧ್ಯ? ಸತ್ಯ ಯಾವುದು ಅಸತ್ಯ ಯಾವುದು ಎಂದು ಬುದ್ಧಿಯ ಸಹಾಯದಿಂದ ತಿಳಿಯಲು ನಮಗೆ ಸಾಧ್ಯವಾಗುವುದಿಲ್ಲವಾದರೆ, ಸತ್ಯಾನ್ವೇಷಿಯಾದ ಒಬ್ಬನಿಗೆ ಸತ್ಯವನ್ನು ತಿಳಿದು ಅದನ್ನು ಸ್ವೀಕರಿಸಲಿಕ್ಕೂ ಅಸತ್ಯವನ್ನು ಉಪೇಕ್ಷಿಸಲಿಕ್ಕೂ ಹೇಗೆ ಸಾಧ್ಯವಾಗುವುದು? ಅಂತಹ ಮತಗಳನ್ನು ಒಬ್ಬ ತ್ಯಜಿಸುವನಾದರೆ, ದೇವರ ಸನ್ನಿಧಿಯಲ್ಲಿ ಅವನು ಏಕೆ ತಪ್ಪುಗಾರನಾಗುತ್ತಾನೆ? (ಬರಾಹೀನೆ ಅಹ್ಮದಿಯಾ).

—ಹಝ್ರತ್ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

## ನೈತಿಕ ಮೌಲ್ಯಗಳು

1. ಒಳ್ಳೆಯ ನೆರೆಕರೆಯವ, ಗುಣವತಿಯಾದ ಪತ್ನಿ, ಒಳ್ಳೆಯ ಸವಾರಿ, ವಿಶಾಲ ವಾಸಸ್ಥಳ ಇವು ನಾಲ್ಕು ಸೌಭಾಗ್ಯದ ಲಕ್ಷಣಗಳಾಗಿವೆ. ದುಷ್ಟ ನೆರೆಯವ, ದುರ್ಗುಣೆಯಾದ ಹೆಂಡತಿ, ಕೆಟ್ಟ ಸವಾರಿ, ಇಕ್ಕಟ್ಟಿನ ನಿವಾಸ ಇವು ನಾಲ್ಕು ದೌರ್ಭಾಗ್ಯದ ಕುರುಹುಗಳಾಗಿವೆ.

2. ಒಂದು ಊರನ್ನು ಅದರ ಹೆಸರಿನಿಂದ ಮತ್ತು ಒಬ್ಬ ವ್ಯಕ್ತಿಯನ್ನು ಆತನ ಸಂಗಡಿಗರ ಹೆಸರಿನಿಂದ ನೆನ ಪಿಟ್ಟುಕೊಳ್ಳಿರಿ.

3. ಸಜ್ಜನರು ಯಾರಾದರೂ ಎಲ್ಲಿದ್ದರೂ ನನಗೆ ಅತ್ಯಂತ ಸಮೀಪದವರಾಗಿದ್ದಾರೆ.

4. ಸದ್ವರ್ತನೆಯ ಕಟ್ಟಡವನ್ನು ಪೂರ್ತೀಕರಿಸು ವರೆ ನನ್ನನ್ನು ಕಳುಹಿಸಲಾಗಿದೆ.

5. ಒಂದು ಸತ್ಕರ್ಮವನ್ನು ಮಾಡಲು ಒಬ್ಬನು ತೀರ್ಮಾನಿಸಿ ಅವನಿಗದು ಮಾಡಲು ಸಾಧ್ಯವಾಗದ ಪಕ್ಷ ದಲ್ಲಿ ಅಲ್ಲಾಹು ಅದನ್ನು ಅವನು ಮಾಡಿದ ಪೂರ್ಣ ಪುಣ್ಯ ಕರ್ಮವೆಂದು ಎಣಿಸುವನು. ತೀರ್ಮಾನಿಸಿದ ನಂತರ ಅದನ್ನು ಮಾಡಲು ಅವನು ಉದ್ಯುಕ್ತನಾಗುವನಾದರೆ ಅಲ್ಲಾಹು ಅದನ್ನು ಹತ್ತರಷ್ಟು ಅಥವಾ ಏಳು ನೂರರಷ್ಟು ಮಾಡಿ ಎಣಿಸುವನು. ತದ್ವಿರುದ್ಧವಾಗಿ, ಒಬ್ಬನು ಪಾಪಕೃತ್ಯದ ಕುರಿತು ಆಲೋಚಿಸಿದ ನಂತರ ಅದನ್ನು ಮಾಡದಿದ್ದಲ್ಲಿ, ಅದನ್ನು ಅವನ ಒಂದು ಸತ್ಕ ರ್ಮವೆಂದು ಅಲ್ಲಾಹು ಎಣಿಸುವನು. ಅವನು ಆ ದುಷ್ಕೃತ್ಯವನ್ನು ಮಾಡಲು ತೊಡಗಿದರೆ ಅಲ್ಲಾಹು ಅದ ನ್ನು ಒಂದು ಪಾಪವೆಂದು ಎಣಿಸುವನು.

6. ಒಂದು ಜನತೆ ನಾಶಹೊಂದಿತು ಎಂದು ಯಾರಾದರೂ ಹೇಳಿದರೆ ಆ ಜನರನ್ನು ನಾಶಪಡಿಸುವವರ ಪೈಕಿ ಒಬ್ಬ ಅವನೇ ಆಗುತ್ತಾನೆ.

7. ಅನ್ಯನೊಬ್ಬನ ಪತ್ರದಲ್ಲಡಕವಾದ ವಿಷಯ ವನ್ನು ಅವನ ಅನುಮತಿಯಿಲ್ಲದೆ ತಿಳಿಯಲು ಪ್ರಯತ್ನಿಸು ವವನು ನರಕಕ್ಕೆರಗುವನು.

8. ಪೈಗಂಬರರು ಆಯಿಷಾರವರೊಡನೆ ಹೇಳಿ ದರು: ಸಣ್ಣ ತಪ್ಪುಗಳ ಬಗ್ಗೆ ಜಾಗ್ರತೆ ವಹಿಸಿಕೊಳ್ಳ ಬೇಕು. ಅವುಗಳ ಕುರಿತು ಸಹ ಲೆಕ್ಕವಿಡಲು ಅಲ್ಲಾಹು ಕೆಲವರನ್ನು ನೇಮಿಸಿರುವನು.

9. ಒಳಿತನ್ನುಂಟುಮಾಡುವ ಪ್ರಯತ್ನದಲ್ಲಿ ನಿರಂತರ ಪ್ರಾರ್ಥನೆಯಲ್ಲಿ ಮಗ್ನನಾದ ಒಬ್ಬನ ಕುರಿತು ಮತ್ತು ಕೆಡುಕಿನಿಂದ ಸದಾ ದೂರವಿರುವ ಇನ್ನೊಬ್ಬನ ಬಗ್ಗೆ ಹೇಳಲ್ಪಟ್ಟಾಗ, ಪೈಗಂಬರರು ಹೀಗೆ ನುಡಿದರು: ಮೊದಲಿನವನು ಎರಡನೆಯವನಷ್ಟು ಉನ್ನತನಲ್ಲ.

10. ಪ್ರಾರ್ಥನೆ, ವ್ರತಾನುಷ್ಠಾನ ಮತ್ತು ದಾನ ಧರ್ಮಗಳಿಗಿಂತ ಎಲ್ಲಾ ಮಿಗಿಲಾದ ಒಂದು ಸತ್ಕಾರ್ಯ ವನ್ನು ನಾನು ನಿಮಗೆ ಹೇಳಿಕೊಡಲೇ? ಸೌಹಾರ್ದವನ್ನು ಬೆಳೆಸುವುದಾಗಿದೆ ಅದು. ಏಕೆಂದರೆ ಭಿನ್ನತೆ ನಾಶಕಾರಿ ಯಾಗಿದೆ.

(ಸರ್ ಮುಹಮ್ಮದ್ ಝಫರುಲ್ಲಾ ಖಾನರ **Wisdom of the Holy Prophet Muhammad** ಎಂಬ ಪುಸ್ತಕದಿಂದ ಆಯ್ದುದು).

# • ಇಸ್ಲಾಂ ಪರಿಪೂರ್ಣ ಮತಸ್ವಾತಂತ್ರ್ಯವನ್ನು ನೀಡುತ್ತದೆ •

—ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್.

**(1979ನೇ ಇಸವಿ ಮಾರ್ಚ್ 9ರಂದು ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ರಬ್ವಾದ ಮಸ್ಜಿದ್ ಅಖ್ಸಾದಲ್ಲಿ ಮಾಡಿದ ಖುತ್‌ಬಾ ಭಾಷಣದ ಸಾರಾಂಶವನ್ನು ಇಲ್ಲಿ ಕ್ರೋಢೀಕರಿಸಲಾಗಿದೆ. —ಸಂ.)**

ಹಝ್ರತ್ ಸಾಹೇಬರು ಸೂರತುಲ್ ಬಖರದ 120ನೇ ವಚನವನ್ನು ಓದಿದರು. ಅದು ಈ ರೀತಿಯಾಗಿದೆ:

ಇನ್ನಾ ಅರ್ಸಲ್ನಾಕ ಬಿಲ್ ಹಕ್ಕಿ ಬಶೀರನ್ ವ್ವನ ದೀರನ್ ವ್ವಲಾ ತುಸ್‌ಅಲು ಅನ್ ಅಸ್‌ಹಾಬಿಲ್ ಜಹೀಂ" -"(ಎಲೈ ಮುಹಮ್ಮದ್) ನಾವು ನಿನ್ನನ್ನು ಸುವಾರ್ತೆಯನ್ನು ತಿಳಿಸುವವನಾಗಿಯೂ ಶಿಕ್ಷೆಯ ಕುರಿತು ಮುನ್ನೆಚ್ಚರಿಕೆ ನೀಡುವವನಾಗಿಯೂ ಸತ್ಯ ಸಂದೇಶದ ಸಹಿತ ನಿಯೋಗಿಸಿದೆವು; ನರಕವಾಸಿಗಳ ಕುರಿತು ನಿನ್ನೊಡನೆ ಪ್ರಶ್ನಿಸಲಾಗುವುದಿಲ್ಲ."

ಈ ವಚನದ ಗಹನವಾದ ವ್ಯಾಖ್ಯಾನವನ್ನು ಹೇಳುತ್ತಾ ಅವರು ಇಸ್ಲಾಂ ಸಂಪೂರ್ಣ ಮತ ಸ್ವಾತಂತ್ರ್ಯವನ್ನು ನೀಡುತ್ತದೆಂದು ಸ್ಪಷ್ಟಪಡಿಸಿದರು.

"ಅಸ್‌ಹಾಬುಲ್ ಜಹೀಂ" ಮತ್ತು 'ಅಸ್‌ಹಾಬುನ್ನಾರ್' ಎಂಬ ಪದಪ್ರಯೋಗ ಪವಿತ್ರ ಖುರ್‌ಆನಿನ ಇತರ ಕೆಲವು ವಚನಗಳಲ್ಲಿ ಸಹ ಬಂದಿರುತ್ತದೆ. ಸೂರಃ ಮಾಇದದ 11ನೇ ವಚನದಲ್ಲೂ ಸೂರಃನಿಸಾಅದ 146 ನೇ ವಚನದಲ್ಲೂ ಸೂರಃಬಖರದ 218ನೇ ವಚನದಲ್ಲೂ ಈ ಬಗ್ಗೆ ಪ್ರಸ್ತಾಪಿಸಲಾಗಿದೆ. ಆ ವಚನಗಳಲ್ಲಿ ಮೂರು ವಿಧ ಜನರ ಕುರಿತು ನರಕವಾಸಿಗಳೆಂದು ಹೇಳಲಾಗಿದೆ. ಒಂದು, ಸತ್ಯವನ್ನು ಅಲ್ಲಗಳೆಯುವವರು; ಎರಡು, ಕಪಟ ವಿಶ್ವಾಸಿಗಳು; ಮೂರು, ಮುರ್ತದ್ದುಗಳು ಅಥವಾ ಮತತ್ಯಾಗಿಗಳು. ಈ ಪ್ರಕಾರ, ಮೇಲೆ ಹೇಳಿದ ಸೂರತುಲ್ ಬಖರದ 120ನೇ ವಚನದಲ್ಲಿ 'ನರಕವಾಸಿಗಳ ಕುರಿತು ನಿನ್ನೊಡನೆ ಪ್ರಶ್ನಿಸಲಾಗುವುದಿಲ್ಲ' ಎಂದು ಪ್ರಸ್ತಾಪಿಸುತ್ತಾ ಅಲ್ಲಾಹು ಬೋಧಿಸುವುದೇನೆಂದರೆ: 'ಒಬ್ಬನು ಪೈಗಂಬರ (ಸ.)ರ ಸತ್ಯಪ್ರಬೋಧನೆಯನ್ನು ಕೇಳಿಯೂ ಸ್ವೀಕರಿಸದೆ ಅವಿಶ್ವಾಸದಲ್ಲಿ ದೃಢವಾಗಿ ನಿಲ್ಲುವನಾದರೆ, ಅಥವಾ ಬಾಹ್ಯರೂಪದಲ್ಲಿ ಮಾತ್ರ ನಂಬಿಕೆಯನ್ನು ತೋರಿಸಿ ಕಾಪಟ್ಯದಲ್ಲಿ ಮುಂದುವರಿಯುವನಾದರೆ ಅಥವಾ ನಂಬಿದ ನಂತರ ಆ ವಿಶ್ವಾಸವನ್ನು ತ್ಯಜಿಸಿ ಸತ್ಯವನ್ನು ನಿರಾಕರಿಸುವ ದಾರಿಗೆ ಸಾಗುವನಾದರೆ ಮನುಷ್ಯನ ಈ ಮೂರು ರೀತಿಯ ವರ್ತನೆಯ ಬಗ್ಗೆ ಪೈಗಂಬರರೊಡನೆ ಪ್ರಶ್ನಿಸಲಾಗುವುದಿಲ್ಲ'. ಪೈಗಂಬರರ ಕರ್ತವ್ಯ ಸಂದೇಶವನ್ನು ತಲಪಿಸುವುದು ಮಾತ್ರವಾಗಿದೆ. ಬಲಪ್ರಯೋಗಿಸಿ ಜನರನ್ನು ಇಸ್ಲಾಮಿಗೆ ಸೇರಿಸಲಿಕ್ಕೋ ಕಪಟವಿಶ್ವಾಸಿಗಳನ್ನು ಶಕ್ತಿಪ್ರಯೋಗಿಸಿ ಕಾಪಟ್ಯದಿಂದ ತಡೆಯಲಿಕ್ಕೋ ಮತತ್ಯಾಗಿಗಳನ್ನು ನಿರ್ಬಂಧಿಸಿ ಇಸ್ಲಾಂ ಧರ್ಮದಲ್ಲೇ ಉಳಿಯುವಂತೆ ಮಾಡಲಿಕ್ಕೋ ಪೈಗಂಬರರಿಗೆ ಅಪ್ಪಣೆ ಕೊಡಲಾಗಿಲ್ಲ. ಪೈಗಂಬರರಿಗೆ ಅಥವಾ ಇತರರಿಗೆ ಮನುಷ್ಯರ ಹೃದಯಗಳ ಮೇಲೆ ನಿರ್ಬಂಧಪೂರ್ವಕ ಅಧಿಕಾರ ಚಲಾಯಿಸುವ ಹಕ್ಕು ನೀಡಲ್ಪಟ್ಟಿಲ್ಲ. ಅಲ್ಲಾಹು ಪ್ರತಿಯೊಬ್ಬ ಮನುಷ್ಯನಿಗೆ ಅವನು ಇಚ್ಛಿಸಿದ ಪಕ್ಷದಲ್ಲಿ ಹೃದಯಂಗಮವಾಗಿ ನಂಬಿಕೊಂಡು ಯಥಾರ್ಥದಲ್ಲಿ 'ಮೂಮಿನ್' (ಸತ್ಯವಿಶ್ವಾಸಿ) ಮತ್ತು ಸ್ವರ್ಗದ ಹಕ್ಕುದಾರ ಆಗಲು ಸ್ವಾತಂತ್ರ್ಯ ನೀಡಿರುವನು. ಅವನು ಇಚ್ಛಿಸಿದಂತೆ ಅವಿಶ್ವಾಸದಲ್ಲೇ ಸ್ಥಿರವಾಗಿ ನಿಲ್ಲಲಿಕ್ಕೂ ಅಥವಾ ನಂಬಿದ ನಂತರ ಮತತ್ಯಾಗಮಾಡಿಕೊಂಡು ಸ್ವಯಂ ದೇವರ ಶಿಕ್ಷೆಗೆ ಗುರಿಯಾಗಲಿಕ್ಕೂ ಅವನಿಗೆ ಸ್ವಾತಂತ್ರ್ಯವಿದೆ. ಇದು ಎಲ್ಲಾ ಮನುಷ್ಯರಿಗೂ ನಂಬಿಕೆಯ ಕಾರ್ಯದಲ್ಲಿ ಪರಿಪೂರ್ಣ ಸ್ವಾತಂತ್ರ್ಯವಿದೆಯೆಂದು ತೋರಿಸುವ ದರ್ಪಣವಾಗಿದೆ".

"ಸಂಕ್ಷಿಪ್ತವಾಗಿ, 'ನರಕವಾಸಿಗಳ ಕುರಿತು ನಿನ್ನೊಡನೆ ಪ್ರಶ್ನಿಸಲಾಗುವುದಿಲ್ಲ" ಎಂಬ ವಚನ ಮನುಷ್ಯನಿಗೆ ಸಂಪೂರ್ಣ ಮತಸ್ವಾತಂತ್ರ್ಯವಿದೆಯೆಂಬುದಕ್ಕೆ ಸಾಕ್ಷ್ಯವಾ

(5ನೇ ಪುಟಕ್ಕೆ)

# ಭಾರತೀಯ ಸಂವಿಧಾನ ಮತ್ತು ಮತಸ್ವಾತಂತ್ರ್ಯ ಮಸೂದೆ

ಭಾರತೀಯ ಸಂವಿಧಾನವು ಭಾರತೀಯ ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ನೀಡಿದ್ದು ಅವುಗಳ ಮೂಲಕ ವ್ಯಕ್ತವಾದ ಮತ್ತು ಅಸಂದಿಗ್ಧವಾದ ಭಾಷೆಯಲ್ಲಿ ಪ್ರತಿಯೊರ್ವ ಭಾರತೀಯನು ಅವನಿಚ್ಛೆ ಇರುವ ಮತವನ್ನು ಸ್ವೀಕರಿಸಿ ಅದರ ಪ್ರಕಾರ ಅನುಷ್ಠಾನಕರ್ಮಗಳನ್ನು ಕೈಗೊಳ್ಳಬಹುದೆಂದೂ ಅದರ ಪ್ರಚಾರ ಮಾಡಬಹುದೆಂದೂ ಸ್ಪಷ್ಟಪಡಿಸುತ್ತಿರುವಾಗ ಪಾರ್ಲಿಮೆಂಟಿನ ಒಬ್ಬ ಸದಸ್ಯರಾದ ಶ್ರೀ ಓ. ಪಿ. ತ್ಯಾಗಿಯವರು "ಮತಸ್ವಾತಂತ್ರ್ಯ ಬಿಲ್" ಎಂಬ ಒಂದು ಖಾಸಗಿ ಮಸೂದೆಯನ್ನು ಪಾರ್ಲಿಮೆಂಟಿನ ಮುಂದೆ ತರುವ ಅಗತ್ಯವಾದರೂ ಏನಿತ್ತೆಂದು ತಿಳಿಯುವುದಿಲ್ಲ. ಈ ಮಸೂದೆ ಪಾರ್ಲಿಮೆಂಟಿನ ಮಂಜೂರಾತಿಗೆ ಬರಲಿರುವುದು ಇನ್ನಷ್ಟು ಆಶ್ಚರ್ಯಕರವಾಗಿದೆ.

ಈ ಮಸೂದೆ ವೃತ್ತಪತ್ರಿಕೆಗಳಲ್ಲಿ ಬಹಳ ಚರ್ಚೆಗೆ ಗುರಿಯಾಗಿದೆ. ಮತ ಪ್ರಚಾರ ಕಾರ್ಯಗಳನ್ನು ಕೈಗೊಂಡಿರುವ ಮತಧರ್ಮಗಳ ಅನುಯಾಯಿಗಳು ಈ ಮಸೂದೆಯಿಂದ ಬಹಳ ಗಾಬರಿಗೊಂಡಿರುವರು. ಇದಕ್ಕೆ ಕಾರಣವೇನೆಂದರೆ ಹೆಸರಿಗೆ ಇದು "ಮತ ಸ್ವಾತಂತ್ರ್ಯ ಮಸೂದೆ" ಆಗಿದ್ದರೂ ಕ್ರಿ. ಶ. 1950ನೆ ಇಸವಿಯಲ್ಲಿ ಅಂಗೀಕೃತವಾದ ಭಾರತೀಯ ಸಂವಿಧಾನ ನೀಡಿರುವ ಮತ ಸ್ವಾತಂತ್ರ್ಯವನ್ನು ಭಂಗಗೊಳಿಸಿ ಯಾವನೇ ಭಾರತೀಯ ನಾಗರಿಕನನ್ನು ಅವನಿಗಿತ್ತಿರುವ ಮತ ಪ್ರಚಾರ ಸ್ವಾತಂತ್ರ್ಯದಿಂದ ವಂಚಿತನನ್ನಾಗಿ ಇದರಿಂದ ಮಾಡಬಹುದಾಗಿದೆ. ನಾವು ಈ ಮಸೂದೆಯ ಬಗ್ಗೆ ಗಾಢವಾಗಿ ಪರ್ಯಾಲೋಚಿಸಿದ್ದೇವೆ ಈ ಮಸೂದೆ ಅಂಗೀಕೃತವಾದರೆ ಉಂಟಾಗುವ ಪರಿಣಾಮಗಳ ಕುರಿತುಸಹ ನಾವು ಅಧ್ಯಯನ ಮಾಡಿದ್ದೇವೆ. ಭಾರತೀಯ ಸಂವಿಧಾನ ನೀಡಿರುವ ಮತ ಸ್ವಾತಂತ್ರ್ಯದ ಮೂಲಭೂತ ಹಕ್ಕಿಗೆ ಅನುಸಾರವಾಗಿ ಯಾರಾದರೂ ಮತ ಪರಿವರ್ತನೆಯನ್ನು ಇಚ್ಛಿಸುವುದಾದರೆ ಈ ಮಸೂದೆ ಅಂಗೀಕೃತವಾದ ಪಕ್ಷದಲ್ಲಿ ಆತನ ದಾರಿಗೆ ಆತಂಕವನ್ನೊಡ್ಡುವುದು.

ಮೇಲೆ ಸೂಚಿಸಿದ ಮಸೂದೆಯಲ್ಲಿ ಬಲಾತ್ಕಾರ, ಮೋಸ, ಮತ್ತು ಆಶೆ ಆಮಿಷಗಳ ಮೂಲಕ ಮತಾಂತರಗೊಳಿಸುವುದನ್ನು ಅಪರಾಧವೆಂದು ಪರಿಗಣಿಸಲಾಗಿದೆ. ಆದರೆ ಬಲತ್ಕಾರ, ಮೋಸ, ಮತ್ತು ಆಶೆ ಆಮಿಷಗಳಿಗೆ ಮೇಲಿನ ಮಸೂದೆಯಲ್ಲಿ ನೀಡಲಾಗಿರುವ ವಿವರಣೆ 29 ವರ್ಷಗಳ ಮೊದಲು ಭಾರತೀಯ ನಾಗರಿಕರಿಗೆ ನೀಡಲಾಗಿರುವ ಮೂಲಭೂತ ಹಕ್ಕುಗಳನ್ನು ನಾನಾವಿಧವಾಗಿ ಭಂಗಗೊಳಿಸಿದಂತಾಗುತ್ತದೆ. ಇದು ಜನತೆಯ ಸ್ವಯಂ ಮನೋನಿರ್ಧಾರದ ಸ್ವಾತಂತ್ರ್ಯ ಮತ್ತು ಮತಪರಿವರ್ತನೆಯ ಮೂಲಭೂತ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದೆ.

ಯಾವುದೇ ಮತವನ್ನು ಸ್ವೀಕರಿಸುವುದು ಅಥವಾ ಪ್ರಚಾರಪಡಿಸುವುದು ಮನಃಸ್ಸಾಕ್ಷಿ ಪ್ರಕಾರವಾಗಿದೆ. ಯಾವುದೇ ಮತವನ್ನು ಯಾವನೊಬ್ಬ ವ್ಯಕ್ತಿಯ ಹೃದಯದ ಮೇಲೆ ಬಲಾತ್ಕಾರವಾಗಿ ಹೇರುವುದು ಸಾಧ್ಯವಲ್ಲ ಮತ್ತು ಈ ರೀತಿಯ ಬಲಾತ್ಕಾರದ ವಿಧಿವಿಧಾನವನ್ನನುಸರಿಸಿ

---

(4ನೇ ಪುಟದಿಂದ)

### ಇಸ್ಲಾಂ ಪರಿಪೂರ್ಣ ಮತಸ್ವಾತಂತ್ರ್ಯವನ್ನು ನೀಡುತ್ತದೆ

ಗಿದೆ". ಇದಕ್ಕೆ ಆಧಾರವಾಗಿ ಪುರಾತನ ಅರಬಿ ತಫ್‌ಸೀರ್ (ವ್ಯಾಖ್ಯಾನ ಗ್ರಂಥ)ಗಳ ಅನೇಕ ಪ್ರಸ್ತಾವನೆಗಳನ್ನು ಹಝ್‌ರತ್ ಸಾಹೇಬರು ಉದ್ಧರಿಸಿದರು. "ಪ್ರಶಸ್ತರಾದ ಹಲವು ಪ್ರಾಚೀನ ವ್ಯಾಖ್ಯಾನಗಾರರು ಈ ವಚನದಿಂದ, ಇಸ್ಲಾಮಿನಲ್ಲಿ ನಿರ್ಬಂಧಕ್ಕೆ ಯಾವ ಅವಕಾಶವೂ ಇಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಯಾರನ್ನೂ ನಿರ್ಬಂಧಿಸಿ ಮುಸ್ಲಿಮನನ್ನಾಗಿ ಮಾಡಲಸಾಧ್ಯ. ಒಬ್ಬ ಕಪಟವಿಶ್ವಾಸಿಯ ಮನಸ್ಸನ್ನು ಶಕ್ತಿಪ್ರಯೋಗಿಸಿ ಸ್ವಚ್ಛಗೊಳಿಸಲಸಾಧ್ಯ. ಮತಪರಿತ್ಯಾಗಿಯನ್ನು ನಿರ್ಬಂಧವಾಗಿ ಮತದಲ್ಲೇ ಹಿಡಿದು ನಿಲ್ಲಿಸುವುದೂ ಸಾಧ್ಯವಿಲ್ಲ" ಹಝ್‌ರತ್ ಸಾಹೇಬರು ಪ್ರಸ್ತಾಪಿಸಿದರು. ●

ಯಾವುದೇ ಮತಧರ್ಮ ಪ್ರಪಂಚದಲ್ಲಿ ಹಬ್ಬಿಯೂ ಇಲ್ಲ. ಯಾವುದೇ ಮತದ ಯಥಾರ್ಥ ಅನುಯಾಯಿಗೆ ತನ್ನ ಮತದಲ್ಲಿ ಪೂರ್ಣ ನಂಬಿಕೆ ಇರುತ್ತದೆ ಮತ್ತು ಅವನ ದೃಷ್ಟಿಯಲ್ಲಿ ಅದೇ ಅತ್ಯುತ್ತಮ ಮತವಾಗಿರುತ್ತದೆ. ಅಂತಹ ವ್ಯಕ್ತಿ ಎಂದಿಗೂ ಯಾವುದೇ ಉಡುಗೊರೆಯ ಆಶೆಯಿಂದ ಅಥವಾ ಇನ್ನಾವುದೇ ಆಶೆ ಆಮಿಷಗಳಿಗೆ ಎರವಾಗಿ ಅಥವಾ ಯಾವುದೇ ಬಲಾತ್ಕಾರಕ್ಕೊಳಗಾಗಿ ಎಂದಿಗೂ ತನ್ನ ಮತವನ್ನು ತ್ಯಜಿಸಲಾರ. ಎಷ್ಟೋ ಜನರು ತಮ್ಮ ಧಾರ್ಮಿಕ ನಂಬಿಕೆಗಳಿಗಾಗಿ ಮರಣವನ್ನು ಬಲಿಕೊಡಲು ಇಷ್ಟಪಟ್ಟುದನ್ನು ಮತಧರ್ಮಗಳ ಚರಿತ್ರೆಗಳು ಸಾಕ್ಷಿವಹಿಸಿವೆ. ಅವರು ನಾನಾ ತರದ ಚಿತ್ರಹಿಂಸೆಗಳನ್ನು ಅನುಭವಿಸಿದರೂ ತಮ್ಮ ಮತವನ್ನೂ ನಂಬಿಕೆಗಳನ್ನೂ ತ್ಯಜಿಸಲು ತಯಾರಾಗಲಿಲ್ಲ. ವಸ್ತುಸ್ಥಿತಿ ಈ ರೀತಿ ಇರುವಾಗ ಒಬ್ಬ ವ್ಯಕ್ತಿಯನ್ನು ಬಲಾತ್ಕಾರ, ಮೋಸ, ಮತ್ತು ಆಶೆ ಆಮಿಷಗಳಿಂದ ಮತಪರಿವರ್ತನೆಗೊಳಿಸಲು ಹೇಗೆ ತಾನೆ ಸಾಧ್ಯ?

ಒಬ್ಬ ವ್ಯಕ್ತಿ ತನ್ನ ಹಿಂದಿನ ಮತವನ್ನು ತ್ಯಜಿಸಿ ಬೇರೆ ಮತವನ್ನು ಸ್ವೀಕರಿಸಲು ತಯಾರಾಗುವನಾದರೆ ಅದು ಆತನ ಸ್ವಂತ ಇಷ್ಟ ಮತ್ತು ಅಪೇಕ್ಷೆಯನ್ನು ಹೊಂದಿಕೊಂಡಿದೆ. ಒಬ್ಬ ವ್ಯಕ್ತಿ ಇನ್ನೊಂದು ಮತದ ಉಪದೇಶ, ಸದಾಚಾರ ಸಂಹಿತೆ, ನಡೆನುಡಿ, ಅನುಷ್ಠಾನ ವಿಧಿಗಳು, ಆರಾಧನಾ ರೀತಿಗಳು ಮತ್ತು ಸಂಸ್ಕಾರವನ್ನು ಅಧ್ಯಯನ ಮಾಡಿ, ಚರಿತ್ರೆಯ ಆಧಾರದಿಂದ ಮಾನವ ಜನಾಂಗಕ್ಕೆ ಆ ಮತ ಮಾಡಿದ ಸೇವೆಗಳನ್ನು ಗಣನೆಗೆ ತೆಗೆದುಕೊಂಡು ತನ್ನ ಸ್ವಂತ ಸ್ವತಂತ್ರ ಮನಃಸ್ಸಾಕ್ಷಿಯ ತೀರ್ಪಿನ ಪ್ರಕಾರ ಆ ಮತವನ್ನು ಸ್ವೀಕರಿಸಲು ತಯಾರಾದರೆ, ಲೋಕದ ಯಾವುದೇ ಶಕ್ತಿ ಅಥವಾ ಯಾವುದೇ ಲೌಕಿಕ ನಿಯಮ ಆತನನ್ನು ಮನಃಪರಿವರ್ತನೆಯಿಂದ ತಡೆಯಲು ಅಸಾಧ್ಯ. ಇದೇ ಕಾರಣದಿಂದ ಭಾರತದ ಸಂವಿಧಾನದಲ್ಲಿ ಪ್ರತಿಯೋರ್ವ ವ್ಯಕ್ತಿಗೆ ಅವನಿಗಿಷ್ಟಕರವಾದ ಮತವನ್ನು ಸ್ವೀಕರಿಸಲು ಸುಸ್ಪಷ್ಟವಾಗಿ ಅನುಮತಿಯನ್ನೀಯಲಾಗಿದೆ. ಪ್ರತಿಯೊಬ್ಬನಿಗೂ ಅವನವನ ಮತದ ಪ್ರಚಾರ ಮತ್ತು ಮತ ಸಂಬಂಧವಾದ ಸಾಹಿತ್ಯದ ಪ್ರಚಾರದ ಅನುಮತಿ ಇದೆ. ಅವರ ಮೇಲೆ ಯಾವುದೇ ನಿರ್ಬಂಧವಿಲ್ಲ.

ಶ್ರೀ ಓ. ಪಿ. ತ್ಯಾಗಿಯವರ ಪರಿಣತಿಯ ಕುರಿತು ನಮಗೆ ತಿಳಿದಿಲ್ಲ. ಆದರೆ ಪಾರ್ಲಿಮೆಂಟಿನ ಅಂಗೀಕಾರವನ್ನು ಪಡೆದ ನಮ್ಮ ಸಂವಿಧಾನವನ್ನು ರಚಿಸಿದ ಆದರಣೀಯರಾದ ನಮ್ಮ ರಾಷ್ಟ್ರ ನಾಯಕರು ಎಷ್ಟೋ ಹೆಚ್ಚು ಸೂಕ್ಷ್ಮ ದೃಷ್ಟಿಯುಳ್ಳವರಾಗಿದ್ದರು. ಡಾಕ್ಟರ್ ಅಂಬೇಡ್ಕರ್, ಡಾಕ್ಟರ್ ರಾಜೇಂದ್ರ ಪ್ರಸಾದ್ ಮತ್ತು ಅವರ ಇತರ ಎಲ್ಲಾ ಸಹವರ್ತಿಗಳು ಉನ್ನತ ಜ್ಞಾನವೇತ್ತರೂ ನಿಯಮತಜ್ಞರೂ ಆಗಿದ್ದರು. ಸಂವಿಧಾನ ವಿರಚಿತವಾಗಿ ಮೂವತ್ತು ವರ್ಷಗಳಾದ ನಂತರ ಶ್ರೀ ತ್ಯಾಗಿ ಒಂದು ಹೊಸ ಮಸೂದೆಯ ಮೂಲಕ ಪಾರ್ಲಿಮೆಂಟಿನ ಮುಂದೆ ತಂದಿರುವಂತಹ ಯಾವುದೇ ಸಂಗತಿಯಿರುತ್ತಿದ್ದರೆ ಅದನ್ನು ಸಂವಿಧಾನದ ರಚಕರಾದ ಈ ಮಹಾನ್ ವ್ಯಕ್ತಿಗಳು ಆಗಲೇ ಸೂಚಿಸುತ್ತಿದ್ದರು.

ನಮ್ಮ ಹಿರಿಯ ನೇತಾರರ ಸೂಕ್ಷ್ಮದೃಷ್ಟಿಯ ಫಲವಾಗಿ ನಮ್ಮ ರಾಷ್ಟ್ರಕ್ಕೆ ಅವರು ಸೆಕ್ಯುಲರ್ (ಜಾತ್ಯತೀತ) ಸರಕಾರೀ ಆಡಳಿತ ವ್ಯವಸ್ಥೆಯನ್ನು ಏರ್ಪಡಿಸಿದರು. ಇತರ ಕೆಲವು ರಾಷ್ಟ್ರಗಳಿಗೆ 'ಸರಕಾರಿ ಧರ್ಮ'ಗಳು ಇರುವುದಾದರೂ ಅದಕ್ಕೆ ವ್ಯತಿರಿಕ್ತವಾಗಿ ಭಾರತಕ್ಕೆ ಯಾವುದೇ 'ಸರಕಾರಿ ಧರ್ಮ'ವಿಲ್ಲ. ಭಾರತದಲ್ಲಿ ವಾಸಿಸುತ್ತಿರುವವರು ವಿವಿಧ ಮತಧರ್ಮಗಳ ಅನುಯಾಯಿಗಳಾದುದರಿಂದ ಭಾರತದ ಸೆಕ್ಯೂಲರ್ ಸರಕಾರ ಪ್ರತಿಯೊಂದು ಮತವನ್ನು ಸಮಾನ ರೀತಿ ಗೌರವಿಸಬೇಕೆಂಬುದು ಅನಿವಾರ್ಯವಾಗಿದೆ. ಭಾರತದ ಪ್ರತಿಯೊಂದು ಧರ್ಮ ಪ್ರಚಾರಗೊಳ್ಳಲು ಸಮಾನಾವಕಾಶ ಕೊಡಬೇಕಾದುದು ಸರಕಾರದ ಕರ್ತವ್ಯವಾಗಿದೆ. ಪ್ರತಿಯೊಂದು ಮತದ ಅನುಯಾಯಿಗಳಿಗೆ ಅವರ ವಿಶ್ವಾಸ ಮತ್ತು ನಂಬಿಕೆಗಳನ್ನು ಪ್ರಚಾರಗೊಳಿಸಲು ಪೂರ್ಣಸ್ವಾತಂತ್ರ್ಯ ನೀಡುವುದು ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಸರಕಾರ ಕೈಹಾಕದಿರುವುದು ಅತ್ಯಾವಶ್ಯವಾಗಿದೆ.

ಶ್ರೀ ತ್ಯಾಗಿಯವರ ಮಸೂದೆಯ ಮೂಲಕ ಧಾರ್ಮಿಕ ಸ್ವಾತಂತ್ರ್ಯಕ್ಕೆ ತಡೆಯೊಡ್ಡಲಾಗುವುದೆಂಬುದು ಬಹಳ ಮಹತ್ವದ ಸಂಗತಿಯಾಗಿದೆ. ಇದಕ್ಕಿಂತ ಲಘುತರ ಸಂಗತಿಗಳ ಕುರಿತು ಸಹ ನಮ್ಮಲ್ಲಿ ನಿಯಮ ರಚಿಸಲು ಸಾಧ್ಯವಾಗಿಲ್ಲ ಮತ್ತು ನೀಡಲಾಗಿರುವ ಸ್ವಾತಂತ್ರ್ಯವನ್ನು ಯಾವುದೇ ರೀತಿ ಅಪಹರಿಸಲು ಸಹ ಸಾಧ್ಯವಾಗಿಲ್ಲ. ಈ ವಿಷಯದ ಮಹತ್ವವನ್ನು ಚೆನ್ನಾಗಿ ಮನವರಿಕೆಯಾಗುವಂತೆ ಮಾಡಲು ಒಂದು ರಾಜಕೀಯ ಸಮಸ್ಯೆಯ ಕುರಿತು ಶಾಂತಚಿತ್ತದಿಂದ ಆಲೋಚಿಸಬೇಕಾಗಿದೆ:

ನಮ್ಮ ರಾಷ್ಟ್ರದಲ್ಲಿ ಪಾರ್ಲಿಮೆಂಟು ಮತ್ತು ಎಸೆಂಬ್ಲಿಗಳಿಗೆ ಚುನಾವಣೆ ನಡೆಯುತ್ತಿರುವುದು ಸರ್ವರಿಗೂ ತಿಳಿದ ಸಂಗತಿಯಷ್ಟೆ. ನೀವು ಎಷ್ಟೋ ಸಾರಿ ಕೇಳಿರಬಹುದು ಚುನಾವಣೆಯಲ್ಲಿ ಒಬ್ಬ ವ್ಯಕ್ತಿ ಒಂದು ಪಾರ್ಟಿಯ ಪತಿಯಿಂದ ಸ್ಪರ್ಧಿಸುತ್ತಾನೆ. ಮತದಾರರ ಪೈಕಿ ಅಧಿಕ ಸಂಖ್ಯೆಯ ಜನರು ಆ ವ್ಯಕ್ತಿಯನ್ನು ಪಾರ್ಲಿಮೆಂಟಿಗೋ ಎಸೆಂಬ್ಲಿಗೂ ಚುನಾಯಿಸುತ್ತಾರೆ. ಆದರೆ ಕೊಂಚ ಕಾಲ ಕಳೆದ ನಂತರ ಈ ವ್ಯಕ್ತಿ ಮತದಾರರ ಇಷ್ಟವನ್ನು ಅವಗಣಿಸಿ ತನ್ನ ಮನಸ್ಸಾಕ್ಷಿಯ ನಿರ್ಧಾರವನ್ನನುಸರಿಸಿ ತನ್ನ ಮೊದಲಿನ ಪಕ್ಷವನ್ನು ತೊರೆದು ಇನ್ನೊಂದು ಪಕ್ಷವನ್ನು ಸೇರುತ್ತಾನೆ. ಇದನ್ನು ಪತ್ರಿಕೆಗಳ ಭಾಷೆಯಲ್ಲಿ "ಪಕ್ಷಾಂತರ" ವೆಂದು ಕರೆಯುತ್ತಾರೆ. ಪಕ್ಷಾಂತರ ಈಗ ಸರ್ವೆಸಾಮಾನ್ಯವಾಗಿದ್ದರೂ ಭಾರತದ ಯಾವುದೇ ಸರಕಾರವಾಗಲೀ ಯಾವುದೇ ಪಕ್ಷವಾಗಲೀ ಯಾವುದೇ ಕಾನೂನು ಅಂಗೀಕಾರಗೊಳ್ಳುವಂತೆ ಮಾಡಿ ಪಾರ್ಲಿಮೆಂಟಿನ ಸದಸ್ಯನ ಅಥವಾ ಎಸೆಂಬ್ಲಿಯ ಸದಸ್ಯನ ಸದಸ್ಯತ್ವ ರದ್ದುಗೊಳಿಸಲು ಅಥವಾ ಶಿಕ್ಷೆಗೆ ಗುರಿಪಡಿಸಲು ಸಮರ್ಥವಾಗಿಲ್ಲ. ಈ ರಾಜಕೀಯ ಸಮಸ್ಯೆಗಿಂತ ಧಾರ್ಮಿಕ ಸಮಸ್ಯೆ ಬಹಳ ಮಹತ್ವವುಳ್ಳದ್ದಾಗಿದೆ. ಯಾರಾದರೂ ತಮ್ಮ ಮನಸ್ಸಾಕ್ಷಿಯ ಕರೆಗೆ ಓಗೊಟ್ಟು ತಮ್ಮ ಮಾನಸಿಕ ತೃಪ್ತಿಗಾಗಿ ಮತ್ತು ಮರಣಾನಂತರ ಉತ್ತಮ ಫಲ ದೊರೆಯುವ ಆಶೆಯಿಂದ ತಮ್ಮ ಮತವನ್ನು ಬದಲಾಯಿಸಲು ಇಚ್ಛಿಸುವುದಾದರೆ ಅಥವಾ ತಮ್ಮ ಮತವನ್ನು ಪ್ರಚಾರಗೊಳಿಸುವುದಾದರೆ ಅದನ್ನು ಕೆಲವು ಊಹಾಪೋಹದ ಶರ್ತಗಳನ್ನು ವಿಧಿಸಿ ಕಾನೂನು ಪಾಸುಮಾಡಿ ಇಂತಹ ಜನರನ್ನು ಶಿಕ್ಷಾರ್ಹರೆಂದು ಘೋಷಿಸಲಿಕ್ಕಾಗಿ ದಾರಿಯನ್ನು ಸುಗಮಗೊಳಿಸುವುದು ಭಾರತದ ಸಂವಿಧಾನದ ಪ್ರಧಾನ ಆಶಯದ ನಿರಾಕರಣೆಯಾಗಿದೆ. ಇದು ಭಾರತದ ಸಂವಿಧಾನ ಭಾರತೀಯ ನಾಗರಿಕರಿಗೆ ನೀಡಿರುವ ಮೂಲಭೂತಹಕ್ಕುಗಳನ್ನು ಕಸಿದುಕೊಳ್ಳುವುದಕ್ಕೆ ಸಮಾನವಾಗಿದೆ. ಇದನ್ನು ಎಂದಿಗೂ ಇಷ್ಟಪಡಲು ಸಾಧ್ಯವಿಲ್ಲ.

ಈ ಮಸೂದೆಯ ಪರಿಣಾಮಗಳನ್ನು ಪರಿಗಣಿಸಿ ಕ್ರೈಸ್ತ ಸಹೋದರರ ಒಂದು ನಿಯೋಗ ಪ್ರಧಾನ ಮಂತ್ರಿಯವರನ್ನು ಕೆಲಸಮಯದ ಹಿಂದೆ ಭೇಟಿಯಾಗಿ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದಾಗ ನಮ್ಮ ಆದರಣೀಯ ಪ್ರಧಾನ ಮಂತ್ರಿಗಳಾದ ಶ್ರೀ ಮೊರಾರ್ಜಿ ದೇಸಾಯಿ ಅವರು, ಈ ಮಸೂದೆಯನ್ನು ಚರ್ಚಿಸುವಾಗ ಅವರ ಭಾವನೆಗಳನ್ನೂ ಅಭಿಪ್ರಾಯಗಳನ್ನೂ ಗಮನಕ್ಕೆ ತೆಗೆದುಕೊಳ್ಳಲಾಗುವುದೆಂದೂ ಮಸೂದೆಯನ್ನು ಈಗಿರುವ ರೀತಿಯಲ್ಲಿಯೇ ಅಂಗೀಕರಿಸಲಿಕ್ಕಿಲ್ಲವೆಂದೂ ಆಶ್ವಾಸನೆ ಇತ್ತುದಾಗಿ ವರದಿಯಾಗಿದೆ. ಆದರೆ ಈ ಮಸೂದೆ ಪಾರ್ಲಿಮೆಂಟಿನಲ್ಲಿ ಮಂಡಿಸಿರುವಷ್ಟು ಕಾಲ ಈ ಮಸೂದೆಯ ಕುರಿತು ಮತ ಪ್ರಚಾರಕ ಧರ್ಮಾವಲಂಬಿಗಳು ಆಶಂಕೆಗೆ ಗುರಿಯಾಗುವುದು ಅನಿವಾರ್ಯವಾಗಿದೆ. ನಮ್ಮ ಕೋರಿಕೆ ಯೇನೆಂದರೆ ಪ್ರಥಮವಾಗಿ ಈ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲು ಒಪ್ಪಿಗೆ ನೀಡಬಾರದಿತ್ತು. ಏಕೆಂದರೆ ಈ ಮಸೂದೆ ಅಂಗೀಕೃತವಾದ ಭಾರತೀಯ ಸಂವಿಧಾನದ ಸುವ್ಯಕ್ತ ನಿಯಮಗಳಿಗೆ ವಿರುದ್ಧವಾಗಿದೆ. ಈ ಮಸೂದೆಯ ಮಂಡನೆಯನ್ನು ತಡೆಯಲು ಅಸಾಧ್ಯವಾಗಿದ್ದ ಪಕ್ಷದಲ್ಲಿ ರಾಷ್ಟ್ರದ ಸರ್ವತೋಮುಖ ಕ್ಷೇಮದ ದೃಷ್ಟಿಯಿಂದ ಮತ್ತು ಭಾರತದ ಸಂವಿಧಾನ ಭಾರತೀಯ ನಾಗರಿಕರಿಗೆ ನೀಡಿರುವ ಮೂಲಭೂತ ಹಕ್ಕುಗಳನ್ನು ಕಾಪಾಡುವ ಉದ್ದೇಶದಿಂದ ಈ ಮಸೂದೆಯನ್ನು ತಿರಸ್ಕರಿಸಲೇಬೇಕಾಗಿದೆ.

ಕೊನೆಯದಾಗಿ ಒಂದು ಮುಖ್ಯ ವಿಷಯವನ್ನು ನಮ್ಮ ಸ್ವಂತ ಅನುಭವದ ಆಧಾರದಿಂದ ವ್ಯಕ್ತಗೊಳಿಸುವುದು ಅತ್ಯಾವಶ್ಯಕವೆಂದು ಪರಿಗಣಿಸುತ್ತೇವೆ. ಅಹ್ಮದಿಯಾ ಸಂಘಟನೆ ಒಂದು ಧಾರ್ಮಿಕ ಮತಪ್ರಚಾರಕ ಸಂಘಟನೆಯಾಗಿದೆ. ಈ ಸಂಘಟನೆಗೆ ರಾಜಕೀಯದೊಂದಿಗೆ ಯಾವುದೇ ಸಂಬಂಧವಿಲ್ಲ. ಮೇಲಿನ ಮಸೂದೆಯ ಆಘಾತ ನೇರವಾಗಿ ಮತಪ್ರಚಾರದ ಮೇಲೆ ಆಗುವುದರಿಂದ ನಾವು ಈ ವಿಷಯದ ಕುರಿತು ಬರೆಯುವುದು ಅತ್ಯಾವಶ್ಯವೆಂದು ಗ್ರಹಿಸಿದೆವು. ನಾವು ಹೇಳಲು ಉದ್ದೇಶಿಸಿರುವ ಸಂಗತಿ ಇದಾಗಿದೆ: ಅಹ್ಮದಿಯಾ ಸಂಘಟನೆ ತೊಂಭತ್ತು ವರ್ಷಗಳಷ್ಟು ಕಾಲದಿಂದ ಪ್ರಪಂಚದಾದ್ಯಂತ ಇಸ್ಲಾಮಿನ ಸಂದೇಶವನ್ನು ಬಹಳ ಪ್ರೇಮದಿಂದಲೂ ಸ್ನೇಹದಿಂದಲೂ ತಲುಪಿಸುತ್ತಾ ಇದೆ. ಅಹ್ಮದಿಯಾ ಸಂಘಟನೆಯ ಆಧಾರಪೂರ್ವಕವೂ ಸ್ನೇಹಪರವೂ ಆದ ಮತಪ್ರಚಾರದಿಂದ ಲಕ್ಷಾಂತರ ಜನರು ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ಇಸ್ಲಾಮ್ ಮತ ಸ್ವೀಕರಿಸಿರುವರೆಂದು ಹೇಳಲು ನಾವು ಹೆಮ್ಮೆ ಪಡುತ್ತೇವೆ. ನಮ್ಮ ಸಂಘಟನೆ ಬಡವಾಗಿದ್ದರೂ ಮಾನವರ ಕಲ್ಯಾಣಾಭಿಲಾಷೆ ಮತ್ತು ಸ್ನೇಹ

ದಿಂದ ಸಂಪನ್ನವಾಗಿದೆ ಎಂಬುದು ಅದರ ಪ್ರಥಮ ವೈಶಿಷ್ಟ್ಯವಾಗಿದೆ. ದ್ವಿತೀಯವಾಗಿ ಈ ಸಂಘಟನೆಯ ಬಳಿ ರಾಜ್ಯಾಧಿಕಾರವಾಗಲೀ ಧನಸಂಪತ್ತಾಗಲೀ ಇಲ್ಲ. ಆದುದರಿಂದ ಈ ಸಂಘಟನೆಯ ವಿಜಯಕ್ಕೆ ಕಾರಣ ಅಧಿಕಾರ ಮತ್ತು ಸುಪತ್ತು ಎಂದು ಹೇಳಲು ಸಾಧ್ಯವಿಲ್ಲ. ಈ ಸಂಘಟನೆ ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯ ಬಾಹ್ಯಶಕ್ತಿ ಅಥವಾ ಅಧಿಕಾರ ಪ್ರಯೋಗಿಸಿ ಅಥವಾ ಯಾವುದೇ ರೀತಿಯ ಆಶೆ ಆಮಿಷಗಳನ್ನೊಡ್ಡಿ ತನ್ನ ಮತ ಪ್ರಚಾರಕ ಕಾರ್ಯದಲ್ಲಿ ವಿಜಯ ಗಳಿಸಲು ಶ್ರಮಿಸಿಲ್ಲ ವೆಂಬುದು ಸರ್ವ ವಿದಿತವಾದ ಸತ್ಯಸಂಗತಿಯಾಗಿದೆ. ಇಂತಹ ಆಶೆ ಆಮಿಷ ಅಥವಾ ಅಧಿಕಾರ ಪ್ರಯೋಗವನ್ನು ನಾವು ಇಷ್ಟಪಡುವುದೂ ಇಲ್ಲ. ಇಂತಹ ವಿಧಾನಗಳಿಂದ ವ್ಯಕ್ತಿಗಳನ್ನು ಮತಪರಿವರ್ತನೆಗೊಳ್ಳುವಂತೆ ಮಾಡುವುದು ಫಲಶೂನ್ಯವೆಂದೂ ಇದರಿಂದ ಈ ಸಂಘಟನೆಯ ನಿಷ್ಠಾವಂತ ಅನುಯಾಯಿಗಳು ವರ್ಧಿಸುವುದಕ್ಕೆ ಪ್ರತಿಯಾಗಿ ಕಪಟ ವಿಶ್ವಾಸಿಗಳ ಸಂಖ್ಯೆ ವರ್ಧಿಸುವುದೆಂದೂ ಈ ಸಂಘಟನೆ ದೃಢವಾಗಿ ನಂಬಿದೆ. ಇಂತಹ ಕಪಟ ವಿಶ್ವಾಸಿಗಳನ್ನು ಯಾರೂ ಇಷ್ಟಪಡುವುದಿಲ್ಲ. ಆದುದರಿಂದ ಶ್ರೀಮಾನ್ ತ್ಯಾಗಿಯವರೊಡನೆ ನಾವು ಹೇಳಲು ಇಚ್ಛಿಸುವುದೇನೆಂದರೆ ತಮ್ಮ ಧರ್ಮದ ಕುರಿತು ಮತ್ತು ನಂಬಿಕೆಗಳ ಕುರಿತು ದೃಢ ವಿಶ್ವಾಸ ಹೊಂದದವರ ಕುರಿತು ಗಾಬರಿಗೊಳ್ಳಬೇಕಾದ ಅವಶ್ಯವಿಲ್ಲ. ಅವರು ಸಮತಳವಿಲ್ಲದ ಪಾತ್ರೆಯಂತಿದ್ದು ಭಾರಬಿದ್ದ ಕಡೆ ಬಾಗುತ್ತಾರೆ. ಇಂತಹ ವ್ಯಕ್ತಿಗಳನ್ನು ತಮ್ಮ ಮೊದಲಿನ ಮತದಲ್ಲಿ ನಿಲ್ಲಿಸಲಿಕ್ಕಾಗಿ ಯಾವುದೇ ಸಂವಿಧಾನಾತ್ಮಕ ತಿದ್ದುಪಡಿಯ ಆಶ್ರಯವನ್ನು ಪಡೆಯುವ ಬದಲು ಅವರನ್ನು ಅವರಿಗಿಷ್ಟವಾದ ಮತವನ್ನು ಸ್ವೀಕರಿಸಲು ಬಿಡುವುದು ಉತ್ತಮವೆಂದು ನಮ್ಮ ಅಭಿಪ್ರಾಯವಾಗಿದೆ. ಧಾರ್ಮಿಕವಾಗಿ ದೃಢ ನಂಬಿಕೆ ಹೊಂದದವರಿಂದ ಅವರ ಮೊದಲಿನ ಮತಕ್ಕಾಗಲೀ ಅನಂತರ ಅವರು ಸ್ವೀಕರಿಸುವ ಮತಕ್ಕಾಗಲೀ ಯಾವುದೇ ಪ್ರಯೋಜನ ದೊರಕಲಾರದು. ಇಂತಹ ಜನರಿಗೆ ಮತವೆಂಬುದೇ ಇರುವುದಿಲ್ಲ. ಇವರು ನಾಮ ಮಾತ್ರ ಮತಾವಲಂಬಿಗಳೆಂದು ಕರೆಯಲ್ಪಡುತ್ತಾರೆ. ಇಂತಹ ಜನರಿಗಾಗಿ ತಲೆಬಿಸಿ ಮಾಡುವುದರಿಂದ ಪ್ರಯೋಜನವೇನೂ ಇಲ್ಲ. ಆದರೆ ಇದರಿಂದ ಭಾರತದಲ್ಲಿ ಮತ ಸ್ವಾತಂತ್ರ್ಯವಿದೆಯೆಂದು ಜಗತ್ತಿನಲ್ಲೆಲ್ಲಾ ಪ್ರಸಿದ್ಧಿಯಾರ್ಜಿಸಿದ ಭಾರತದ ಹಿರಿಮೆಗೂ ಮಹಿಮೆಗೂ ಭಂಗವುಂಟಾಗುವುದು.

(ಅಹ್ಮದಿಯಾ ಸಂಘಟನೆಯ ಕೇಂದ್ರವಾದ ಖಾದಿಯಾನ್‌ನಿಂದ ಪ್ರಕಟವಾಗುತ್ತಿರುವ "ಬದರ್" ಉರ್ದು ವಾರ ಪತ್ರಿಕೆಯ 26—4—'79ರ ಸಂಚಿಕೆಯಲ್ಲಿ ಬರೆದ ಸಂಪಾದಕೀಯ).


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"………ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು……" —ಉದಯವಾಣಿ.

"………ಭಿನ್ನ ಧರ್ಮಿಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ……" —ನವಭಾರತ.

ಪುಟಗಳು: **48** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore575 001.

# ★ ಭುಟ್ಟೋ ಪ್ರಕರಣ ★

● ಮೌಲವಿ ಮುಹಮ್ಮದ್ ಅಬುಲ್ ವಫಾ.
ಸಂಪಾದಕ, "ಸತ್ಯದೂತನ್", ಕಣ್ಣಾನೂರು.

ಪಾಕಿಸ್ತಾನದ ಚುನಾಯಿತ ಮಾಜಿ ಪ್ರಧಾನ ಮಂತ್ರಿ ಹಾಗೂ ಅಂತಾರಾಷ್ಟ್ರೀಯ ಖ್ಯಾತಿವೆತ್ತ ಮಿಸ್ಟರ್ ಜುಲ್ಫಿಕಾರಲಿ ಭುಟ್ಟೋ ಇದೇ ಎಪ್ರಿಲ್ 4ರಂದು ರಾವಲ್ಪಿಂಡಿಯ ಜೈಲಿನಲ್ಲಿ ವಧಿಸಲ್ಪಟ್ಟರು. ಲೋಕವನ್ನಿಡೀ ಚಕಿತಗೊಳಿಸಿದ ಒಂದು ಘಟನೆಯಾಗಿದೆ ಇದು. ಇಷ್ಟರವುಟ್ಟಿಗೆ ಲೋಕದ ಗಮನವನ್ನು ಸೆಳೆದ ಒಂದು ಸಂಭವ ಇತ್ತೀಚೆಗಿನ ಕಾಲದಲ್ಲಿ ಉಂಟಾಗಿಲ್ಲ. ಇದು ಕೋರ್ಟುಮಾಡಿದ ಕೊಲೆಯೆಂದು ನ್ಯಾಯತಜ್ಞರು ಹೇಳುತ್ತಾರೆ. ಇದು ಜನರಲ್ ಜಿಯಾಉಲ್ ಹಕ್ಕರ ಬಾಳ್ವಿಕೆಗೆ ಮಾಡಿದ ಒಂದು ಕ್ರೂರ ಕೃತ್ಯವೆಂದು ಕೆಲವರು ಆಪಾದಿಸುತ್ತಾರೆ. ಮೌಲಾನಾ ಮೌದೂದಿ ಸಾಹೇಬರ, ಅಮೇರಿಕನ್ ಸಿ.ಐ.ಎ.ಯ ಮತ್ತು ಝಿಯೋನಿಸಮಿನ ಗೂಢ ತಂತ್ರ ಇದರ ಮರೆಯಲ್ಲಿದೆಯೆಂದು ಇನ್ನು ಕೆಲವರು ಹೇಳುತ್ತಾರೆ. (ಚಂದ್ರಿಕ 10–4–79). ಪಾಕಿಸ್ತಾನದ ರಾಜಕೀಯ ಪಕ್ಷಗಳಲ್ಲಿ 'ಜಮಾಅತೆ ಇಸ್ಲಾಮಿ' ಮಾತ್ರವೇ ಈ ವಧೆಕೃತ್ಯವನ್ನು ನ್ಯಾಯೀಕರಿಸುತ್ತದೆಯೆಂದು ಪತ್ರಿಕಾ ವರದಿಗಳು ಬೊಟ್ಟು ಮಾಡಿ ತೋರಿಸುತ್ತವೆ. ಜನರಲ್ ಜಿಯಾಉಲ್ ಹಕ್ಕರ ಮಂತ್ರಿಮಂಡಲದಲ್ಲಿ ಸೇರಿದ ರಾಜಕೀಯ ಪಕ್ಷಗಳಲ್ಲಿ ಹೆಚ್ಚಿನವರು ಇದನ್ನು (ಈ ವಧೆಯನ್ನು) ಇಷ್ಟ ಪಡಲಿಲ್ಲ. ಮಿ। ಭುಟ್ಟೋರ ಮೇಲೆ ಆರೋಪಿಸಲಾದ ಕೊಲೆಯ ಅಪರಾಧ ಸರಿಯೋ ತಪ್ಪೋ ಎಂಬುದಲ್ಲ ಪ್ರಶ್ನೆ, ಅದು ಸಂಶಯಾತೀತವಾಗಿ ರುಜುವಾತಾಗಿಲ್ಲವೆಂಬುದು ವಧೆಯನ್ನು ವಿರೋಧಿಸುವವರ ನ್ಯಾಯ.

ಅಂತೂ ಈ ದುರಂತದಲ್ಲಿ ಮೃತ್ಯುಹೊಂದಿದ ಭುಟ್ಟೋ ಮತ್ತು ದುಃಖಿತರಾದ ಕುಟುಂಬ ಸಹಾನುಭೂತಿಗೆ ಪಾತ್ರರಾಗಿದ್ದಾರೆ. ಲೋಕದಲ್ಲೆಡೆ ಇರುವ ಮನುಷ್ಯಸ್ನೇಹಿಗಳು ಅಗಾಧವಾಗಿ ಪರಿತಪಿಸುತ್ತಾರೆ. ಅವರೊಂದಿಗೆ ನಾವೂ ಸಹಭಾಗಿಯಾಗಿದ್ದೇವೆ.

### ದೈವ ನಿಯತಿ

ಆದರೆ ಪ್ರಪಂಚದ ಒಂದು ಅಣುವಾಗಲಿ ದೇವರಿಚ್ಛೆಸದೆ ಚಲಿಸುವುದಿಲ್ಲವೆಂದು ನಂಬುವ ಸತ್ಯವಿಶ್ವಾಸಿಗಳಿಗೆ ಭುಟ್ಟೋ ಪ್ರಕರಣದಿಂದ ಧಾರಾಳ ಸಂಗತಿಗಳನ್ನು ಚಿಂತಿಸಿ ತಿಳಿದುಕೊಳ್ಳಲಿಕ್ಕಿದೆ. ಅದಕ್ಕೆ ಭುಟ್ಟೋರ ಸಮೀಪ ಭೂತ ಕಾಲ ಚರಿತ್ರೆಯ ಕಡೆಗೆ ಕಣ್ಣುಹಾಯಿಸುವುದು ಅಗತ್ಯ. ಅವರ ಪತನದಿಂದ ಇಷ್ಟರ ತನಕ ಹಲವರು ಅವರ ಒಳಿತು ಕೆಡುಕುಗಳನ್ನು ವಿವರಿಸಿ ಧಾರಾಳ ಬರೆದಿದ್ದಾರೆ. ಆದರೆ ಅವರ ರಾಜಕೀಯ ಜೀವನಕ್ಕೆ ಸಂಬಂಧಿಸಿದ ಒಂದು ದೊಡ್ಡ ಘಟನೆ ತಿಳಿದೋ ತಿಳಿಯದೆಯೋ ಅವಗಣಿಸಲ್ಪಟ್ಟಿದೆ. ಇಸ್ಲಾಮಿನ ನವೋತ್ಥಾನಕ್ಕಾಗಿ ನೆಲೆಗೊಂಡಿರುವ ದೈವಿಕ ಸಂಘಟನೆಯಾದ ಅಹ್ಮದಿಯಾ ಜಮಾತಿನ ವಿರುದ್ಧವಾಗಿ ಗೈಯ್ದ ಅತಿ ಕ್ರೂರ ಕೃತ್ಯವಾಗಿದೆ ಅದು.

### ತುಸು ಚರಿತ್ರೆ

ಮಿ। ಭುಟ್ಟೋ ಅಹ್ಮದಿಯಾ ಸಂಘಟನೆಯ ವಿರೋಧಿಯಾಗಿರಲಿಲ್ಲ. ಧರ್ಮಕಾರ್ಯಗಳಲ್ಲಿ ಆಸಕ್ತಿ ಇಲ್ಲದ ಅವರಿಗೆ ಧಾರ್ಮಿಕ ವೀಕ್ಷಣೆಯ ಭಿನ್ನತೆ ಒಂದು ಸಮಸ್ಯೆಯಾಗಿರಲಿಲ್ಲ. ಅವರು ಸಮಾಜಸ್ನೇಹಿಯಾಗಿದ್ದರೂ ಸಂಪೂರ್ಣ ಲೌಕಿಕಾಸಕ್ತನೂ ನುರಿತ ರಾಜಕಾರಣಿಯೂ ಆಗಿದ್ದರು.

ಪಾಕಿಸ್ತಾನದಲ್ಲಿ 1970 ಡಿಸೆಂಬರ್‌ನಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಅಹ್ಮದಿಯರು ಅತ್ಯುತ್ಸಾಹದಿಂದ ಭಾಗವಹಿಸಿದರು. ಪಶ್ಚಿಮ ಪಾಕಿಸ್ತಾನದಲ್ಲಿ ಭುಟ್ಟೋರವರ ಪೀಪಿಲ್ಸ್ ಪಾರ್ಟಿಯನ್ನೂ ಪೂರ್ವ ಪಾಕಿಸ್ತಾನದಲ್ಲಿ ಮುಜೀಬುರ್ರಹ್ಮಾರರ ಅವಾಮಿ ಲೀಗನ್ನೂ ಅವರು ಬೆಂಬಲಿಸಿದರು. ಮಾತ್ರವಲ್ಲ ಪೀಪಿಲ್ಸ್ ಪಾರ್ಟಿ ಮತ್ತು ಅಹ್ಮದಿಯರೊಳಗೆ ಒಂದು ಅಲಿಖಿತ ಒಡಂಬಡಿಕೆ ಇತ್ತು— ಈ ಪಾರ್ಟಿ ಅಧಿಕಾರಕ್ಕೆ ಬಂದರೆ ಅಹ್ಮದಿಯರಿಗೆದುರಾಗಿ ಏನನ್ನೂ ಮಾಡಲಿಕ್ಕಿಲ್ಲವೆಂದು. ಈ ಸಖ್ಯದ ಕಾರಣದಿಂದ ಅಹ್ಮದಿಯರು ಪೀಪಿಲ್ಸ್ ಪಾರ್ಟಿಗಾಗಿ ಅರ್ಪಣಭಾವದಿಂದ ದುಡಿದರು. ಭುಟ್ಟೋರನ್ನು ಮತ್ತು ಅವರ ಪಾರ್ಟಿಯನ್ನು ಗೆಲ್ಲಿಸಲು ಅವರು ನಿರ್ಣಾಯಕ ಪಾತ್ರವಹಿಸಿದರು.

ಕನಿಷ್ಠ ಪಕ್ಷ ಪಾರ್ಲಿಮೆಂಟಿಗೆ 20 ಸ್ಥಾನಗಳನ್ನು ಗಳಿಸಿ ಕೊಟ್ಟದ್ದು ಅಹ್ಮದಿಯರಾಗಿದ್ದರು. ಪಂಜಾಬ್ ಸಂಸ್ಥಾನದ ಅಸೆಂಬ್ಲಿ ಚುನಾವಣೆಯಲ್ಲೂ ಗಣನೀಯ ವಿಜಯವನ್ನು ಅವರಿಗೆ ಗಳಿಸಿ ಕೊಡಲಾಯಿತು. ಹಾಗೆ ಭುಟ್ಟೋ ಮತ್ತು ಪಿ. ಪಿ. ಪಕ್ಷದವರು ಅಹ್ಮದಿಯರ ನಿಕಟ ಸ್ನೇಹಿತರಾಗಿದ್ದರು.

ನಂತರ ಉಂಟಾದ ಘಟನೆಗಳ ಪರಿಣಾಮವಾಗಿ ಪೂರ್ವ ಪಾಕಿಸ್ತಾನ ಬಂಗ್ಲಾದೇಶವಾಗಿ ಮಾರ್ಪಟ್ಟು ಪಶ್ಚಿಮ ಪಾಕಿಸ್ತಾನ ಮಾತ್ರ ಪಾಕಿಸ್ತಾನವೆಂದು ಬಾಕಿಯಾಯಿತು. ನಂತರದ 5 ವರ್ಷ ಭುಟ್ಟೋರ ಪ್ರತಾಪದ ವಿಜಯ ಪತಾಕೆ ಹಾರಾಡಿ ಕೊಂಡಿದ್ದ ಕಾಲವಾಗಿತ್ತು.

1973ರಲ್ಲಿ ಅರಬ್ ಇಸ್ರಾಯಿಲ್ ಯುದ್ಧದಲ್ಲಿ ಈಜಿಪ್ಟಿಗೆ ತುಸು ವಿಜಯ ಉಂಟಾಗಿದ್ದರೂ ಅರಬ್ ಲೋಕಕ್ಕೆ ಸಾಮಾನ್ಯವಾಗಿ ದೊಡ್ಡ ಬಳಲಿಕೆಯಾಗಿತ್ತು. ಆ ಸಂದರ್ಭದಲ್ಲಿ ಮಿ। ಭುಟ್ಟೋ ಅರಬ್ ರಾಷ್ಟ್ರಗಳಲ್ಲಿ ಪರ್ಯಟನೆ ನಡೆಸಿ 'ತೈಲಯುದ್ಧ'ದ ತಂತ್ರವನ್ನು ಅರಬ್ ನೇತಾರರಿಗೆ ಚುಚ್ಚಿದರು. ಅದರಿಂದ ಅರಬಿಯರಿಗೆ ಅಭೂತಪೂರ್ವವಾಗಿ ಕಾರ್ಯಸಿದ್ಧಿ ಉಂಟಾಯಿತು. ಮಿ। ಭುಟೋ ಅರಬಿ ನೇತಾರರ ಕಣ್ಮಣಿಯಾದರು. ವಿಳಂಬ ಮಾಡದೆ 1974 ಫೆಬ್ರವರಿಯಲ್ಲಿ ಮಿ। ಭುಟ್ಟೋ ಲಾಹೋರಿನಲ್ಲಿ ಇಸ್ಲಾಮಿಕ ಶೃಂಗ ಸಮ್ಮೇಳನವನ್ನು ಜರಗಿಸಿದರು. ಜಗತ್ತಿನ ಮೂವತ್ತೇಳು ಮುಸ್ಲಿಂ ರಾಷ್ಟ್ರದ ನೇತಾರರು ಒಂದೇ ವೇದಿಕೆಯಲ್ಲಿ ಸಮ್ಮೇಳಿಸಿದ್ದು ಚರಿತ್ರೆಯಲ್ಲಿ ಅಂದು ಪ್ರಥಮ ಬಾರಿಯಾಗಿತ್ತು. ಆ ಸಮ್ಮೇಳನದಲ್ಲಿ ವಿಶ್ವದಲ್ಲಿ ಪ್ರಾಧಾನ್ಯತೆಯುಳ್ಳ ಹಲವು ಸಮಸ್ಯೆಗಳನ್ನು ಚರ್ಚಿಸಲಾಯಿತು. ಇದು ಭುಟ್ಟೋರ ಖ್ಯಾತಿಗೆ ಹೆಚ್ಚಿನ ಪ್ರಭೆಯನ್ನು ಬೀರಿತು. ಆ ಸಮ್ಮೇಳನದ ಅಧ್ಯಕ್ಷತೆಯನ್ನು ಭುಟ್ಟೋರವರೇ ವಹಿಸಿ ಕೊಂಡಿದ್ದರು.

## ಅಂತಾರಾಷ್ಟ್ರೀಯ ಗೂಢಾಲೋಚನೆ

ಪಾಕಿಸ್ತಾನದಲ್ಲಿ 'ಜಮಾಅತೆ ಇಸ್ಲಾಮಿ' ಮತ್ತು ಅದರ ಸ್ಥಾಪಕ ನೇತಾರ ಮೌಲಾನಾ ಅಬುಲ್ ಆಲಾ ಮೌದೂದಿ ಸಾಹೇಬರು ಹಲವು ವರ್ಷಗಳಿಂದ ಅಹ್ಮದಿಯಾ ಸಂಘಟನೆಯನ್ನು ನಿರ್ಮೂಲನಗೊಳಿಸಲು ಹಲವು ರೀತಿಯಲ್ಲಿ ಹೋರಾಡಿ ಪರಾಜಿತರಾಗಿದ್ದರು. 1953ರಲ್ಲಿ ನಡೆದ ಅಹ್ಮದಿಯಾ ವಿರುದ್ಧ ಪ್ರಕ್ಷೋಭದಲ್ಲಿ ಪರಾಜಯಗೊಂಡ ನಂತರ ಮೌದೂದಿ ಸಾಹೇಬರು ತನ್ನ ಪ್ರಚರಣ ಹಸ್ತವನ್ನು ಅರಬ್ ರಾಜ್ಯಗಳಿಗೆ ಚಾಚಿದರು. ಇತರ ಕೆಲವು ಪಂಡಿತರು ಸಹ ಈ ವಿಷಯದಲ್ಲಿ ಅವರಿಗೆ ಸಹಾಯವಿತ್ತರು. ಮಕ್ಕಾ ಕೇಂದ್ರವಾಗಿರಿಸಿ ಸ್ಥಾಪಿಸಲ್ಪಟ್ಟ 'ರಾಬಿತತುಲ್ ಆಲಮಿಲ್ ಇಸ್ಲಾಮಿ' (ಮುಸ್ಲಿಂ ವರ್ಲ್ಡ್ ಲೀಗ್) ಎಂಬ ಸಂಸ್ಥೆಯನ್ನು ಇದಕ್ಕಾಗಿ ಅವರು ಆಯುಧವನ್ನಾಗಿ ಮಾಡಿ ಕೊಂಡರು. ಮೌಲಾನ ಮೌದೂದಿ ಸಾಹೇಬರು ಮತ್ತು ಬೇರೆ ಕೆಲವು ಅಹ್ಮದಿಯಾ ವಿರೋಧಿ ಪಂಡಿತರು ರಾಬಿತದ ಸ್ಥಾಪಕ ನೇತಾರರ ಪೈಕಿಯಲ್ಲಿದ್ದಾರೆ. ಈ ಸಂಸ್ಥೆಯ ಪ್ರವರ್ತನೆಯ ವೆಚ್ಚಕ್ಕಾಗಿ ಸೌದಿ ಸರಕಾರದ ಖಜಾನೆಯಿಂದ ಹೊನ್ನಿನ ಹೊಳೆ ಹರಿಯಿತು.

'ರಾಬಿ'ತದ ಸ್ಥಾಪನೆಯ ಉದ್ದೇಶಗಳ ಪೈಕಿ ಪ್ರಧಾನವಾದ ಒಂದು, ಅಹ್ಮದಿಯಾ ಸಂಘಟನೆಯನ್ನು ಲೋಕದಿಂದ ನಿರ್ನಾಮಗೊಳಿಸುವುದೆಂದು ಅದರ ಉದ್ಭವದಿಂದ ಇಷ್ಟರವರೆಗಿನ ಪ್ರವರ್ತನೆಗಳು ಸಾಕ್ಷ್ಯವಹಿಸುತ್ತವೆ.

## 'ರಾಬಿತ'ದ ಕುರಿತು ಸ್ವಲ್ಪ

'ರಾಬಿತ'ದ ಸ್ಥಾಪನೆಯ ಮರೆಯಲ್ಲಿ ಪ್ರವರ್ತಿಸಿದ ಪ್ರೇರಕ ಶಕ್ತಿಗಳು ಅಮೇರಿಕ ಮತ್ತು ಝಿಯೋನಿಸಂ ಎಂದು ಆ ಬಗ್ಗೆ ತಿಳುವಳಿಕೆಯುಳ್ಳವರು ಅಂದೇ ಬೆರಳೆತ್ತಿ ತೋರಿಸಿದ್ದಾರೆ. ಈಜಿಪ್ಟ್ ಮತ್ತು ಸೌದಿ ಅರೇಬ್ಯವನ್ನು ತಮ್ಮೊಳಗೆ ಬೇರ್ಪಡಿಸುವುದಾಗಿತ್ತು ಅವರ ಪ್ರಧಾನ ಗುರಿ. ಅಂದು ಅರಬಿ ಲೋಕದಲ್ಲಿ ಇಸ್ರಾಯೇಲರಿಗೆದುರಾಗಿ ಪ್ರಸ್ತುತ ಎರಡು ರಾಷ್ಟ್ರಗಳು ನಿರ್ಣಾಯಕ ಶಕ್ತಿಗಳಾಗಿದ್ದವಷ್ಟೇ. ಇವೆರಡು ರಾಷ್ಟ್ರಗಳು ಕೆಲವು ವರ್ಷಗಳ ವರೆಗೆ ಪರಸ್ಪರ ಶತ್ರುಗಳಾಗಿದ್ದುವು. 'ರಾಬಿತ' ಸ್ಥಾಪನೆಯ ನಂತರ ವೈರತ್ವ ವರ್ಧಿಸಿತು, ಸರ್ ಮುಹಮ್ಮದ್ ಝಫ್ರುಲ್ಲಾ ಖಾನರನ್ನು 'ಕಾಫಿರ್' ಎಂದು ಫತ್ವಾ ಹೊರಡಿಸಿದ ನಿಮಿತ್ತ ಈಜಿಪ್ಟಿನ ಅಧಿಕೃತ ಮುಫ್ತೀ ಸ್ಥಾನದಿಂದ ಹೊರತಳ್ಳಲ್ಪಟ್ಟ ವ್ಯಕ್ತಿ ಹಾಗೂ ಜಮಾಲ್ ಅಬ್ದುನ್ನಾಸಿರರ ಶತ್ರುವಾದ ಶೈಖ್ ಹಸನೈನ್ ಮಖ್ಲೂಫ್ ರಾಬಿತದ ಸ್ಥಾಪಕ ನೇತಾರರಲ್ಲಿ ಒಬ್ಬರೆಂಬ ಸಂಗತಿ ಪ್ರತ್ಯೇಕ ಗಮನಾರ್ಹವಾಗಿದೆ. ಮಾತ್ರವಲ್ಲ ರಾಬಿತದ ಮೂಲಕ ಅಹ್ಮದಿಯಾ ಸಂಘಟನೆಯನ್ನು ಸಂಪೂರ್ಣ ನಾಶಪಡಿಸಬೇಕೆಂಬುದು ಮೇಲೆ ಹೇಳಿದ ಮುಸ್ಲಿಂ ವಿರುದ್ಧ ಸಾಮ್ರಾಜ್ಯತ್ವ

ಶಕ್ತಿಗಳ ಉದ್ದೇಶವಾಗಿತ್ತೆಂದು ತಿಳಿದು ಕೊಳ್ಳಲು ಹಲವು ಕಾರಣಗಳಿವೆ. ಆದರೆ ಅದರಲ್ಲಿ ಅವರು ಜಯಗಳಿಸಲಿಲ್ಲ. ಆದರೆ ಸೌದಿ ಅರೇಬಿಯಾ ಮತ್ತು ಈಜಿಪ್ಟನ್ನು ಪರಸ್ಪರ ಬೇರ್ಪಡಿಸುವ ಕಾರ್ಯದಲ್ಲಿ ಅವರು ಜಯಶೀಲರಾದ ರೆಂದು ಹೇಳಬೇಕಾಗಿಲ್ಲವಷ್ಟೇ. ಅಷ್ಟು ಮಾತ್ರವಲ್ಲ ಯಹೂದಿಯರು ಚಾರಿತ್ರಿಕ ವಿಜಯವನ್ನು ಪಡೆದದ್ದು ಮತ್ತು ಇಸ್ಲಾಮಿನ ಪ್ರಥಮ 'ಕಿಬ್ಲ' ಆಗಿದ್ದ ಪವಿತ್ರ ಬೈತುಲ್ ಮುಖದ್ದಸನ್ನು ಕೈವಶಪಡಿಸಿದ್ದು ಈ ರಾಬಿತ ಸ್ಥಾಪಿತವಾದ ನಂತರವಾಗಿದೆಯೆಂಬ ವಾಸ್ತವಾಂಶವನ್ನು ಪರಿಗಣಿಸಬೇಕಾಗಿದೆ.

ಸೌದಿ ಸರಕಾರದ ಸಂರಕ್ಷಣೆಯಲ್ಲಿ ಜನ್ಮತಾಳಿ ಬೆಳೆದು ಬಂದ ರಾಬಿತ ಆ ಸರಕಾರವನ್ನು ಮಾತ್ರ ಪ್ರತಿನಿಧೀಕರಿಸುತ್ತದೆ. ಇತರ ರಾಷ್ಟ್ರಗಳಿಂದ ಹೋಗಿ ರಾಬಿತದಲ್ಲಿ ಭಾಗವಹಿಸುವ ವ್ಯಕ್ತಿಗಳು ತಮ್ಮನ್ನೇ ಅಲ್ಲದೆ ಅವರ ರಾಷ್ಟ್ರಗಳನ್ನೋ ಜನರನ್ನೋ ಪ್ರತಿನಿಧೀಕರಿಸುವುದಿಲ್ಲವೆಂಬ ಸಂಗತಿ ಪ್ರತ್ಯೇಕ ಗಮನಿಸಬೇಕು. ಆ ವ್ಯಕ್ತಿಗಳು ಸ್ವಯಂ ನೇತಾರರಾಗಿ ವೇಷಧರಿಸಿ ರಾಬಿತದ ಸಭೆಗಳಲ್ಲಿ ಹೋಗಿ ಸೇರುತ್ತಾರೆ; ಅಥವಾ ಅವರನ್ನು ಆಮಂತ್ರಿಸಲಾಗುತ್ತದೆ ಅಷ್ಟು ಮಾತ್ರ. ಈ ಸಂಸ್ಥೆಯಿಂದ ಹಲವು ಪಂಡಿತರಿಗೆ ಹಣ ಸಿಗುತ್ತದೆಯೆಂದಲ್ಲದೆ ಇದರಿಂದ ಮುಸ್ಲಿಂ ಲೋಕಕ್ಕಾಗಲಿ ಇಸ್ಲಾಮಿಗಾಗಲಿ ಇಷ್ಟರ ತನಕ ತೆಗೆದು ತೋರಿಸುವಂತಹ ಏನೂ ಸಿದ್ಧಿಸಲಿಲ್ಲ.

### ಲೋಕಮುಸ್ಲಿಂ ಸಂಘಟನಾ ಕಾನ್ಫರೆನ್ಸ್

ರಾಬಿತದ ಸಮ್ಮೇಳನಗಳಲ್ಲಿ ಲೋಕ ಅಹ್ಮದಿಯಾ ಸಂಘಟನೆಯನ್ನು ವ್ಯಾಪಕವಾಗಿಯೂ ಪಾಕಿಸ್ತಾನದ ಅಹ್ಮದಿಯರನ್ನು ವಿಶಿಷ್ಟವಾಗಿಯೂ ಬಾಧಿಸುವ ಹಲವು ಅಕ್ರಮ ಪ್ರೇರಕವಾದ ಠರಾವುಗಳು ಒಂದಕ್ಕಿಂತ ಹೆಚ್ಚು ಬಾರಿ ಅಂಗೀಕರಿಸಲ್ಪಟ್ಟಿದ್ದರೂ ಅದರಿಂದ ಉದ್ದೇಶಿಸಿದಷ್ಟು ಪ್ರತ್ಯಾಘಾತಗಳುಂಟಾಗುವುದಿಲ್ಲವೆಂದು ಕಂಡಾಗ 1974 ರಲ್ಲಿ ರಾಬಿತದ ಕಾರ್ಯಕರ್ತರು ಹೆಚ್ಚಿನಪ್ರಾಧಾನ್ಯತೆವುಳ್ಳ ಒಂದು ಮಹಾ ಸಮ್ಮೇಳನವನ್ನು ಜರಗಿಸಿದರು. "ಲೋಕ ಮುಸ್ಲಿಂ ಸಂಘಟನಾ ಕಾನ್ಫರನ್ಸ್" ಎಂದಾಗಿತ್ತು ಅದರ ಹೆಸರು. ಅದರಲ್ಲಿ ಅಹ್ಮದಿಯಾ ಸಂಘಟನೆಗೆ ಹೆಚ್ಚು ಆಘಾತಕಾರಿಯಾದ ಒಂದು ಠರಾವು ಅಂಗೀಕರಿಸಲ್ಪಟ್ಟಿತು. ಸಂಪೂರ್ಣ ಮಿಥ್ಯೆ ಹಾಗೂ ಅಕ್ರಮ ಪ್ರೇರಕವಾದ ಅದರ ಕೆಲವು ಅಂಶಗಳು ಹೀಗಿವೆ: (1) ಸಾಮ್ರಾಜ್ಯ ಶಕ್ತಿಗಳನ್ನೂ ಝಿಯೋನಿಸಮನ್ನೂ ಸೇರಿಕೊಂಡು ಇಸ್ಲಾಮನ್ನು ನಾಶಮಾಡಿಸಲಿಕ್ಕಾಗಿ ಪ್ರವರ್ತಿಸುವ ಒಂದು ವಿರುದ್ಧ ಶಕ್ತಿಯಾಗಿದೆ ಅಹ್ಮದಿಯಾ ಸಂಘಟನೆ. (ಲಅನತುಲ್ಲಾಹಿ ಅಲಲ್ ಕಾದಿಬೀನ್–ಸುಳ್ಳು ಹೇಳುವವನ ಮೇಲೆ ಅಲ್ಲಾಹುವಿನ ಶಾಪವಿರಲಿ–ಲೇ.) ಆದ್ದರಿಂದ ಎಲ್ಲಾ ಮುಸ್ಲಿಂ ಸಂಘಟನೆಗಳು ಖಾದಿಯಾನಿಗಳ (ಅಹ್ಮದಿಯರ–ಸಂ.)ಪ್ರವರ್ತನೆಯನ್ನು "ಸರ್ವ ಶಕ್ತಿಯನ್ನು ಪಯೋಗಿಸಿ ಎದುರಿಸಬೇಕು......."

(2) "ಈ ಪಾರ್ಟಿಯ ಕುಫ್ರಿಯತ್ (ಅವಿಶ್ವಾಸ) ಮತ್ತು ಇಸ್ಲಾಮಿನಿಂದ ವ್ಯತಿರೇಕವನ್ನು ಬಹಿರಂಗಪಡಿಸಬೇಕು; ಈ ಕಾರಣದಿಂದ ಅವರನ್ನು ಪುಣ್ಯಭೂಮಿಗಳಲ್ಲಿ ಪ್ರವೇಶಿಸುವುದನ್ನು ತಡೆಯಬೇಕು".

(3) "ಇವರೊಡನೆ ಕ್ರಮವಿಕ್ರಯ ನಿಲ್ಲಿಸಬೇಕು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಇವರೊಡನೆ ಸಂಬಂಧವನ್ನು ಕಡಿಯಬೇಕು; ವಿವಾಹಬಂಧವನ್ನು ಉಪೇಕ್ಷಿಸಬೇಕು; ಮುಸ್ಲಿಮರ ಸ್ಮಶಾನ ಭೂಮಿಯಲ್ಲಿ ಇವರನ್ನು ದಫನು ಮಾಡಬಾರದು; ಮುಸ್ಲಿಮೇತರೊಡನೆ ವರ್ತಿಸುವಂತೆ ಇವರೊಡನೆ ವರ್ತಿಸಬೇಕು."

(4) "ಈ ಪಾರ್ಟಿಯ ಎಲ್ಲಾ ಸ್ಥಾಪನೆಗಳನ್ನೂ ಏರ್ಪಾಡುಗಳನ್ನೂ ಯಥಾರ್ಥ ಮುಸ್ಲಿಮರಿಗೆ ಕೈವರ್ತಿಸಿ ಕೊಡಬೇಕೆಂದೂ ಯಾವನೇ ಖಾದಿಯಾನಿಯನ್ನೂ ಉದ್ಯೋಗದಲ್ಲಿ ಅಥವಾ ಬೇರೆ ಯಾವುದಾದರೂ ಕೆಲಸಕ್ಕಾಗಿ ನೇಮಿಸಬಾರದೆಂದೂ ಮುಸ್ಲಿಂ ಸರಕಾರಗಳೊಡನೆ ಅಗತ್ಯ ಪಡಿಸಬೇಕು" .. ...(ಸುನ್ನೀ ಟೈಂಸ್ 1974 ಜೂನ್ 7).

ಫೈಜಲ್ ರಾಜರ ಆಶೀರ್ವಾದದಿಂದ ಜರಗಿದ ಪ್ರಸ್ತುತ ಸಮ್ಮೇಳನ ಅಂಗೀಕರಿಸಿದ ಠರಾವು ಮತ್ತು ಇತರ ಗೊತ್ತುವಳಿಗಳನ್ನು ಪ್ರಯೋಗಪಡಿಸಲು ಎಲ್ಲಾ ಸಹಾಯ ಸಹಕಾರಗಳನ್ನು ತಾನು ನೀಡುವನೆಂದು ಅವರು ರಾಬಿತದ ಕಾರ್ಯಕರ್ತರಿಗೆ ಭರವಸೆಯಿತ್ತರು. ತದನಂತರ ಅವರು ತನ್ನ ಈ ವಾಗ್ದಾನವನ್ನು ಸರಿಯಾಗಿ ನೆರವೇರಿಸಿದರು. ಎಲ್ಲಾ ಮುಸ್ಲಿಂ ರಾಷ್ಟ್ರಗಳಿಗೂ ಪ್ರಸ್ತುತ ಗೊತ್ತುವಳಿಯನ್ನು ಕಳುಹಿಸಿ ಅದನ್ನು ಜ್ಯಾರಿಗೊಳಿಸುವರ್ಕ್ಕೆ ರಾಬಿತ ವಿನಂತಿಸಿತು. ಈ ಗೊತ್ತುವಳಿಯ ಪ್ರಧಾನ ಲಕ್ಷ

ಪಾಕಿಸ್ತಾನವಾಗಿತ್ತು. ಅದನ್ನು ಪ್ರಯೋಗದಲ್ಲಿ ತರಲು ಮೊತ್ತಮೊದಲಿಗೆ ಕುತ್ಸಿತ ಪ್ರಯತ್ನ ನಡೆಸಿದ್ದೂ ಅಲ್ಲೇ ಆಗಿದೆ. ಅದು ಒಂದು ಮಿತಿಯಲ್ಲಿ ವಿಜಯವನ್ನೂ ಗಳಿಸಿತು.

### ರಂಗೆ ಸಜ್ಜೀಕರಣದ ಹಿನ್ನೆಲೆ

ರಾಬಿತದ ಈ "ಮುಸ್ಲಿಂ ಸಂಘಟನಾ ಕಾನ್ಫರೆನ್ಸ್" ನಡೆದದ್ದು 1974 ಎಪ್ರಿಲ್ ಮಾಸಾರಂಭದಲ್ಲಿ. ಅದಕ್ಕಿಂತ ಸುಮಾರು ಒಂದೂವರೆ ತಿಂಗಳ ಮೊದಲು (ಫೆಬ್ರುವರಿಯ ಕೊನೆಯಲ್ಲಿ) ಮೇಲೆ ಹೇಳಿದ ಲಾಹೋರ್ ಶೃಂಗ ಸಭೆ ಜರಗಿದ್ದು. ಆ ಸಂದರ್ಭದಲ್ಲಿ ಮಿ। ಭುಟ್ಟೋ ಮತ್ತು ಕೆಲವು ಮುಸ್ಲಿಂ ರಾಷ್ಟ್ರನಾಯಕರು ಅಹ್ಮದಿಯಾ ಸಂಘಟನೆಯ ವಿರುದ್ಧವಾಗಿ ಗೂಢಾಲೋಚನೆಗಳನ್ನು ನಡೆಸಿ ಕೆಲವು ತೀರ್ಮಾನಗಳನ್ನು ಕೈಗೊಂಡಿದ್ದರು.

ಅಹ್ಮದಿಯಾ ಸಂಘಟನೆಗೆ ಸಂಬಂಧಿಸಿದ ಬಹುಸಂಖ್ಯಾತ ಮುಸ್ಲಿಮರ ಕೇಳಿಕೆ ಜಾರಿಗೆ ಬರಬೇಕೆಂದು ಫೈಜಲ್ ರಾಜ ಭುಟ್ಟೋರಿಗೆ ನಿರ್ದೇಶಿಸಿದರು. ಕರ್ನಲ್ ಗದ್ದಾಫಿ, ಹುಸೈನ್ ರಾಜ ಮತ್ತು ಇದಿ ಅಮೀನ್ ಅದನ್ನು ಬೆಂಬಲಿಸಿದವರ ಪೈಕಿ ಕೆಲವರು. ಭುಟ್ಟೋರೊಡನೆ ಪ್ರಸ್ತುತ ರಾಷ್ಟ್ರನಾಯಕರು ಹಾಗೆ ಶಿಫಾರಸು ಮಾಡಿದ್ದು ಪಾಕಿಸ್ತಾನದ ಸಂಪ್ರದಾಯವಾದಿ ಮುಲ್ಲಾಗಳ ಪ್ರೇರಣೆಯನುಸಾರವಾಗಿದೆ. ಶೃಂಗಸಭೆಯಲ್ಲಿ ಮೌಲಾನಾಗಳು ಸದಸ್ಯರಲ್ಲವಾಗಿದ್ದರೂ ಅವರು ಹಲವು ರಾಷ್ಟ್ರನಾಯಕರೊಡನೆ ಆ ಸಂದರ್ಭದಲ್ಲಿ ಲಾಹೋರಿನಲ್ಲಿ ಸಂದರ್ಶನ ನಡೆಸಿದ್ದರು. ಮಾತ್ರವಲ್ಲ, ಅಹ್ಮದಿಯಾ ಸಂಘಟನೆಯ ಕುರಿತು ಎಷ್ಟೋ ಮೊದಲೇ ಫೈಜಲ್ ರಾಜರ ಮೇಲೆ ಪ್ರಭಾವ ಬೀರುತ್ತಿದ್ದರು. ಕೊನೆಗೆ ಫೈಜಲ್‌ರಿಗೆ ಕೂಡ ಈ ಸಂಗತಿಯಲ್ಲಿ ಆಸಕ್ತಿಯುಂಟಾಯಿತು. ಅದಕ್ಕೆ ಒಂದು ಪ್ರಧಾನ ಕಾರಣವಿದೆ. ತಾನು 'ಖಲೀಫತುಲ್ ಮುಸ್ಲಿಮೀನ್' (ಮುಸ್ಲಿಮರ ಖಲೀಫ) ಆಗಿ ಅಭಿಷೇಕಗೊಳ್ಳಲು ಮಾರ್ಗವನ್ನು ಸುಗಮಗೊಳಿಸುವುದಾಗಿತ್ತು ಅದು.

### ಫೈಜಲರನ್ನು ಖಲೀಫ ಮಾಡಲಿಕ್ಕಾಗಿ

ಅಲ್ಲಾಹು ಮುಸ್ಲಿಮರಿಗೆ ವಾಗ್ದಾನ ಮಾಡಿದ 'ಖಿಲಾಫತ್', ನಂತರ ಕಾಲದಲ್ಲಿ ರಾಜಾಧಿಪತ್ಯವಾಗಿ ರೂಪಾಂತರಗೊಂಡಿದ್ದರೂ ಪ್ರಥಮ ಲೋಕ ಮಹಾಯುದ್ಧದ ಅಂತ್ಯದ ವರೆಗೆ ಅದರ ಪಾರಂಪರ್ಯ ನಾಮ ಮಾತ್ರವಾಗಿ ನೆಲೆಗೊಂಡಿತ್ತು. ಕೊನೆಗೆ ಖಾತ್ತಮುನ್ನಬಿಯ್ಯೀನರಾದ ಮುಹಮ್ಮದ್ ಪೈಗಂಬರ (ಸ.)ರ ಭವಿಷ್ಯ ನುಡಿಯ ಪ್ರಕಾರ ವಾಗ್ದತ್ತ ಮಹ್‌ದೀ ಮಸೀಹ್ (ಅ.) ಮುಖೇನ ನುಬುವ್ವತಿನ ಮಾರ್ಗದಲ್ಲಿ ಇಸ್ಲಾಮಿಕ ಖಿಲಾಫತ್ ಪುನಃ ಸ್ಥಾಪಿತವಾದ ನಂತರ ಮೇಲೆ ಹೇಳಿದ ನಾಮ ಮಾತ್ರ ಖಿಲಾಫತ್–ತುರ್ಕಿಯ ಉಸ್ಮಾನಿಯಾ ಆಡಳಿತೆ–ಕೊನೆಗೊಂಡಿತು. ಈ ಸತ್ಯವನ್ನು ತಿಳಿದು ಕೊಳ್ಳದ ಬಹುಸಂಖ್ಯಾತ ಮುಸ್ಲಿಮರು ತಮ್ಮ ಕರಬಲದಿಂದ ಇಸ್ಲಾಮಿಕ ಖಿಲಾಫತನ್ನು ಪುನಃ ಸ್ಥಾಪಿಸಲು ಹಲವಿಧ ಪ್ರಯತ್ನಮಾಡಿ ಅರ್ಧ ಶತಮಾನ ಕಾಲದಿಂದ ಪರಾಜಯಗೊಂಡಿದ್ದರು. ಕಡೆಗೆ, ಪ್ರಸ್ತುತ ಐತಿಹಾಸಿಕ ಲಾಹೋರ್ ಶೃಂಗಸಭೆಯಲ್ಲಿ ಆಲೋಚನೆ ಇನ್ನೊಮ್ಮೆ ತಲೆಯೆತ್ತಿತು. ಪ್ರಶ್ನೆಯನ್ನು ಎತ್ತಿದವರು ಮಿ। ಇದಿ ಅಮೀನ್. ಅವರು ಅದರ ಕೆಲವು ತಿಂಗಳ ಮೊದಲೇ ಈ ಸಂಗತಿ ಉಗಾಂಡದಲ್ಲೂ ನಂತರ ಹಜ್ಜ್ ಯಾತ್ರೆಗೆ ಹೋದಾಗ ಮಕ್ಕಾದಲ್ಲೂ ಪ್ರಸ್ತಾಪಿಸಿದ ವಾರ್ತೆಗಳು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಆ ಪ್ರಸ್ತಾಪನೆಗಳಲ್ಲಿ ಮುಸ್ಲಿಂ ಲೋಕಕ್ಕೆ ನಾಯಕ ಮತ್ತು ಖಲೀಫ ಆಗಿ ಒಬ್ಬ ವ್ಯಕ್ತಿಯ ಅತ್ಯಾವಶ್ಯಕತೆ ಇದೆಯೆಂದೂ ಆ ಸ್ಥಾನಕ್ಕೆ ಇಂದು ಎಲ್ಲಾ ರೀತಿಯಲ್ಲಿ ಅರ್ಹನೂ ಯೋಗ್ಯನೂ ಆಗಿ ಕಾಣಲ್ಪಡುವುದು ಫೈಜಲ್ ರಾಜರೆಂದೂ ತಾನು ಈ ಸಂಗತಿ ಸದ್ಯದಲ್ಲೇ ನಡೆಯಲಿರುವ ಲಾಹೋರ್ ಶೃಂಗಸಭೆಯಲ್ಲಿ ಸಾದರ ಪಡಿಸುವೆನೆಂದೂ ಇದಿ ಅಮೀನ್ ಒಂದಕ್ಕಿಂತ ಹೆಚ್ಚು ಬಾರಿ ಬಹಿರಂಗಪಡಿಸಿದ್ದರು. ನಂತರ ಲಾಹೋರ್ ಶೃಂಗಸಭೆಯಲ್ಲಿ ಅಮೀನ್ ತನ್ನ ಪ್ರಸ್ತುತ ಗೊತ್ತುವಳಿಯನ್ನು ಮಂಡಿಸಿದರು. ಮುಸ್ಲಿಂ ಲೋಕಕ್ಕೆ ನಾಯಕ ಮತ್ತು ಖಲೀಫರಾಗಿ ಓರ್ವ ಇರಬೇಕೆಂದೂ ಈಗ ಇಲ್ಲೇ ಖಲೀಫರನ್ನು ಆಯ್ಕೆ ಮಾಡಬೇಕೆಂದೂ ಅಮೀನ್ ತನ್ನ ಭಾಷಣದಲ್ಲಿ ಹೇಳುತ್ತಿರುವಾಗ ಎಲ್ಲರ ಕಣ್ಣುಗಳು ಫೈಜಲ್ ರಾಜರ ಕಡೆಗೆ ಹರಿದುವು. ಆಗ ಫೈಜಲರು ಲಜ್ಜಾಭಾವದಿಂದ ತಲೆತಗ್ಗಿಸಿದರು. ಆ ಸಂದರ್ಭದಲ್ಲಿ ಸಮ್ಮೇಳನದ ಅಧ್ಯಕ್ಷರಾಗಿದ್ದ ಮಿ। ಭುಟ್ಟೋ ಇದು ಗುಪ್ತಸಭೆಯಲ್ಲಿ ಚರ್ಚಿಸ ಬೇಕಾದ ವಿಷಯವೆಂದು ಹೇಳಿ ಆ ವಿಷಯವನ್ನು ಬದಲಾಯಿಸಿದರು. (ಡೆಲ್ಲಿಯಿಂದ ಹೊರಡುವ 'ಮುಸ್ತಖೀಂ' ಎಂಬ ಪತ್ರಿಕೆಯಲ್ಲಿ ಇದು ವರದಿಯಾಗಿತ್ತು. ಈ ಶೃಂಗಸಭೆ ಜರಗಿಸಲಿಕ್ಕೆ ಖರ್ಚಾದ

28ಕೋಟಿ ಡಾಲರ್‌ಗಳನ್ನು ಫೈಜಲ್ ರಾಜ ನೀಡಿದರೆಂದು ಸಹ ಪ್ರಸ್ತುತ ವರದಿಯಲ್ಲಿ ಹೇಳಲಾಗಿದೆ).

ನಂತರ ಇದಕ್ಕೆ ಸಂಬಂಧಿಸಿದ ರಹಸ್ಯ ಸಭೆಯಲ್ಲಿ ಕೈಗೊಂಡ ತೀರ್ಮಾನವೇನೆಂದು ಸ್ಪಷ್ಟವಾಗಿ ತಿಳಿಯಲು ಸಾಧ್ಯವಾಗಲಿಲ್ಲ. ಆದರೂ ಫೈಜಲ್ ಖಲೀಫಯಾಗಲಿಕ್ಕೆ ಪ್ರಯತ್ನಿಸಿದ್ದರೆಂಬುದಕ್ಕೆ ಬೇರೆ ಸಾಕ್ಷ್ಯಗಳಿವೆ.

ಹಿಂದಿನ ಖಲೀಫರುಗಳು ಖಿಲಾಫತಿನ ಪವಿತ್ರ ಚಿಹ್ನೆಯಾಗಿ ಸಂರಕ್ಷಿಸಿದ, ಈಗ ಇಸ್ತಾಂಬೂಲಿನ ಮ್ಯೂಸಿಯಮಿನಲ್ಲಿ ಸುರಕ್ಷಿಸಲಾಗಿರಿಸಿದ ಸ್ಮಾರಕ ವಸ್ತುಗಳನ್ನು ತನಗೆ ಕೈವರ್ತಿಸಬೇಕೆಂದು ಫೈಜಲ್ ರಾಜ ತುರ್ಕಿ ಸರಕಾರದೊಡನೆ ಅಗತ್ಯಪಡಿಸಿದ್ದರೆಂದು 'ಗುನ್ಯೆಡಿನ್' ಎಂಬ ತುರ್ಕಿ ಪತ್ರಿಕೆಯ ವರದಿಯನ್ನು ಉದ್ಧರಿಸಿ ಬೊಂಬಾಯಿಯ ಟೈಂಸ್ ಓಫ್ ಇಂಡಿಯಾ (2-3-74) ಪತ್ರಿಕೆ ಬರೆದಿತ್ತು. ಪ್ರತಿಫಲವಾಗಿ ಕಡಿಮೆ ದರದಲ್ಲಿ ತೈಲವನ್ನು ನೀಡಲಾಗುವುದೆಂದು ಓಫರ್ ಮಾಡಿಯೂ ತುರ್ಕಿ ಸರಕಾರ ಅದಕ್ಕೊಪ್ಪಲಿಲ್ಲವೆಂದು ಪ್ರಸ್ತುತ ವರದಿಯಲ್ಲಿ ಹೇಳಲಾಗಿದೆ. ತಾನು ಖಲೀಫನಾಗಿ ಅಭಿಷೇಕಗೊಳ್ಳಲು ಫೈಜಲ್ ಸಜ್ಜೀಕರಣ ಚಟುವಟಿಕೆ ನಡೆಸಿದ್ದರೆಂಬುದಕ್ಕೆ ಇದೊಂದು ಯೋಗ್ಯ ಸಾಕ್ಷ್ಯವಾಗಿದೆ. ಲಾಹೋರಿನ ಮೇಲೆ ಹೇಳಿದ ರಹಸ್ಯ ಸಭೆಯ ತೀರ್ಮಾನ ಫೈಜಲರನ್ನು ಖಲೀಫ ಸ್ಥಾನಕ್ಕೆ ಏರಿಸುವುದಾಗಿತ್ತೆಂಬುದಕ್ಕೆ ಇದೊಂದು ರುಜುವಾತು. ಅವರನ್ನು ಖಲೀಫತುಲ್ ಮುಸ್ಲಿಮೀನ್ ಎಂದು ಪ್ರಖ್ಯಾಪಿಸುವುದಕ್ಕೆ ಮುಂಚಿತವಾಗಿ ಅಹ್ಮದಿಯಾ ಜಮಾಅತನ್ನು ಸದೆಬಡಿಯುವುದು ಹಾಗೂ ಅಮುಸ್ಲಿಮರೆಂದು ಮುದ್ರೆಯೊತ್ತುವುದು ಅನಿವಾರ್ಯ ಕಾರ್ಯವೆಂದು ಅವರೂ ಇತರ ನಾಯಕರೂ ತೀರ್ಮಾನಿಸಿದರು. ಏಕೆಂದರೆ ಅಹ್ಮದಿಯಾ ಜಮಾಅತಿಗೆ ಖಲೀಫ ಇದ್ದಾರೆ. ಅವರ ಆಧ್ಯಾತ್ಮಿಕ ನೇತೃತ್ವದಲ್ಲಿ ಲೋಕದಲ್ಲಿಡೀ ಇಸ್ಲಾಮಿಕ ಪ್ರವರ್ತನೆಗಳು ನಡೆದು ಬರುತ್ತಿವೆ. ಆದ್ದರಿಂದ ಮುಸ್ಲಿಮರಲ್ಲಿ ಇಬ್ಬರು ಖಲೀಫರುಗಳು ಇರುವಾಗ ಇತರರ ಮನಸ್ಸಿನಲ್ಲಿ ಗೊಂದಲ ಉಂಟಾಗುತ್ತದೆ. ಆದುದರಿಂದ ಈ ಸಮಸ್ಯೆಗೆ ಪರಿಹಾರ ಹುಡುಕ ಬೇಕು. ಆ ಹೊಣೆಯನ್ನು ಭುಟ್ಟೋ ವಹಿಸಿಕೊಂಡರು.

ಲಾಹೋರ್ ಶೃಂಗಸಭೆ ಜರಗಿದ ಒಂದು ತಿಂಗಳ ನಂತರ ಮೇಲೆ ಹೇಳಿದ ಮಕ್ಕಾ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಅಂಗೀಕರಿಸಲಾದ ಅಹ್ಮದಿಯಾ ವಿರುದ್ಧ ಗೊತ್ತುವಳಿಯನ್ನು ಪ್ರಯೋಗದಲ್ಲಿ ತರಲು ಜವಾಬ್ದಾರಿಕೆಯನ್ನು ತಾನು ವಹಿಸಿಕೊಂಡದ್ದಾಗಿ ಫೈಜಲ್ ರಾಜ ಪ್ರಸ್ತಾವಿಸಿದ್ದರೆಂದು ಮೇಲೆ ಹೇಳಿದುದನ್ನು ಸ್ಮರಿಸಿರಿ. ಅವರು ಆ ಹೊಣೆಯನ್ನು ಮಿ। ಭುಟ್ಟೋರಿಗೆ ಒಪ್ಪಿಸಿಕೊಟ್ಟರು. ಹಾಗೆ ಎರಡು ಸಮ್ಮೇಳನಗಳ ತೀರ್ಮಾನಗಳನ್ನು ಜ್ಯಾರಿಗೊಳಿಸುವ ಕಾರ್ಯವನ್ನು ಮಿ। ಭುಟ್ಟೋ ವಹಿಸಿ ಕೊಂಡರು. ಅವರು ಅದನ್ನು ನಿರ್ವಹಿಸಲಿಕ್ಕಾಗಿ ಪರಿಶ್ರಮ ಆರಂಭಿಸಿದರು.

### ಭುಟ್ಟೋ ಹಂಚಿಕೆ

ಅಹ್ಮದಿಯರನ್ನು ಸದೆಬಡಿಯಲಿಕ್ಕೂ ಅಮುಸ್ಲಿಮರೆಂದು ಕೀಳಾಗಿ ಕಾಣಲಿಕ್ಕೂ ಸ್ವಂತ ಆಸಕ್ತಿ ಇಲ್ಲವಾಗಿದ್ದರೂ ಸ್ಥಾನಾರೂಢರಾಗಿದ್ದ ಸಮರ್ಥರಾದ ಮಿ। ಭುಟ್ಟೋ ಅವರು ಮೇಧಾವಿತ್ವ ಕರಗತ ಮಾಡಲು ಇದೊಂದು ಸುವರ್ಣಾವಕಾಶವೆಂದು ತಿಳಿದು ಕೊಂಡರು. ಮುಸ್ಲಿಮರೆಲ್ಲಾ ಏಕೀಭವಿಸುವ ಒಂದು ಕಾರ್ಯ ಅಹ್ಮದಿಯಾ ವಿರುದ್ಧ ಪ್ರವರ್ತನೆಯಾಗಿದೆಯೆಂದು ಅವರು ಹಲವು ಸಲ ಪ್ರಸ್ತಾಪಿಸಿದ್ದಾರೆ. ಮಾತ್ರವಲ್ಲ. ಪಿ. ಪಿ. ಪಾರ್ಟಿಯಲ್ಲಿ ಸಣ್ಣ ಪುಟ್ಟ ಭಿನ್ನತೆಗಳಿದ್ದ ಸಂದರ್ಭವಾಗಿತ್ತು ಅದು. ಆದ್ದರಿಂದ ಪಾರ್ಟಿಯನ್ನೂ ಪ್ರತಿಪಕ್ಷವನ್ನೂ ಫೈಜಲ್ ರಾಜರನ್ನೂ ಇತರ ಮುಸ್ಲಿಂ ರಾಷ್ಟ್ರ ನಾಯಕರನ್ನೂ ಎಲ್ಲಾ ತೃಪ್ತಿ ಪಡಿಸಲಿಕ್ಕೂ ಅವರ ಪ್ರೀತಿಯನ್ನು ಸಂಪಾದಿಸಲಿಕ್ಕೂ ಅಹ್ಮದಿಯಾ ಸಂಘಟನೆಯನ್ನು ಸದೆಬಡಿಯಲೇ ಬೇಕೆಂದು ಅವರು ತಿಳಿದು ಕೊಂಡರು. "ತೊಂಭತ್ತು ವರ್ಷ ಹಳೆಯದಾದ ಖಾದಿಯಾನಿ ಪ್ರಶ್ನೆಗೆ ಪರಿಹಾರವನ್ನುಂಟು ಮಾಡಿದ ಪಕ್ಷದಲ್ಲಿ ನಮ್ಮ ದಾಡಿಯಿಂದ ಭುಟ್ಟೋರ ಬೂಟ್ಸನ್ನು ಸ್ವಚ್ಛಗೊಳಿಸಿ ಕೊಡುವೆವು" ಎಂದು ಪ್ರತಿಪಕ್ಷದ ಮೌಲಾನಗಳು ಹೇಳಿದುದಾಗಿ ಪತ್ರಿಕಾ ವರದಿ ಇತ್ತು.

ಹಾಗೆ ಕುಶಾಗ್ರ ಬುದ್ಧಿಯ ಭುಟ್ಟೋ ಈ ಕೃತ್ಯ ನಿರ್ವಹಣೆಗಾಗಿ ಸನ್ನದ್ಧರಾದರು. ಆದರೂ ಅವರಿಗೆ ಸ್ವಲ್ಪ ಅಂಜಿಕೆ ಉಂಟಾಯಿತು. ಶುದ್ಧಾಚಾರದ ಅಹ್ಮದಿಯರನ್ನು, ತಾವು ವಾಸಿಸುವ ರಾಷ್ಟ್ರದೊಡನೆ ಸಂಪೂರ್ಣವಾಗಿ ಸಹಭಾಗಿಯಾಗಿರುವ ಪೌರರನ್ನು, ಯಾವ ಸಂದರ್ಭದಲ್ಲೂ ಶಿಸ್ತನ್ನೂ ನಿಯಮವನ್ನೂ ಉಲ್ಲಂಘಿಸದೆ ಇಸ್ಲಾಮಿನ

ನೀತಿಗೆ ಮಾದರಿಯಾಗಿರುವ ಮನುಷ್ಯಸ್ನೇಹಿಗಳನ್ನು, ಅಷ್ಟು ಮಾತ್ರವಲ್ಲ, ತನ್ನನ್ನೂ ತನ್ನ ಪಾರ್ಟಿಯನ್ನೂ ಚುನಾವಣೆಯಲ್ಲಿ ಜಯಗೊಳಿಸಿ ಅಧಿಕಾರಕ್ಕೇರಿಸಿದ ರಾಜಕೀಯ ಸಹಕಾರಿಯಾದ ಒಂದು ಸಂಘಟನೆಯನ್ನು ವಿನಾ ಕಾರಣ ಸದೆಬಡಿಯಲು ನ್ಯಾಯೀಕರಣವಿಲ್ಲವೆಂದು ಅರಿತ ಭುಟ್ಟೋ ಪ್ರತಿಪಕ್ಷದವರೊಡನೆ ಸೇರಿಕೊಂಡು ಒಂದು ಕೃತ್ರಿಮ ನ್ಯಾಯೀಕರಣ ಉಂಟು ಮಾಡಿದರು. ಅದರ ಮರೆಯಲ್ಲಿದ್ದು ಕೊಂಡು ನಿರಪರಾಧಿಗಳಾದ ಅಹ್ಮದಿಯರನ್ನು ಅಕ್ರಮಿಗಳೆಂದು ಚಿತ್ರೀಕರಿಸಲು ಭುಟ್ಟೋರಿಗೆ ಸಾಧ್ಯವಾಯಿತು. ಅದು ಹೇಗೆಂದು ಇಲ್ಲಿ ವಿವರಿಸೋಣ.

### ಆಕ್ರಮಣದ ಆರಂಭ

ಮುಲ್ತಾನಿನ ನಿಶ್ತರ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ಒಂದು ಸ್ಟಡಿಟೂರ್ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಅದಕ್ಕಾಗಿ ಅವರಿಗೆ ಪೇಶಾವರಕ್ಕೆ ಹೋಗಬೇಕಾಗಿತ್ತು. ಅಲ್ಲಿಗೆ ಸುಲಭದಾರಿ ಲಾಹೋರ್ ಮಾರ್ಗವಾಗಿ ಹೋಗುವುದಾಗಿದೆ. ಆದರೆ ಆ ದಾರಿಯಲ್ಲಿ ಹೋಗದೆ ರಬ್ವಾ ಮಾರ್ಗವಾಗಿ ಪ್ರಯಾಣಿಸಬೇಕೆಂದು ಅವರಿಗೆ ನಿರ್ದೇಶಿಸಲಾಯಿತು. ಮಾತ್ರವಲ್ಲ, ಗಾಡಿ ರಬ್ವಾ ಸ್ಟೇಶನಿಗೆ ತಲಪಿದರೆ "ಅಹ್ಮದಿಯರಿಗೆದುರಾಗಿ ವರ್ತಿಸಿ ಅವರು ರೇಗಿ ನಿಮ್ಮ ಮೇಲೆ ಆಕ್ರಮಣ ಮಾಡುವಂತಹ ಸ್ಥಿತಿಯನ್ನುಂಟು ಮಾಡಬೇಕು; ಅಥವಾ ಅಹ್ಮದಿಯರು ಪ್ರಕೋಪಗೊಳ್ಳದ ಪಕ್ಷದಲ್ಲಿ ನೀವೇ ಪರಸ್ಪರ ಹೊಡೆದಾಡಿ ರಕ್ತ ಹರಿಯಿಸಬೇಕು" ಎಂದು ಸಹ ವಿದ್ಯಾರ್ಥಿಗಳಿಗೆ ಆದೇಶ ನೀಡಲಾಗಿತ್ತು. ಇವೆಲ್ಲಾ ಭುಟ್ಟೋರ ಸಮರ್ಥವಾದ ಉಪಾಯವಾಗಿತ್ತು. ನಂತರ ಜಸ್ಟಿಸ್ ಸಮದಾನಿ ನಡೆಸಿದ ವಿಚಾರಣೆಯಲ್ಲಿ ಆ ವಿದ್ಯಾರ್ಥಿಗಳ ಪೈಕಿ ಒಬ್ಬ ನೀಡಿದ ಸಾಕ್ಷಿನುಡಿಯಿಂದ ಈ ಸಂಗತಿ ಬಯಲಾಯಿತು.

ಸಂಕ್ಷಿಪ್ತವಾಗಿ ಹೇಳುವುದಾದರೆ ಮಿ। ಭುಟ್ಟೋ ಈ ಕಾರ್ಯದಲ್ಲಿ ಜಯಗಳಿಸಿದರು. ನಿಶ್ಚಿತ ದಿನದಂದು ವಿದ್ಯಾರ್ಥಿಗಳ ಸ್ಪೆಶಲ್ ಬೋಗಿಗಳನ್ನು ಜೋಡಿಸಿದ ಟ್ರೈನ್ ರಬ್ವಾ ತಲಪಿತು. ವಿದ್ಯಾರ್ಥಿಗಳು ಅವರೊಡನೆ ನಿರ್ದೇಶಿಸಲ್ಪಟ್ಟದ್ದನ್ನೆಲ್ಲಾ ಮಾಡಿ ತೋರಿಸಿದರು. ಮೊದಲು ಅವರು ಕೆರಳಿಸುವಂತಹ ಘೋಷಣೆಗಳನ್ನು ಕೂಗಿದರು. ಗಾಡಿಯಿಂದ ಕೆಳಗಿಳಿದು ಪ್ಲಾಟ್‌ಫೋರ್ಮಿನಲ್ಲೆಲ್ಲಾ ಪೈಶಾಚಿಕವಾಗಿ ವರ್ತಿಸಿದರು. ಅವರ ಪೈಕಿ ಕೆಲವರು ಸ್ತ್ರೀಯರ ವೈಟಿಂಗ್ ರೂಮಿನೊಳಗೆ ನುಗ್ಗಿ ಸ್ತ್ರೀಯರಿಗೆ ಕಿರುಕುಳ ಕೊಟ್ಟರು. ತಮ್ಮ ಬಟ್ಟೆಗಳನ್ನು ಕಳಚಿ ನಗ್ನರಾಗಿ ನೃತ್ಯಮಾಡಿದರು. ಸ್ತ್ರೀಯರೊಡನೆ ಅಸಭ್ಯವಾಗಿ ಮಾತನಾಡಿದರು. ಈ ಕೋಲಾಹಲವನ್ನು ಕೇಳಿ ಪಟ್ಟಣದಿಂದ ಕೆಲವು ಯುವಕರು ಓಡಿಬಂದು ಆಕ್ರಮಿಗಳನ್ನು ಎದುರಿಸಿದರು. ಎಳೆದಾಟ, ಹೊಯ್ದಾಟ ನಡೆಯಿತು. ತಡಮಾಡದೆ ಗಾಡಿ ಬಿಡಲು ಸಿಳ್ಳು ಹೊಡೆಯಲಾಯಿತು. ಆಕ್ರಮಿಗಳು ಓಡಿ ಹತ್ತಿದರು, ಗಾಡಿ ಹೊರಟಿತು.

ಈ ಸಂಘರ್ಷದಲ್ಲಿ ರಕ್ತ ಹರಿಯಲಿಲ್ಲ. ಆದ್ದರಿಂದ ಆಕ್ರಮಿಗಳ ಉದ್ದೇಶ ನೆರವೇರಲಿಲ್ಲ.

"ಹಿಂತಿರುಗಿ ಬರುವಾಗ ತೋರಿಸಿ ಕೊಡುವೆವು" ಎಂದು ಆಕ್ರಮಿಗಳು ಹೇಳಿದ್ದರೂ ಇದೊಂದು ಸಂಚಿನ ಯೋಜನೆಯೆಂದಾಗಲಿ ಇದರ ಹಿಂದೆ ಪಾಕಿಸ್ತಾನ್ ಸರಕಾರ ಮತ್ತು ಕೆಲವು ಅರಬ್ ರಾಷ್ಟ್ರಗಳು ಇವೆಯೆಂದಾಗಲಿ ಒಂದು ಸೂಚನೆಯನ್ನಾದರೂ ತಿಳಿಯದ ಅಹ್ಮದಿಯರು ಇದನ್ನು ಒಂದು ಆಕಸ್ಮಾತ್ ಸಂಭವವೆಂದು ಪರಿಗಣಿಸಿದ್ದರು ಅವರು ಇದನ್ನು ದೊಡ್ಡ ಸಂಗತಿ ಮಾಡಲಿಲ್ಲ. ಪೋಲೀಸರಿಗೆ ಮಾತ್ರ ತಿಳಿಸಿದರು. ಆದರೆ, ಪೋಲೀಸರು ಸಹ ಆಕ್ರಮಿಗಳ ಬೆಂಬಲಿಗರಾಗಿದ್ದರೆಂಬ ವಾಸ್ತವಾಂಶ ನಂತರ ತಿಳಿಯಿತು.

ಪೇಶಾವರಕ್ಕೆ ವ್ಯಾಸಂಗ ಪರ್ಯಟನೆಗೆ ಹೋದ ವಿದ್ಯಾರ್ಥಿಗಳು ಕೆಲವು ದಿನಗಳ ನಂತರ ಅದೇ ದಾರಿಯಾಗಿ ಹಿಂತಿರುಗಿದರು. ಅವರು ಆಕ್ರಮಣದ ಸರ್ವ ಸಜ್ಜೀಕರಣ ಸಹಿತ ಪೇಶಾವರದಿಂದ ಹೊರಟಿದ್ದರು. ಎಸೆಯಲು ಬೇಕಾದಂತಹ ಕಲ್ಲುಗಳನ್ನು ಅವರು ಧಾರಾಳ ಸಂಗ್ರಹಿಸಿದರು. ರೈಲುಗಾಡಿ ರಬ್‌ವಾ ಗಡಿಯನ್ನು ತಲಪುತ್ತಲೇ ಇಕ್ಕೆಡೆಗಳಿಗೂ ಅವರು ಕಲ್ಲೆಸೆಯಲು ತೊಡಗಿದರು. ನಾನಾ ಕಡೆಗೆ ತೀವ್ರವಾಗಿ ಕಲ್ಲೆಸೆದರು. ಆಗ ಕೆಲವು ಅಹ್ಮದಿ ಯುವಕರು ಓಡಿ ಬಂದು ಆಕ್ರಮಗಳಿಗೆದುರಾಗಿ ಕಲ್ಲೆಸೆದರು. ಆಕ್ರಮಿಗಳು ಎಸೆದ ಕಲ್ಲುಗಳನ್ನೇ ಅವರು ಅಧಿಕಾಂಶ ಪ್ರತಿರೋಧಿಸಲಿಕ್ಕೆ ಪ್ರಯೋಗಿಸಿದರು. ಎರಡು ಕಡೆಗಳಲ್ಲೂ ಹಲವರಿಗೆ ಗಾಯಗಳಾಯಿತು. ಆದರೆ ಗಂಭೀರವಾಗಿ ಯಾರೂ ಗಾಯಗೊಳ್ಳಲಿಲ್ಲ. ಆದರೂ

ಆಕ್ರಮಿಗಳ ಉದ್ದೇಶ ಪೂರೈಸಿತು. ಅವರು ತಮ್ಮ ಶರೀರದ ಭಾಗಗಳಲ್ಲಿ ರಕ್ತ ಕಂಡಾಗ ಶಾಂತರಾದರು. ಇಷ್ಟಾಗುವಾಗ ಸಂಗತಿ ತಿಳಿದು ಪಟ್ಟಣದಿಂದ ಪೋಲೀಸರೂ ರಬ್ವಾದ ಕೆಲವು ಡಾಕ್ಟರರೂ ಜವಾಬ್ದಾರಿಕೆಯುಳ್ಳ ಕೆಲವು ಅಹ್ಮದಿ ಉದ್ಯೋಗಸ್ಥರೂ ರೈಲ್ವೇ ಸ್ಟೇಷನಿಗೆ ಓಡಿ ತಲಪಿದರು. ನಡೆದ ಘಟನೆಗೆ ಸಂತಾಪವನ್ನು ತೋರಿ ಶಾಂತಿ ಸ್ಥಾಪಿಸಲು ಪ್ರಯತ್ನಿಸಿದರು. ಗಾಯಗೊಂಡವರಿಗೆ ಪ್ರಥಮ ಚಿಕಿತ್ಸೆ ಮಾಡಲು ಅವರು ತೊಡಗಿದರು. ಆದರೆ ಆಕ್ರಮಿಗಳು ಅದಕ್ಕೆ ಒಪ್ಪಲಿಲ್ಲ. ತಮಗೆ ಯಾವ ಶುಶ್ರೂಷೆಯೂ ಬೇಡವೆಂದು ಅವರು ಹಠ ಹಿಡಿದರು.

ಇಷ್ಟರ ವರೆಗಿನ ವಿದ್ಯಮಾನವಾಗಿದ್ದರೂ ಇದರ ಮರೆಯಲ್ಲಿ ವರ್ಣಿಸಿದ ಕರಾಳ ಕರಗಳ ಬಗ್ಗೆ ಅಹ್ಮದಿಯರಿಗೆ ತಿಳಿದಿರಲಿಲ್ಲ.

ರೈಲುಗಾಡಿ ಮುಲ್ತಾನ್ ಸ್ಟೇಶನ್ ತಲಪುತ್ತಲೇ ಆಕ್ರಮಿಗಳನ್ನು ಸ್ವಾಗತಿಸಲಿಕ್ಕಾಗಿ ಜನರ ಒಂದು ದೊಡ್ಡ ಗುಂಪು ಲೌಡ್ ಸ್ಪೀಕರ್ ಮತ್ತು ಇನ್ನಿತರ ಸಿದ್ಧತೆಗಳ ಸಹಿತ ಕಾದು ನಿಂತಿತ್ತು. ನಡೆದದ್ದೆಲ್ಲಾ ಮೊದಲೇ ಮಾಡಿದ ಸಂಚಾಗಿತ್ತು. ರಬ್ವಾದಲ್ಲಿ ಅಹ್ಮದಿಯರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳನ್ನು ವಿನಾಕಾರಣ ಆಕ್ರಮಿಸಿದರು ಎಂದು ಅವರು ಮುಗಿಲೆತ್ತರ ಆಕ್ರೋಶ ಮಾಡಿದರು. ತತ್ಫಲವಾಗಿ ಪಾಕಿಸ್ತಾನದ ಎಲ್ಲೆಡೆಗಳಲ್ಲಿ ಅಹ್ಮದಿಯರಿಗೆ ದುರಾಗಿ ವಿದ್ವೇಷಾಗ್ನಿ ಪ್ರಜ್ವಲಿಸ ತೊಡಗಿತು. ಅದಕ್ಕಾಗಿ ಎಲ್ಲಾ ವಾರ್ತಾ ಮಾಧ್ಯಮಗಳನ್ನು ಸರಕಾರದ ಬೆಂಬಲದಿಂದ ಶತ್ರುಗಳು ಉಪಯೋಗಿಸಿದರು. ಕ್ಷುಲ್ಲಕ ಸಂಗತಿಗಳನ್ನು ಬಹಳ ದೊಡ್ಡದು ಮಾಡಿ ತೋರಿಸಿದರು. ಜೀವ ಕಳಕೊಂಡವರು, ಕಣ್ಣು ಕಳಕೊಂಡವರು, ಮೂಗು, ಕಿವಿ, ಅಂಗ ಮೊದಲಾದವು ಛೇದಿಸಲ್ಪಟ್ಟವರು ಇಂತಿಷ್ಟು ಜನರೆಂದು ಒಂದು ಸುಳ್ಳುಪಟ್ಟಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ನಿಜವಾಗಿಯೂ ಯಾರಿಗೂ ಅಂಗಊನ ಉಂಟಾಗಿರಲಿಲ್ಲ. ಕೇವಲ ಅಲ್ಪ ಸ್ವಲ್ಪ ಗಾಯಗಳಾಗಿದ್ದುವು. ಆದರೆ ಸುಳ್ಳು ವದಂತಿಗಳನ್ನು ಉದ್ದೇಶ ಪೂರ್ವಕವಾಗಿ ಪ್ರಚಾರಗೊಳಿಸುವವರಿಗೆ ಸತ್ಯ ಸಂಗತಿ ಬಹಿರಂಗಗೊಳ್ಳುವುದು ಬೇಕಾಗಿರಲಿಲ್ಲ. ಅಷ್ಟಾಗುವಾಗ ಪಾಕಿಸ್ತಾನದ ನಾನಾಭಾಗಗಳಲ್ಲಿ, ಮುಖ್ಯವಾಗಿ ಪಂಜಾಬಿನಲ್ಲಿ, ಮೊದಲೇ ಸಿದ್ಧಿಪಡಿಸಿದ ಗೂಂಡಾಗಳು ಅಹ್ಮದಿಯರನ್ನು ವ್ಯಾಪಕವಾಗಿ ಆಕ್ರಮಿಸಲು ತೊಡಗಿದರು. ಕೊಲೆ, ಕೊಳ್ಳಿ ಇಡುವುದು, ಕೊಳ್ಳೆ ಹೊಡೆಯುವುದು ಎಲ್ಲೆಲ್ಲೂ ಸಂಭವಿಸಿತು. ಅಲ್ಪ ಸಂಖ್ಯಾತ ಅಹ್ಮದಿಯರಿಗೆ ಆಕ್ರಮಿಗಳನ್ನು ಎದುರಿಸಲು ಸಾಧ್ಯವಾಗಲಿಲ್ಲ. ಪೋಲೀಸು ಮತ್ತು ಭುಟ್ಟೋರ ಫೆಡರಲ್ ಸೆಕ್ಯೂರಿಟಿ ಫೋರ್ಸ್ ಸಹ ಆಕ್ರಮಿಗಳ ನೆರವಿಗಿದ್ದರು. ಅಹ್ಮದಿಯರು ಪ್ರಧಾನ ಮಂತ್ರಿಗೂ ಮುಖ್ಯಮಂತ್ರಿಗಳಿಗೂ ಗವರ್ನರ್‌ಗಳಿಗೂ ಪೋಲೀಸ್ ಮೇಲಧಿಕಾರಿಗಳಿಗೂ ತಂತಿಗಳನ್ನೂ ನಿವೇದನೆಗಳನ್ನೂ ಕಳುಹಿಸಿದರು. ಆದರೆ ಯಾವ ಫಲವೂ ಉಂಟಾಗಲಿಲ್ಲ. ಮಾತ್ರವಲ್ಲ ರಬ್ವಾದಲ್ಲೂ ಇನ್ನಿತರ ಸ್ಥಳಗಳಲ್ಲೂ ಅನೇಕ ಅಹ್ಮದಿಯರನ್ನು ಕಾರಣವಿಲ್ಲದೆ ಬಂಧಿಸಲಾಯಿತು. ಪ್ರತ್ಯೇಕ ಕಾರ್ಯಕ್ರಮ ಪ್ರಕಾರ ಸಜ್ಜುಗೊಳಿಸಿದ ಗೂಂಡಾಗಳಿಂದ ಆಕ್ರಮಣಗಳು ನಡೆಸಲ್ಪಟ್ಟವು. ಅವರಿಗೆ ವ್ಯವಸ್ಥಿತ ವೇತನ ಸಹ ನೀಡಲಾಯಿತು. ಅದಕ್ಕಾಗಿ ಪ್ರತ್ಯೇಕ 9 ಕೋಟಿ ಡಾಲರ್ ವಿದೇಶಗಳಿಂದ ನೀಡಲಾಗಿತ್ತೆಂದು ವರದಿ ಇದೆ. ಇದರ ಮೇಲ್ನೋಟ ವಹಿಸಿದ್ದು ಸಂಪ್ರದಾಯವಾದಿ ಮೌಲಾನಗಳಾಗಿದ್ದರು. ಈ ಆಕ್ರಮಣ ಪ್ರವೃತ್ತಿಗಳಿಗೆ ಜಿಹಾದ್ ಎಂದು ಅವರು ನಾಮಕರಣ ಮಾಡಿದರು.

ಮೇಲೆ ಹೇಳಿದ ರಬ್ವಾ ಘಟನೆ ಸಂಭವಿಸಿದ್ದು 1974 ಮೇ ತಿಂಗಳ ಕೊನೆಯಲ್ಲಾಗಿತ್ತು. ನಂತರ ಬುಗಿಲೆದ್ದ ದಾಂದಲೆ ಜೂನ್ ತಿಂಗಳ ಕೊನೆಯ ವರೆಗೆ ಸಾಗಿತು. ನಂತರ ಅದರ ಉಗ್ರತೆ ಕಮ್ಮಿಯಾಯಿತು. ಆದರೂ ಆ ಬಳಿಕದ ಮೂರು ತಿಂಗಳ ಕಾಲ ಅಹ್ಮದಿಯರಿಗೆ ಜೀವನ ಕಷ್ಟತರದ್ದಾಗಿತ್ತು. ಅವರನ್ನು ಸಂಪೂರ್ಣವಾಗಿ ಬಹಿಷ್ಕರಿಸಲಾಯಿತು. ಅವರು ನಿಸ್ಸಹಾಯಕರಾಗಿದ್ದರು. ಹಾಗೆ ಪಾಕಿಸ್ತಾನದಲ್ಲಿ ಅಹ್ಮದಿಯರಿಗೆದುರಾಗಿ ಒಂದು "ಶಿಅಬ್ ಅಬೀತಾಲಿಬ್" (ಅಬೀತಾಲಿಬರ ಕಣಿವೆ) ಸೃಷ್ಟಿಸಲ್ಪಟ್ಟಿತು. ಇವೆಲ್ಲಾ ನಡೆದದ್ದು ಭುಟ್ಟೋ ಮತ್ತು ಪ್ರತಿಪಕ್ಷ ನಾಯಕರಾದ ಮೌಲಾನಾ ಮೌದೂದಿ, ಮೌಲಾನಾ ಮುಫ್ತಿ ಮಹ್‌ಮೂದ್, ಮೌಲಾನಾ ನೂರಾನಿ ಮೊದಲಾದ ಪಂಡಿತ ನೇತಾರರು ಮತ್ತು ರಾಬಿತ ಒಂದುಗೂಡಿ ಮಾಡಿದ ಸಂಚಿನ ಕಾರ್ಯಕ್ರಮದ ಅನುಸಾರವಾಗಿತ್ತು. ಅದರಲ್ಲಿ ಒಂದು ಸಂಗತಿ ಪ್ರತ್ಯೇಕ ಗಮನಾರ್ಹವಾಗಿದೆ. ಮೌದೂದಿ ಸಾಹೇಬರು ಚಿಕಿತ್ಸೆಗಾಗಿ ಅಮೇರಿಕಕ್ಕೆ ಹೋಗಿದ್ದರು. ಮೇಲೆ ಹೇಳಿದ ಅಹ್ಮದಿಯಾ ವಿರುದ್ಧ ಕೋಲಾಹಲ ಪರಾಕಾಷ್ಠೆಗೆ ಮುಟ್ಟಿದ ಸಂದರ್ಭದಲ್ಲಿ ಅವರು ಹಿಂತಿರುಗಿ ಬಂದರು. ಆಗ ಪತ್ರಿಕೆಗಳಲ್ಲಿ ಒಂದು ವಾರ್ತೆ

ಪ್ರಕಟವಾಯಿತು. ಅಕ್ರಮ ವರ್ತನೆಗಳು ಇಸ್ಲಾಮಿಕವಲ್ಲವೆಂದೂ ಅಂತಹ ಕೃತ್ಯಗಳನ್ನು ತಾನು ವಿರೋಧಿಸುತ್ತೇನೆಂದೂ ಮೌಲಾನಾ ಮೌದೂದಿ ಹೇಳಿದರೆಂಬ ಅರ್ಥದಲ್ಲಾಗಿತ್ತು ಆ ವಾರ್ತೆ. ಇದು ಮೌಲಾನಾರ ಗಮನಕ್ಕೆ ಬಂದಾಗ ಅವರು ಆ ವಾರ್ತೆಯನ್ನು ಅಲ್ಲಗಳೆದು ಒಂದು ಹೇಳಿಕೆ ಹೊರಡಿಸಿದರು. ತಾನು ಹಾಗೆ ನುಡಿದಿಲ್ಲವೆಂದು ಅವರು ವ್ಯಕ್ತಪಡಿಸಿದರು. ಅದರ ಪರಿಣಾಮವೇನೆಂದು ಹೇಳಬೇಕಾಗಿಲ್ಲವಷ್ಟೇ.

## ಪತ್ರಿಕಾಗೋಷ್ಠಿ

ಅಹ್ಮದಿಯರಿಗೆ ವಿರುದ್ಧವಾಗಿ ಅಕ್ರಮಗಳು ಪರಾಕಾಷ್ಠೆಗೆ ತಲಪಿದಾಗ ಹಝ್ರತ್ ಝಫರುಲ್ಲಾ ಖಾನ್ ಸಾಹೇಬರು ಲಂಡನಿನಲ್ಲಿ ಒಂದು ಪತ್ರಿಕಾಗೋಷ್ಠಿಯನ್ನು ಕರೆದು ಪ್ರಸ್ತುತ ಅಕ್ರಮಗಳಿಗೆದುರಾಗಿ ಲೋಕದ ಮನಸ್ಸಾಕ್ಷಿಯನ್ನು ಎಚ್ಚರಿಸಿದರು. ಅವರ ಹೇಳಿಕೆ ಯುರೋಪು ಮತ್ತು ಅಮೇರಿಕದ ಪತ್ರಿಕೆಗಳಲ್ಲಿ ಬಹಳ ಪ್ರಾಧಾನ್ಯತೆಯಿಂದ ಪ್ರಕಟವಾಯಿತು. ಭಾರತದ ಪತ್ರಿಕೆಗಳಲ್ಲೂ ಆ ವಾರ್ತೆ ವರದಿಯಾಗಿತ್ತು. ರಬ್‌ವಾದಲ್ಲಿ ಅಹ್ಮದಿಯಾ ನೇತಾರರಾದ ಹಝ್ರತ್ ಖಲೀಫತುಲ್ ಮಸೀಹ್‌ರವರು ಸಹ ಒಂದು ಪತ್ರಿಕಾಗೋಷ್ಠಿಯ ಮೂಲಕ ಪ್ರಸ್ತುತ ಅಕ್ರಮಗಳನ್ನು ಖಂಡಿಸಿದರು. ಇವೆರಡೂ ಸಹ ಭುಟ್ಟೋರಿಗೆ ದೊಡ್ಡ ತಲೆನೋವು ಉಂಟುಮಾಡಿತು. ಏಕೆಂದರೆ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಮರ್ದನೆ ನಡೆಯುತ್ತಿದೆಯೆಂದು ಲೋಕದಲ್ಲಿಡೀ ಪ್ರಚಾರಗೊಂಡಿತ್ತು. ಮಿ। ಭುಟ್ಟೋ ವಿದೇಶಗಳಲ್ಲಿರುವ ಪಾಕಿಸ್ತಾನ ರಾಯಭಾರಿಗಳ ಮುಖಾಂತರ ವಿರುದ್ಧ ಹೇಳಿಕೆಗಳನ್ನು ಹೊರಡಿಸಿ ಕತ್ತಲೆಯಿಂದ ದ್ವಾರಮುಚ್ಚಲು ಪ್ರಯತ್ನಿಸಿದರೂ ಅದು ಫಲಕಾರಿಯಾಗಲಿಲ್ಲ. ಅಷ್ಟಾಗುವಾಗ, ಅಹ್ಮದಿಯರ ಜೀವ ಮತ್ತು ಸೊತ್ತುಗಳನ್ನು ಸಂರಕ್ಷಿಸಬೇಕೆಂದೂ ಅವರೊಡನೆ ನೀತಿಯಿಂದ ವರ್ತಿಸಬೇಕೆಂದೂ 'ಆ್ಯಂನಸ್ಟಿ ಇಂಟರ್‌ನ್ಯಾಶನಲ್' ಭುಟ್ಟೋ ಸರಕಾರವನ್ನು ವಿನಂತಿಸಿತು. ಅಲ್ಲದೆ, ವಿದೇಶಗಳ ಅಹ್ಮದಿಯಾ ಮಿಶನುಗಳಿಂದ ಪಾಕಿಸ್ತಾನಕ್ಕೆ ತಂತಿಗಳು ಪ್ರವಹಿಸಿದುವು. ಇಷ್ಟಾಗುವಾಗ ಮಿ। ಭುಟ್ಟೋ ಶಾಂತಿಯನ್ನು ಕಾಪಾಡಲಿಕ್ಕೂ ಅಕ್ರಮಗಳನ್ನು ಕೊನೆಗೊಳಿಸಲಿಕ್ಕೂ ಕ್ರಮ ಕೈಗೊಂಡರು. ಹಾಗೆ ಕೊಲೆ, ಕೊಳ್ಳೆ, ಕೊಳ್ಳಿಡುವಿಕೆ ನಿಂತಿತು. ಆದರೂ ಅಹ್ಮದಿಯರಿಗೆದುರಾಗಿ ಬಹುಸಂಖ್ಯಾತರ ವೈರತ್ವ ಮತ್ತು ಬಹಿಷ್ಕಾರ ಹೆಚ್ಚು ಶಕ್ತಿಗಳಿಸಿತು. ಒಂದು ಸಂಗತಿ ಪ್ರತ್ಯೇಕ ಉಲ್ಲೇಖಾರ್ಹವಾಗಿದೆ. ಪ್ರಸ್ತುತ ಅಲ್ಪಸಂಖ್ಯಾತರ ಮರ್ದನ ನಡೆದುಕೊಂಡಿದ್ದಾಗ ಅದನ್ನು ವಿರೋಧಿಸಿ ಲೋಕದ ನಾನಾ ಭಾಗಗಳಿಂದ ಹಲವು ಮುಸ್ಲಿಮೇತರ ನೇತಾರರು ಹೇಳಿಕೆಗಳನ್ನು ಹೊರಡಿಸಿದರು ಮತ್ತು ಪತ್ರಿಕೆಗಳು ಸಂಪಾದಕೀಯ ಬರೆದುವು. ಮುಸ್ಲಿಮರಲ್ಲಿ ಕೆಲವು ಮನುಷ್ಯಸ್ನೇಹಿಗಳು ಸಹ ಅಕ್ರಮಗಳಿಗೆ ವಿರೋಧವನ್ನು ಸೂಚಿಸಿದರು. ಆದರೆ, ಮಾನವೀಯತೆಗೂ ಇಸ್ಲಾಮಿಕ ಅಧ್ಯಾಪನೆಗಳಿಗೂ ಕಟುವಿರುದ್ಧವಾದ ಆ ಅಕ್ರಮಕೃತ್ಯಗಳನ್ನು ವಿರೋಧಿಸಿ ಹೆಸರುವಾಸಿಯಾದ ಯಾವೊಬ್ಬ ಮುಸ್ಲಿಂ ನಾಯಕನೂ ಚಕಾರವೆತ್ತಲಿಲ್ಲ. ಬರೆಯಲೂ ಇಲ್ಲ. ತದ್ವಿರುದ್ಧವಾಗಿ ಹಲವು ಮುಸ್ಲಿಂ ಪತ್ರಿಕೆಗಳೂ ಮುಸ್ಲಿಂ ನೇತಾರರೂ ಅಕ್ರಮಿಗಳಿಗೆ ತಾಳಹಾಕಿದರು. 'ಜಮಾತೆ ಇಸ್ಲಾಮಿ'ಯ ಪ್ರಬೋಧನಂ ಪತ್ರಿಕೆ ಸಹ ಆ ಪೈಕಿಯಲ್ಲಿ ಸೇರುತ್ತದೆ.

## ನಾಶ ನಷ್ಟಗಳು

ಲಭ್ಯ ವರದಿಗಳ ಆಧಾರದಿಂದ ಆ ಗೊಂದಲವಲ್ಲಿ ಅಹ್ಮದಿಯರಿಗೆ ಸಂಭವಿಸಿದ ನಾಶನಷ್ಟಗಳ ಲೆಕ್ಕ ಸಂಕ್ಷಿಪ್ತವಾಗಿ ಈ ಪ್ರಕಾರವಾಗಿದೆ:–

ನೂರರಷ್ಟು ಅಹ್ಮದಿಯರು ಕೊಲ್ಲಲ್ಪಟ್ಟರು. ಸಾವಿರಾರು ಮಂದಿ ಗಾಯಗೊಂಡರು. ಹೆಚ್ಚಿನವು ಗಂಭೀರ ಗಾಯಗಳು. ಅವರಲ್ಲಿ ಅಂಗಾಂಗಗಳನ್ನು ಕಳಕೊಂಡವರಿದ್ದಾರೆ. ಅಕ್ರಮಿಗಳು ಎಳೆಯ ಕೂಸುಗಳನ್ನು ಮನೆಯ ಮಾಳಿಗೆಯಿಂದ ಹೊರಕ್ಕೆಸೆದರು. ಓರ್ವ ಅಹ್ಮದಿಯ ಮೂಗನ್ನು ಕತ್ತರಿಸಲಾಯಿತು. ಹಲವರ ಕೈಕಾಲುಗಳನ್ನು ತುಂಡರಿಸಲಾಯಿತು. ಮತ್ತೋರ್ವರನ್ನು ಜೀವಸಹಿತ ಹುಗಿದರು. ಮತ್ತೋರ್ವರ ಕೈಕಾಲು ಗಳನ್ನು ಬಂಧಿಸಿ ವಸ್ತ್ರಕ್ಕೆ ಪೆಟ್ರೋಲ್ ಸುರಿದು ಬೆಂಕಿಕೊಡಲಾಯಿತು. ಸಾವಿರಾರು ಮನೆಗಳನ್ನೂ ಅಂಗಡಿಗಳನ್ನೂ ಕೊಳ್ಳೆಹೊಡೆಯಲಾಯಿತು. ಅನೇಕ ಮನೆಗಳಿಗೂ ಅಂಗಡಿಗಳಿಗೂ ಬೆಂಕಿ ಇಡಲಾಯಿತು. ಐವತ್ತಕ್ಕೆ ಮಿಕ್ಕಿದ ಅಹ್ಮದಿಯಾ ಮಸೀದಿಗಳು ಅಗ್ನಿಗಾಹುತಿಯಾದುವು. ಹಲವು ಮಸೀದಿಗಳನ್ನು ವೈರಿಗಳು ಕೈವಶಪಡಿಸಿ ಕೊಂಡರು. ಪವಿತ್ರ ಖುರ್‌ಆನಿನ (ಭಾಷಾಂತರ ಸಹಿತ) ಸಾವಿರಗಟ್ಟಲೆ ಪ್ರತಿಗಳನ್ನು ಸುಟ್ಟುಹಾಕಿದರು. ಅಹ್ಮದಿಯರ ಅನೇಕ ಬಸ್ಸುಗಳನ್ನೂ ಕಾರು

ಗಳನ್ನೂ ಲೋರಿಗಳನ್ನೂ ಮೋಟಾರ್ ಸೈಕಲುಗಳನ್ನೂ ಟ್ರ್ಯಾಕ್ಟರ್‌ಗಳನ್ನೂ ನಾಶ ಪಡಿಸಿದರು. ಜಾನುವಾರುಗಳನ್ನು ಬಲಾತ್ಕಾರದಿಂದ ಹಿಡಿದು ಕೊಂಡು ಹೋದರು. ತೋಟಗಳನ್ನು ಕಡಿದು ನಾಶಪಡಿಸಿದರು. ಕೃಷಿಗಳಿಗೆ ನಾಶವನ್ನುಂಟು ಮಾಡಿದರು. ಹಾಗೆ ದಶಕೋಟಿಗಟ್ಟಲೆ ರೂಪಾಯಿಗಳ ನಾಶನಷ್ಟವುಂಟಾಯಿತು. ಸೊತ್ತು ನಾಶದ ಲೆಕ್ಕ ಹಾಕಲು ಸಾಧ್ಯವಾಗದಷ್ಟು ಅಧಿಕತರವಾಗಿತ್ತು. ಭುಟ್ಟೋ ಸರಕಾರದ ಉದ್ದೇಶ ಪ್ರಧಾನವಾಗಿ ಅಹ್ಮದಿಯರನ್ನು ಆರ್ಥಿಕವಾಗಿ ಸದೆಬಡಿಯುವುದಾಗಿತ್ತು. ಅದರಲ್ಲಿ ಅವರಿಗೆ ಒಂದು ಮಿತಿಯಲ್ಲಿ ವಿಜಯವುಂಟಾಯಿತು. ಅದು ಸಹ 'ರಾಬಿತ'ದ ಠರಾವಿನಲ್ಲಿ ಒಳಗೊಂಡದ್ದಲ್ಲವೇ.

ಇಷ್ಟೆಲ್ಲಾ ಅಕ್ರಮಂಗಳು (ಕೊಲೆ, ಕೊಳ್ಳೆಹೊಡೆಯುವುದು ಮತ್ತು ಕೊಳ್ಳಿಡುವುದು) ನಡೆದರೂ ಕೂಡ ಒಂದೇ ಒಂದು ಕೇಸನ್ನಾದರೂ ಪೋಲೀಸು ದಾಖಲೆ ಮಾಡಿ ತನಿಖೆ ಮಾಡಲಿಲ್ಲವೆಂಬುದು ಪ್ರತ್ಯೇಕ ಉಲ್ಲೇಖಾರ್ಹ. ಹಲವು ಸ್ಥಳಗಳಲ್ಲಿ ಪೋಲೀಸರು ಅಕ್ರಮಿಗಳಿಗೆ ಸಹಾಯವಿತ್ತರು.

ಆದರೆ ರಬ್‌ವಾ ಸಂಭವದ ಕುರಿತು ವಿಚಾರಣೆ ಮಾಡಲು ಜಸ್ಟಿಸ್ ಸಮದಾನಿಯ ನೇತೃತ್ವದಲ್ಲಿ ಒಂದ ನಿಯೋಗವನ್ನು ಮಿ। ಭುಟ್ಟೋ ನೇಮಿಸಿದರು ನೀತಿಪೂರ್ವಕವಾಗಿ ನಡೆಸಿದ ಆ ವಿಚಾರಣೆ ಪ್ರತಿಪಕ್ಷದವರಿಗೆ ಇಷ್ಟವಾಗಲಿಲ್ಲ. ಅದು ಅಹ್ಮದಿಯರಿಗೆ ಅನುಕೂಲಕರವಾಗಿದೆಯೆಂದು ಅವರ ವಾದವಾಗಿದೆ. ಜಸ್ಟಿಸ್ ಸಮದಾನಿ ಅಹ್ಮದಿಯಲ್ಲ. ಆದರೆ ಅವರು ನೀತಿಪೂರ್ವಕವಾಗಿ ವಿಚಾರಣೆ ನಡೆಸಿದ್ದರು. ಅವರು ಭುಟ್ಟೋರಿಗೆ ತನ್ನ ವರದಿಯನ್ನು ಸಲ್ಲಿಸಿದರು. ಆದರೆ ಆ ವರದಿ ಇಷ್ಟರ ತನಕ ಬೆಳಕು ಕಾಣಲಿಲ್ಲ. ಅದು ಬಹಿರಂಗವಾದರೆ ರಬ್‌ವಾ ಸಂಭವದಲ್ಲಿ ಅಹ್ಮದಿಯರು ನಿರಪರಾಧಿಗಳೆಂಬ ಸತ್ಯ ಬಯಲಾದೀತು. ಅದು ಸಂಚಿನ ಕಾರ್ಯಕ್ರಮಕ್ಕೆ ಅಡ್ಡಿಯಾದೀತಲ್ಲವೇ. ಭುಟ್ಟೋ ಅಷ್ಟು ಮೂರ್ಖನಾಗಿರಲಿಲ್ಲ.

### ಮೂರು ಶರ್ತಗಳು

ಈ ದುರಂತ ನಾಟಕದ ನಾಯಕರು ತಮ್ಮ ಅಕ್ರಮವರ್ತನೆಗಳನ್ನು ನಿಲ್ಲಿಸಲಿಕ್ಕೆ ಮೂರು ಪ್ರಧಾನ ಶರ್ತಗಳನ್ನು ಮಿ। ಭುಟ್ಟೋರ ಮುಂದೆ ಒಡ್ಡಿದರು.

(1) ಅಹ್ಮದಿಯರನ್ನು ಅಮುಸ್ಲಿಮರೆಂದು ಸರಕಾರ ಘೋಷಿಸಬೇಕು.

(2) ಪ್ರಧಾನ ಉದ್ಯೋಗಗಳಲ್ಲಿರುವ ಅಹ್ಮದಿ ಉದ್ಯೋಗಸ್ಥರನ್ನು ಕಡ್ಡಾಯ ನಿವೃತ್ತಿಗೊಳಿಸಬೇಕು.

(3) ರಬ್‌ವಾವನ್ನು ಓಪನ್ ಪಟ್ಟಣವೆಂದು ಸಾರಬೇಕು.

ಇವು ಕನಿಷ್ಠ ಕೇಳಿಕೆಗಳೆಂದೂ ಇಷ್ಟಾದರೂ ಅಂಗೀಕರಿಸಲ್ಪಟ್ಟರೆ ಮಾತ್ರ ತಾವು ಗೊಂದಲಗಳನ್ನು ನಿಲ್ಲಿಸುವೆವೆಂದೂ ಪ್ರತಿಪಕ್ಷದವರು ಹಠ ಹಿಡಿದರು. ಈ ಕೇಳಿಕೆಗಳಿಗಾಗಿ ಅವರು ರಾಷ್ಟ್ರವ್ಯಾಪಕವಾಗಿ ಘೋಷಣೆ, ಮೆರವಣಿಗೆ, ಹರತಾಳಗಳನ್ನೂ ನಡೆಸಿದರು. 'ರಾಬಿತ'ದಿಂದ ಭುಟ್ಟೋರಿಗೆ ಆಗಿಂದಾಗ್ಗೆ ತಂತಿಗಳು ಬರುತ್ತಿದ್ದುವು. "ಖಾದಿಯಾನಿಗಳ ಆಕ್ರಮಣಗಳಿಂದ ಮುಸ್ಲಿಮರನ್ನು ರಕ್ಷಿಸಿರಿ" ಎಂದಾಗಿತ್ತು ತಂತಿವಾಕ್ಯ.

### ವಿಚಾರಣೆ ಸಮಿತಿ

ಈ ನಾಟಕದ ಪ್ರಧಾನ ನಾಯಕನಾದ ಮಿ। ಭುಟ್ಟೋ ಒಬ್ಬ ನೀತಿವಂತನ ಪಾತ್ರವನ್ನು ಅಭಿನಯಿಸಿ ಪಾರ್ಲಿಮೆಂಟಿನ ವತಿಯಿಂದ ಒಂದು ವಿಚಾರಣೆ ಸಮಿತಿಯನ್ನು ನೇಮಿಸಿ ಅಲ್ಲಿ ಎರಡು ಪಕ್ಷದವರಿಗೂ ತಂತಮ್ಮ ವಾದಗಳನ್ನೂ ಸಾಕ್ಷ್ಯಗಳನ್ನೂ ಸಲ್ಲಿಸಲು ಸಂದರ್ಭ ಒದಗಿಸಿ ಕೊಟ್ಟರು. ವಾಸ್ತವದಲ್ಲಿ ಇದೆಲ್ಲಾ ಭುಟ್ಟೋ ಮತ್ತು ಪ್ರತಿಪಕ್ಷದವರ ಒಳಸಂಚಾಗಿತ್ತು ಆದರೆ ಅಹ್ಮದಿಯಾ ಜಮಾಅತಿನ ಇಮಾಂ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ (ಖಲೀಫತುಲ್ ಮಸೀಹ್ *III*) ಅವರು ಈ ಸಮಿತಿಯ ಮುಂದೆ ಹಾಜರಾಗಿ ಅಹ್ಮದಿಯರು ಮುಸ್ಲಿಮರೆಂದು ಸಾಕ್ಷ್ಯಪಡಿಸುವ ರುಜುವಾತುಗಳನ್ನು ಸಮರ್ಪಿಸಿದರು. ಪ್ರತಿಪಕ್ಷದವರು ವಿರುದ್ಧ ನ್ಯಾಯವಾದಗಳನ್ನು ಮಂಡಿಸಿದರು. ಎರಡೂ ಪಕ್ಷದವರ ವಾದಗಳೂ ಪ್ರಶ್ನೋತ್ತರಗಳೂ ಕೆಲವು ವಾರಗಳ ವರೆಗೆ ಮುಂದುವರಿಯಿತು.

ಕೊನೆಗೆ ಸಪ್ಟೆಂಬರ್ 7ನೇ ತಾರೀಕಿನಂದು (1974) ನ್ಯಾಶನಲ್ ಅಸೆಂಬ್ಲಿಯನ್ನು ಕರೆಯಲಾಯಿತು. ಅವರು ಮೊದಲೇ ತೀರ್ಮಾನಿಸಿದ ಪ್ರಕಾರ ಅಹ್ಮದಿಯರು ಮುಸ್ಲಿ

ಮರಲ್ಲವೆಂಬ ಒಂದು ತಿದ್ದುಪಡಿಯನ್ನು ಸಂವಿಧಾನದಲ್ಲಿ ಮಾಡಿದರು.

### ಭುಟ್ಟೋರಿಗೆ ಶ್ಲಾಘನೆ

ಇದರಿಂದಾಗಿ ಪಾಕಿಸ್ತಾನದ ರಾಜದಂಡಧಾರಿಯಾದ ಭುಟ್ಟೋರ ಕೀರ್ತಿಯ ಕಿರೀಟದಲ್ಲಿ ಒಂದು ದೊಡ್ಡ ಗರಿ ಮೂಡಿತು. 90 ವರ್ಷ ಹಳೆಯ 'ಖಾದಿಯಾನಿ ಸಮಸ್ಯೆ'ಗೆ 90 ದಿನಗಳೊಳಗೆ ಪರಿಹಾರವನ್ನುಂಟು ಮಾಡಿದ ವಿಜೇತ ನೆಂಬ 'ಗೌರವ'ಕ್ಕೆ ಅವರು ಪಾತ್ರರಾದರು. ಹಲವು ಮುಸ್ಲಿಂ ನೇತಾರರು ಅವರನ್ನು ಅತ್ಯಧಿಕ ಅಭಿನಂಧಿಸಿದರು. ಮುಸ್ಲಿಂ ಪತ್ರಿಕೆಗಳು ಕೊಂಡಾಡಿದುವು. ಕರಾಚಿಯ 'ಡಾನ್' (Dawn) ಪತ್ರಿಕೆ ಬರೆದ ಸಂಪಾದಕೀಯ ಹೀಗಿದೆ:

"ಖಾಯಿದೆ ಅವಾಂ ಜುಲ್ಫಿಕರ್ ಅಲಿ ಭುಟ್ಟೋರ ಐತಿಹಾಸಿಕವಾದ ಈ ಕೆಲಸವು ಅವರ ಹೆಸರನ್ನು ಪಾಕಿಸ್ತಾನದ ಚರಿತ್ರೆಯಲ್ಲಿ ಬೆಳಗುವಂತೆ ಮಾಡಿದೆ. ಇಂದು ಸಮಸ್ತ ಮುಸ್ಲಿಂ ಲೋಕವು ಅವರನ್ನು ಗೌರವ ಭಾವದಿಂದ ಕಾಣುತ್ತದೆ. ಅವರ ವಿರೋಧಿಗಳು ಸಹ ಈ ಕಾರ್ಯಕ್ಕಾಗಿ ಅವರನ್ನು ಹೊಗಳುತ್ತಿದ್ದಾರೆ. ಪಾಕಿಸ್ತಾನದ ಅಹ್ಮದಿಯಾ ಮುಸ್ಲಿಮರನ್ನು ಮುಸ್ಲಿಮೇತರ ಅಲ್ಪ ಸಂಖ್ಯಾತರಾಗಿ ಘೋಷಿಸಿದ ಆ ತೀರ್ಮಾನವು ಪಾಕಿಸ್ತಾನದ ಚರಿತ್ರೆಯಲ್ಲಿ ಮಾತ್ರವಲ್ಲ, ಇಸ್ಲಾಂ ಧರ್ಮದ ಚರಿತ್ರೆಯಲ್ಲೇ ಅತಿ ಪ್ರಸಿದ್ಧವಾದ ಹಾಗೂ ಅಭಿಮಾನಕರವಾದ ಒಂದು ಕೆಲಸವಾಗಿದ್ದು ಈ ಸಾಧನೆಯ ಕೀರ್ತಿಯು ಪ್ರಧಾನ ಮಂತ್ರಿ ಜುಲ್ಫಿಕರ್ ಅಲಿ ಭುಟ್ಟೋರಿಗೆ ಸಲ್ಲುತ್ತದೆ. ಪ್ರಧಾನ ಮಂತ್ರಿಯವರು ಈ ವಿವಾದಕ್ಕೆ (ಅಹ್ಮದಿಯಾ ವಿವಾದಕ್ಕೆ) ಒಂದು ತೀರ್ಮಾನವನ್ನುಂಟು ಮಾಡಿ ಸಮಸ್ತ ಮುಸ್ಲಿಂ ಜನಾಂಗದ ಅಂತಃಕರಣವನ್ನು ಜಯಿಸಿಕೊಂಡಿದ್ದಾರೆ; ಮಾತ್ರವಲ್ಲ ದೇವರ ಮತ್ತು ಪೈಗಂಬರರ ಅನುಗ್ರಹಗಳನ್ನೂ ಸಂಪಾದಿಸಿ ಕೊಂಡಿದ್ದಾರೆ. ಈ ನಿರ್ಣಯವು ರಾಷ್ಟ್ರವನ್ನೂ ಇಸ್ಲಾಂ ಧರ್ಮವನ್ನೂ ಸಂರಕ್ಷಿಸಿದೆ". (ಡಾನ್, ಕರಾಚಿ, ಆದಿತ್ಯವಾರ 8-9-1974)

ಹೀಗೆ ಇನ್ನೂ ಹಲವು ಮುಸ್ಲಿಂ ಪತ್ರಿಕೆಗಳು ಭುಟ್ಟೋ ಸಾಹೇಬರನ್ನು ಹೊಗಳಿ ಸಂಪಾದಕೀಯ ಬರೆದುವು. ನಾನಾಕಡೆಗಳಿಂದ ಮುಸ್ಲಿಂ ನಾಯಕರ ಶುಭಾಶಯಗಳು ಅವರ ಬಳಿಗೆ ಪ್ರವಹಿಸಿದುವು. ಭುಟ್ಟೋ ಮತ್ತು ಸಂಗಡಿಗರು ಆಹ್ಲಾದದಲ್ಲಿ ಮೈಮರೆತರು.

### ಭುಟ್ಟೋರಿಗೆ ಮುನ್ನೆಚ್ಚರಿಕೆ

ಆದರೆ ಅಂದು 'ಸತ್ಯದೂತನ್' ಪತ್ರಿಕೆಯಲ್ಲಿ 'ಒಬ್ಸರ್ವರ್' ಬರೆದ ಲೇಖನ ಹೀಗಿದೆ:

"ಪ್ರವಾದಿಗಳ ಆಧ್ಯಾತ್ಮಿಕ ಸಂಘಟನೆಗಳಿಗೆ ರಾಜಕೀಯ ಘೋಷಣೆಗಳು ಹೊಸತಲ್ಲ. ಸತ್ಯವಿಶ್ವಾಸಿಗಳು ಅವುಗಳನ್ನು ತೃಣಸಮಾನವಾಗಿ ಗಣಿಸಿದ್ದರೆಂದು ಚರಿತ್ರೆ ಹೇಳುತ್ತದೆ. ನಂರೂದ್‌ಗಳೂ ಫರೋವಾಗಳೂ ಆಳಿದ ಅದೇ ಸುತ್ತುಬರುವ ಭೂಮಿಯಲ್ಲೇ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಸಹ ಪ್ರತ್ಯಕ್ಷರಾದರು!...ಅಫ್‌ಘಾನಿಸ್ಥಾನದಲ್ಲಿ ಹಿಂದೆ ಒಬ್ಬ ರಾಜರಿದ್ದರು— ನಿರಪರಾಧಿಗಳಾದ ಅಹ್ಮದಿ ಮಿಶನರಿಗಳನ್ನು ಜನರಿಗಾಗಿ ಕಲ್ಲೆಸೆದು ಕೊಂದ ಅಮೀರ್ ಅಮಾನುಲ್ಲಾ ಖಾನ್! ಅವರು ಜನರ ಪ್ರೀತಿಗೆ ಪಾತ್ರರಾಗಿದ್ದರು. ರೋಮಿನ ಒಂದು ಹೋಟೆಲು ಕೆಲಸಗಾರನಾಗಿ ಅವರು ಮೃತಪಟ್ಟರು! ಫಾರೂಖ್ ಎಂಬ ಇನ್ನೋರ್ವ ರಾಜ ಹಿಂದೆ ಕೈರೋವನ್ನು ಆಳಿದ್ದರು. ಮುಫ್ತೀಮಖ್‌ಲೂಫರಿಂದ ಝಫರುಲ್ಲಾರಿಗೆ ವಿರುದ್ಧವಾಗಿ 'ಕುಫ್ರ್'ಫತ್ವಾ ಹೊರಡಿಸಿದ 6 ತಿಂಗಳೊಳಗೆ ಕಾಲ್ಚೆಂಡಿನಂತೆ ಹೊಡೆದು ಹಾರಿಸಲಾದ ಫಾರೂಖ್ ಅರಸನಿಗೆ ಆನೆಗಳನ್ನು ಪಳಗಿಸುವ ಸ್ಥಳದಲ್ಲಿ ಒಂದು ಕೆಲಸವನ್ನು ಓಫರ್ ಮಾಡಲಾಯಿತು! ಅವೆಲ್ಲಾ ಇಂದು ಹಳೆಯ ಕಥೆಗಳು ಮಾತ್ರ. ಮಿ। ಭುಟ್ಟೋ, ನಿಮ್ಮ ಸರದಿ ಸಹ ಬರಲಿದೆ! ಅಹ್ಮದಿಯರಾದ ನಮಗೆ ಪ್ರಾರ್ಥನೆ ಮತ್ತು ಸಹನೆಯನ್ನು ಬೋಧಿಸಲಾಗಿದೆ. ಪ್ರಾರ್ಥನೆಗಳಿಂದ ಸಾಮ್ರಾಜ್ಯಗಳು ಛಿನ್ನಭಿನ್ನವಾಗುವುದನ್ನು ನಾವು ಕಂಡಿದ್ದೇವೆ". (ಸತ್ಯದೂತನ್ 5—10—1974).

### ಉನ್ನತೋದ್ಯೋಗಸ್ಥಾನಗಳು

ಇದರೆಡೆಯಲ್ಲಿ ಪಾಕಿಸ್ತಾನದ ಸೈನ್ಯದಲ್ಲಿ ಮತ್ತು ಸಿವಿಲ್ ವಿಭಾಗಗಳಲ್ಲಿ ಉನ್ನತ ಸ್ಥಾನದಲ್ಲಿರುವ ಅಹ್ಮದಿ ಉದ್ಯೋಗಸ್ಥರನ್ನು ಮಿ। ಭುಟ್ಟೋ ನಿರ್ಬಂಧವಾಗಿ ನಿವೃತ್ತಿಗೊಳಿಸಿದರು. ಗಲಭೆಗಾರರ ಎರಡನೆಯ ಕೇಳಿಕೆ ಅದಾಗಿತ್ತಷ್ಟೆ. ಅದು 'ರಾಬಿತ'ದ ನಿರ್ದೇಶಗಳಲ್ಲಿ ಒಳ

ಗೊಂಡ ಸಂಗತಿಯೂ ಆಗಿತ್ತು. ಏರ್ ಚೀಫ್ ಮಾರ್ಷಲ್ ಝುಫರ್ ಚೌಧರಿ ಮತ್ತು ಲೆಫ್ಟಿನೆಂಟ್ ಜನರಲ್ ಅಬ್ದುಲ್ ಹಮೀದ್‌ಖಾನ್ ಉದ್ಯೋಗ ಕಳಕೊಂಡವರಲ್ಲಿ ಕೆಲವರು. ಜನರಲ್ ಟಿಕ್ಕಾಖಾನರ ರಿಟ್ಯಾರ್‌ಮೆಂಟಿನ ನಂತರ ಭೂ ಸೇನಾಧಿಪತಿಯಾಗಬೇಕಾದದ್ದು ಅಬ್ದುಲ್ ಹಮೀದ್‌ಖಾನ ರಾಗಿದ್ದರು. ಆದರೆ ಅವರನ್ನು ಭುಟ್ಟೋ ಕಡ್ಡಾಯ ನಿವೃತ್ತಿಗೊಳಿಸಿದರು. ಸೇವೆಯ ಗಣನೆಯ ಪ್ರಕಾರ ಅವರ ಉತ್ತರಾಧಿಕಾರಿಯಾಗಿ ಬರುವವರು ಸಹ ಓರ್ವ ಅಹ್ಮದಿ ಯಾಗಿದ್ದರು. ಅವರನ್ನೂ ನಿವೃತ್ತಿಗೊಳಿಸಲಾಯಿತು. ಅವರ ಕೆಳಗಿನ ಮೂರು ನಾಲ್ಕು ಜನರಲುಗಳನ್ನು ಕಡೆಗಣಿಸಿ ಮಿ। ಭುಟ್ಟೋ ಜನರಲ್ ಜಿಯಾಉಲ್‌ಹಕ್ಕರನ್ನು ಅಧಿ ಕಾರಕ್ಕೇರಿಸಿದರು.

### ರಬ್‌ವಾ ಪಟ್ಟಣ

ವಿರೋಧಿಗಳ ಮೂರನೆಯ ಕೇಳಿಕೆ ರಬ್‌ವಾವನ್ನು ಒಂದು ಓಪನ್ ಪಟ್ಟಣವನ್ನಾಗಿಸ ಬೇಕೆಂದಾಗಿತ್ತು. ಆದರೆ ಅದು ಅಹ್ಮದಿಯರು ಬೆಲೆಕೊಟ್ಟು ಖರೀದಿಸಿದ ಬಂಜರು ಭೂಮಿಯಲ್ಲಿ ನಿರ್ಮಿಸಿದ ಪಟ್ಟಣವಾದುದರಿಂದ ಅದರಲ್ಲಿ ಇಷ್ಟಾನುಸಾರ ಹಸ್ತಕ್ಷೇಪ ಮಾಡುವ ನಿಯಮಸಮ್ಮತಿ ಭುಟ್ಟೋರಿಗೆ ಸಿಗಲಿಲ್ಲ. ಆದರೆ ವಿದ್ಯಾಲಯಗಳನ್ನು ರಾಷ್ಟ್ರೀ ಕರಿಸಿದ ಕಾರಣದಿಂದ ರಬ್‌ವಾದ ಕಾಲೇಜುಗಳ ಮತ್ತು ಹೈಸ್ಕೂಲುಗಳ ಅಧ್ಯಾಪಕರನ್ನೂ ಹಾಗೆಯೇ ಇತರ ಸರ ಕಾರಿ ಸಂಸ್ಥೆಗಳ ಅಹ್ಮದಿ ಉದ್ಯೋಗಸ್ಥರನ್ನೂ ರಬ್‌ವಾ ದಿಂದ ವರ್ಗಾಯಿಸಲು ಅವರಿಗೆ ಸಾಧ್ಯವಾಯಿತು. ಭಾಗಶಃ ಬೇರೆ ಸಹ ಕೆಲವು ಹಸ್ತಕ್ಷೇಪಗಳನ್ನು ಅವರು ನಡೆಸಿದ್ದಾರೆ. ಸಾಧ್ಯವಿದ್ದಷ್ಟು ವಿಷಮತೆಗಳನ್ನು ಅಹ್ಮದಿಯರಿಗೆ ಉಂಟು ಮಾಡುವ ಕಾರ್ಯದಲ್ಲಿ ಅವರು ಕೊರತೆ ಮಾಡಲಿಲ್ಲ.

### ಭುಟ್ಟೋರ ಉಪದೇಶ

ಮಿ। ಭುಟ್ಟೋ ದೊಡ್ಡ ಪ್ರತಾಪಭಾವದಿಂದ ಅಹ್ಮ ದಿಯರಿಗೆ ಉಪದೇಶಿಸಿದರು. ಪಾರ್ಲಿಮೆಂಟಿನ ಈ ನಿರ್ಣ ಯ (ಅಹ್ಮದಿಯರು ಮುಸ್ಲಿಮರಲ್ಲವೆಂಬ)ವನ್ನು ಅಂಗೀ ಕರಿಸುವುದು ಅವರಿಗೆ ಒಳ್ಳೆಯದೆಂದು ಅವರು ಅಭಿ ಪ್ರಾಯಪಟ್ಟರು. ಅಲ್ಲದೆ, ಪಾಕಿಸ್ತಾನಿಗಳಾದ ಅಹ್ಮದಿ ಯರು ತಮಗುಂಟಾದ ಮರ್ದನೆಗಳ ಕುರಿತು ವಿದೇಶಗಳಲ್ಲಿ ಪ್ರಚಾರ ಮಾಡುವುದು ರಾಜದ್ರೋಹ ಅಪರಾಧಕ್ಕೆ ಸಮಾ ನವೆಂದು ಅವರು ಬೆದರಿಸಿದರು.

### ಇಮಾಮರ ಉಪದೇಶ

ಅಹ್ಮದಿಯಾ ಜಮಾಅತಿನ ಇಮಾಂ ಹಝ್ರತ್ ಖಲೀಫತುಲ್ ಮಸೀಹ್ *III*ರವರು ಗಲಭೆಯ ಆರಂಭ ದಿಂದಲೇ ಪೂರ್ವಕಾಲದ ಪ್ರವಾದಿಗಳ ಮತ್ತು ಅನುಚರರ ಮಾದರಿಯಲ್ಲಿ ಪ್ರಾರ್ಥನೆಯಲ್ಲಿ ಮಗ್ನರಾಗಿ ಸಹನೆಯನ್ನು ಕೈಗೊಳ್ಳಬೇಕೆಂದು ಅಹ್ಮದಿಯರಿಗೆ ಉಪದೇಶಿಸುತ್ತಿದ್ದರು. ಖುರ್‌ಆನ್ ಮತ್ತು ಹದೀಸಿನಲ್ಲಿ ಕಲಿಸಲಾದ ಕೆಲವು ಪ್ರಾರ್ಥನೆಗಳನ್ನು ಅವರು ನಿರ್ದೇಶಿಸಿದರು. ಆದರೆ ವೈರಿ ಗಳ ನಾಶಕ್ಕಾಗಿ ಅಥವಾ ಅವರಿಗೆ ದೋಷ ಉಂಟಾಗಲಿಕ್ಕೆ ಪ್ರಾರ್ಥಿಸಬಾರದೆಂದೂ ಇಸ್ಲಾಮಿನ ವಿಜಯಕ್ಕಾಗಿ ಮತ್ತು ಲೋಕದ ಏಳಿಗೆಗಾಗಿ ಪ್ರಾರ್ಥಿಸಬೇಕೆಂದೂ ಅವರು ಉಪದೇಶಿಸಿದರು. ದೇವರ ದೃಷ್ಟಿಯಲ್ಲಿ ಯಾರು ಶಿಕ್ಷಾ ರ್ಹರೋ ಅವರಿಗೆ ಅಲ್ಲಾಹು ಶಿಕ್ಷೆನೀಡುವನೆಂದೂ ಅವರು ನುಡಿದು ಅಹ್ಮದಿಯರನ್ನು ಸಾಂತ್ವನ ಪಡಿಸಿದರು.

### ಪರೀಕ್ಷಣೆಗಳು ಮತ್ತು ಶಿಕ್ಷೆಗಳು

ಸತ್ಯವಿಶ್ವಾಸಿಗಳಿಗೆ ಪರೀಕ್ಷಣೆಗಳನ್ನೂ ಶತ್ರುಗಳಿಗೆ ಶಿಕ್ಷೆಯನ್ನೂ ನೀಡುವುದು ದೇವರ ನಿಯಮದಲ್ಲಿ ಒಳ ಗೊಂಡ ಸಂಗತಿಯಷ್ಟೇ. ಅವೆರಡು ಸಹ ನಡೆಯುತ್ತಿರು ವುದನ್ನು ಕಣ್ಣಿದ್ದವರಿಗೆ ಕಾಣಲಿಕ್ಕೆ ಪ್ರಯಾಸವಿಲ್ಲ, ಇಮಾಂ ಮಹ್‌ದಿ (ಅ)ಯವರ ಆಗಮನದಿಂದ ಇಷ್ಟರ ವರೆಗೆ ಲೋಕದಲ್ಲಿ ನಡೆದ ಹಲವು ಘಟನೆಗಳು ಇದಕ್ಕೆ ಸಾಕ್ಷ್ಯಗಳಾಗಿವೆ. ಆದರೆ ಇಷ್ಟರಲ್ಲಿ ಮುಗಿಯುವುದಿಲ್ಲ. ಬಾಕಿಯದ್ದು ಸಂಭವಿಸಲಿಕ್ಕಿದೆ. ಬದುಕಿರುವವರಿಗೆ ಕಾಣ ಬಹುದು. ಇನ್‌ಷಾ ಅಲ್ಲಾಹ್.

### ಸುದೃಢ ಘೋಷಣೆ

ಪಾಕಿಸ್ತಾನದ ಪಾರ್ಲಿಮೆಂಟಲ್ಲ ಲೋಕವಿಡೀ ಏನನ್ನೇ ಪಾಸುಮಾಡಿದರೂ ನಾವು ಮುಸ್ಲಿಮರೆಂದು ಅಲ್ಲಾಹು ಮತ್ತು ಪೈಗಂಬರರು ನಮಗೆ ದೃಢೀಕರಣ ನೀಡಿರುವುದ ರಿಂದ ನಾವು ಮುಸ್ಲಿಮರೇ ಆಗಿದ್ದೇವೆಂದು ಹಝ್ರತ್ ಖಲೀಫತುಲ್ ಮಸೀಹ್ *III* ದೃಢಸ್ವರದಲ್ಲಿ ಘೋಷಿಸಿ ದರು. ಎಲ್ಲಾ ವಿಧ ವಿಷಮತೆಗಳನ್ನು ಸಹಿಸಿಕೊಂಡು ಪಾಕಿಸ್ತಾನದ ಒಳಗೆ ಮತ್ತು ಹೊರಗೆ ಅಹ್ಮದಿಯರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ದೈವಾನು ಗ್ರಹದಿಂದ ಸಂಘಟನೆಗೆ ಎಲ್ಲಾ ಸ್ಥಳಗಳಲ್ಲೂ ವಿಜಯವೇ

ಉಂಟಾಗುತ್ತಿದೆ. ವಿದೇಶ ರಾಷ್ಟ್ರಗಳಲ್ಲಿ ಹಲವು ಮಸೀದಿಗಳನ್ನೂ ವಿದ್ಯಾಲಯಗಳನ್ನೂ ಆಸ್ಪತ್ರೆಗಳನ್ನೂ ಅವರು ಸ್ಥಾಪಿಸಿದರು. ಸಂಘಟನೆಗೆ ಸೇರುವವರ ಸಂಖ್ಯೆ ಮೊದಲಿಗಿಂತ ಎಷ್ಟೋ ಹೆಚ್ಚಾಗಿರುತ್ತದೆ. (ಅಲ್ಲಾಹುವಿಗೆ ಸ್ತುತಿ). ಆದರೆ ಪಾಕಿಸ್ತಾನ್ ಸರಕಾರ ಹಲವು ವಿಷಮತೆಗಳನ್ನು ಸೃಷ್ಟಿಸುತ್ತಿದೆ. ಆದರೂ ಅಹ್ಮದಿಯರು ನಿರಾಶೆಗೊಳ್ಳುವುದಿಲ್ಲ.

## ಹಕ್ಕುದಾರಿಕೆ

ಮೇಲೆ ಹೇಳಿದ ಪಾರ್ಲಿಮೆಂಟಿನ ಘೋಷಣೆಯ ನಂತರ ಮಿ। ಭುಟ್ಟೋ, 90 ವರ್ಷ ಹಳೆಯ ಖಾದಿಯಾನಿ ಸಮಸ್ಯೆಗೆ ಪರಿಹಾರವನ್ನುಂಟು ಮಾಡಿದವನು ತಾನೆಂದು ವೀರವಾದ ಮೊಳಗಿಸುತ್ತಿದ್ದರು. ಅವರು ಮತ್ತು ಪೀಪಿಲ್ಸ್ ಪಾರ್ಟಿಯ ಉಪನಾಯಕರು ಹಲವು ಬಾರಿ ಈ ಸಂಗತಿಯನ್ನು ಅಭಿಮಾನದಿಂದ ಎತ್ತಿ ಹೇಳುತ್ತಿದ್ದರು. ಮಾತ್ರವಲ್ಲ, ತನಗೆ ಅಥವಾ ತನ್ನ ಪಾರ್ಟಿಗೆ ಸೋಲು ಕಂಡಾಗಲೆಲ್ಲಾ ಅವರು ಪ್ರಯೋಗಿಸುತ್ತಿದ್ದ ಒಂದು ತುರ್ಪ್ ಕಾರ್ಡಾಗಿತ್ತು ಅದು. ಆದರೆ, ಭುಟ್ಟೋ ಹಲವು ದಿನ ಇದರಿಂದ ಪ್ರಯೋಜನ ಪಡೆದರೂ ಪ್ರತಿಪಕ್ಷದವರು ಅವರ ಈ ವಾದವನ್ನು ಒಪ್ಪಲು ತಯಾರಾಗಲಿಲ್ಲ. ಈ 'ಮಹತ್ಕಾರ್ಯ'ವನ್ನು ಭುಟ್ಟೋ ಸ್ವಯಂ ಪ್ರೇರಿತನಾಗಿ ಮಾಡಿದುದಲ್ಲವೆಂದೂ ತಮ್ಮ ಒತ್ತಾಯಕ್ಕೆ ಮಣಿದು ಮಾಡಿದ್ದೆಂದೂ ಅವರು ವಾದಿಸಿದರು. ಕೊನೆಗೆ 1977 ಸಪ್ಟೆಂಬರ್ 3ರಂದು ಭುಟ್ಟೋ ಬಂಧಿಸಲ್ಪಟ್ಟರು. 10 ದಿನಗಳ ನಂತರ ಜಾಮೀನಿನಲ್ಲಿ ಅವರ ಬಿಡುಗಡೆಯಾಯಿತು. ಏಳು ದಿನಗಳ ನಂತರ ಪುನಃ ಬಂಧನಕ್ಕೊಳಗಾದರು. ತನ್ಮಧ್ಯೆ ಪಿ. ಎನ್. ಎ. ನಾಯಕ ಮೌಲಾನಾ ಮುಫ್ತೀ ಮಹ್‌ಮೂದ್‌ರವರು ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಮೇಲೆ ಹೇಳಿದ ಸಂಗತಿಯನ್ನು ಪರಾಮರ್ಶಿಸಿದರು. ಎಂದರೆ, ತಾನು ಖಾದಿಯಾನಿ ಸಮಸ್ಯೆಗೆ ಪರಿಹಾರವನ್ನುಂಟು ಮಾಡಿರುವೆನೆಂಬ ಭುಟ್ಟೋರ ವಾದ ಸರಿಯಲ್ಲವೆಂದೂ, ತದ್ವಿರುದ್ಧವಾಗಿ ಪ್ರತಿಪಕ್ಷದವರಾದ ತಮ್ಮ ಒತ್ತಾಯದಿಂದ ನಿರ್ಬಂಧಿತನಾಗಿ ಅದನ್ನು ಭುಟ್ಟೋ ಮಾಡಿದುದಾಗಿತ್ತೆಂದೂ ಅವರ ವಾದವಾಗಿತ್ತು. ಭುಟ್ಟೋ ಜೈಲಿನಿಂದ ಜಾಮೀನಿನಲ್ಲಿ ಬಿಡುಗಡೆಗೊಂಡ ಸಂದರ್ಭವಾಗಿತ್ತು ಅದು. ಅವರು ಹಿಂದೆ ಸರಿಯಲಿಲ್ಲ. ಪೀಪಿಲ್ಸ್ ಪಾರ್ಟಿಯ ಒಂದು ಬೃಹತ್ ಸಭೆಯಲ್ಲಿ ಭಾಷಣ ಮಾಡುತ್ತಾ ಮೌಲಾನಾ ಮುಫ್ತಿ ಮಹ್‌ಮೂದರಿಗೆ ಅವರು ಬಿಸಿಯಾದ ಉತ್ತರ ಕೊಟ್ಟರು. ತನ್ನ ಸ್ವಂತ ಶೈಲಿಯಲ್ಲಿ ಭುಟ್ಟೋ ಗರ್ಜಿಸಿದರು: "ಖಾದಿಯಾನಿ ಪ್ರಶ್ನೆಗೆ ಪರಿಹಾರವನ್ನುಂಟು ಮಾಡಿದ್ದು ಪ್ರತಿಪಕ್ಷದವರೆಂದು ಮುಫ್ತಿ ಮಹ್‌ಮೂದ್ ವಾದಿಸುತ್ತಾರೆ; ಆದರೆ ನಾನು ಕೇಳುತ್ತೇನೆ, ಮುಫ್ತಿ ಮಹಮೂದರ ಅಪ್ಪನೋ ರಬ್‌ವಾ ಸಂಭವದ ಸೂತ್ರಧಾರಿ?"

ಭುಟ್ಟೋರ ಈ ನ್ಯಾಯವಾದ ನೂರು ಶೇಕಡಾ ಸರಿ. 1974 ಮೇ ತಿಂಗಳ ಕೊನೆಯಲ್ಲಿ ಮುಲ್ತಾನಿನ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಂದ ರಬ್‌ವಾದಲ್ಲಿ ಪೈಶಾಚಿಕ ಕೃತ್ಯಗಳನ್ನು ನಡೆಸಿ ತತ್ಫಲವಾಗಿ ಪಾಕಿಸ್ತಾನದಲ್ಲಿಡೀ ಅಹ್ಮದಿಯಾ ವಿದ್ವೇಷವನ್ನು ಬುಗಿಲೆಬ್ಬಿಸಿ ಅಹ್ಮದಿಯರಿಗೆ ವಿರುದ್ಧವಾಗಿ ವ್ಯಾಪಕವಾದ ಆಕ್ರಮಣಗಳನ್ನು ನಡೆಸಿದ ಘಟನೆಗಳನ್ನು ಮೇಲೆ ವಿವರಿಸಲಾಯಿತಷ್ಟೆ. ಅದನ್ನು ಸೂಚಿಸುತ್ತಾ ಭುಟ್ಟೋ ಮೇಲಿನಂತೆ ಹೇಳಿದುದಾಗಿದೆ. ಅವರ ಸಮರ್ಥವಾದ ಸೂತ್ರಧಾರಿಕೆಯಾಗಿತ್ತು ಅದು. ಆದ ಕಾರಣ ಆ 'ಗೌರವ' ಅವರಿಗೆಯೇ ಸಲ್ಲಬೇಕಾಗಿದೆ.

ಆದರೆ, ಭುಟ್ಟೋರ ಆ ಭಾಷಣ ಪ್ರಾಯಶಃ ಅವರ ಕೊನೆಯ ಭಾಷಣವಾಗಿತ್ತು. ಅದು ಕಳೆದು ಒಂದೋ ಎರಡೋ ದಿನಗಳ ಬಳಿಕ ಅವರು ಮತ್ತೊಮ್ಮೆ ಬಂಧನಕ್ಕೊಳಗಾದರು. ನಂತರ ಅವರು ಹೊರಗೆ ಬರಲಿಲ್ಲ.

## ಭುಟ್ಟೋರ ಗತಿಗೇಡು

ಪ್ರತಾಪದ ಪರಾಕಾಷ್ಠೆಯನ್ನು ತಲಪಿದ್ದ ಭುಟ್ಟೋ ಅಧಃಪತನದ ಪಾತಾಳಕ್ಕೆ ಅಪ್ಪಳಿಸಲ್ಪಟ್ಟದ್ದು ಅದ್ಭುತಕರವಾಗಿದೆ. 19 ತಿಂಗಳ ಜೈಲುವಾಸ ಅವರಿಗೆ ಒಂದು ವಿಧದ ನರಕ ಶಿಕ್ಷೆಯಾಗಿತ್ತೆಂದು ಹೇಳಬಹುದು. ಈ ಅಪಾಯದ ಹೊಂಡವನ್ನು ಅವರು ತನ್ನ ಸ್ವಂತ ಕೈಗಳಿಂದಲೇ ಅಗೆದು ಮಾಡಿದ್ದೆಂದು ಹೇಳುವಾಗ ಅವರು ಎಂತಹ ದುರ್ಭಾಗ್ಯವಂತ! ಎಂದು ಚಿಂತೆಯಾಗುತ್ತದೆ. ವಿಶ್ವಾಸಯೋಗ್ಯರೂ ಪರಿಣತರೂ ಆಗಿದ್ದ ಇಬ್ಬರು ಜನರಲುಗಳನ್ನು ಅವರು ಅಹ್ಮದಿಯರೆಂಬ ಕಾರಣಮಾತ್ರದಿಂದ ಸ್ಥಾನಚ್ಯುತಿಗೊಳಿಸಿ ಮತ್ತು ಇತರ ಮೂವರ ಹಿರಿಯತನ

ವನ್ನು ಕಡೆಗಣಿಸಿ ತನಗೆ ಅತ್ಯಂತ ವಿಶ್ವಾಸಾರ್ಹನೆಂದು ಭಾವಿಸಿ ಸರ್ವ ಸೈನ್ಯಾಧಿಪತಿಯ ಸ್ಥಾನಕ್ಕೇರಿಸಿದ ಜನರಲ್ ಜಿಯಾಉಲ್ ಹಕ್ಕ್ ತಾನೇ ಭುಟ್ಟೋರನ್ನು ಈ ಪಾತಾಳಕ್ಕೆ ನೂಕಿದರು. ಭುಟ್ಟೋರ ಮೇಲೆ ಆರೋಪಿಸಲಾದ ಕೊಲೆ ಅಪರಾಧ ಸರಿಯೋ ತಪ್ಪೋ ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತ. ಅವರ ವಿರುದ್ಧವಾಗಿ ಕೈಗೊಂಡ ಕ್ರಮಗಳು ನೀತಿಯುತವಲ್ಲವಾಗಿದ್ದರೆ ಮೇಲೆ ವಿವರಿಸಲಾದ ಘಟನೆಗಳ ಆಧಾರದಿಂದ ಅದು ವಿಧಿಲೀಲೆಯಾಗಿತ್ತೆಂಬುದು ಖಂಡಿತ. ಅದರ ಕಾರ್ಯವಿಧಾನದ ವಿರುದ್ಧ ಅವರ ಪ್ರತಿವಾದಗಳು ಫಲಿಸಲಿಲ್ಲ.

ತಾನು ಚುನಾಯಿತ ಪ್ರಧಾನ ಮಂತ್ರಿಯಾಗಿರುವೆನೆಂದೂ ತನ್ನನ್ನು ಹೊರತಳ್ಳುವುದು ನಿಯಮವಿರುದ್ಧವಾಗಿದೆಯೆಂದೂ ಅವರು ವಾದಿಸಿದರು. ಅದು ನಿಷ್ಫಲವಾಯಿತು.

ನವಾಬ್ ಮುಹಮ್ಮದ್ ಅಹ್ಮದ್ ಖಾನರ ಕೊಲೆಯಲ್ಲಿ ತಾನು ಭಾಗಿಯಲ್ಲವೆಂದು ಅವರು ಕೊನೆತನಕ ವಾದಿಸಿದರು. ಅದು ಸಹ ಅಂಗೀಕರಿಸಲ್ಪಡಲಿಲ್ಲ.

ಕೋರ್ಟು ಕಾರ್ಯಕ್ರಮದ ಹಲವು ನ್ಯೂನತೆಗಳನ್ನು ಅವರು ಮತ್ತು ಅವರ ಅನುಯಾಯಿಗಳು ನ್ಯಾಯಾಲಯದಲ್ಲಿ ಎತ್ತಿತೋರಿಸಿದರು. ಅದು ಸ್ವೀಕೃತವಾಗಲಿಲ್ಲ.

ಜನರಲ್‌ಗಳು ತನ್ನನ್ನುವಧಿಸಲು ಮುಂಚಿತವಾಗಿ ತೀರ್ಮಾನಿಸಿರುವರೆಂದೂ ಕೋರ್ಟು ಕಾರ್ಯಕ್ರಮಗಳು ಬರೇ ವಿಡಂಬನೆಯೆಂದೂ ಅವರು ಹೇಳಿಕೊಳ್ಳುತ್ತಿದ್ದರು. ಸಂಗತಿ ಹಾಗೆಯೇ ಆಗಿರಬಹುದು. ಹಾಗೆಯೇ ಎಂದು ವಿದ್ವತ್ ಲೋಕದಲ್ಲಿ ಹಲವರು ಹೇಳುತ್ತಾರೆ. ಆದರೆ ಅದರಲ್ಲಿ ಆಶ್ಚರ್ಯವಿಲ್ಲ. ಅಹ್ಮದಿಯಾ ಸಂಘಟನೆಗೆ ಸಂಬಂಧಿಸಿ ಅವರು ಕೈಗೊಂಡ ನಾಟಕಕ್ರಮ ಅದೇ ರೂಪದಲ್ಲಾಗಿತ್ತು. ವಿಚಾರಣೆಗಳೆಲ್ಲಾ ಬರೇ ವಿಡಂಬನೆಯೆಂದೂ ಅವರೂ ಪ್ರತಿಪಕ್ಷದವರೂ ರಾಬಿತವೂ ಒಟ್ಟುಗೂಡಿ ಮುಂಚಿತವಾಗಿ ನಿರ್ಣಯಿಸಿದ್ದನ್ನು ನಂತರ ಘೋಷಿಸಲಾಯಿತೆಂದೂ ಮೇಲೆ ವಿವರಿಸಲಾಗಿದೆಯಷ್ಟೇ. ಹಾಗೆ ಭುಟ್ಟೋ ಮಾಡಿದಂತಹ ನಾಟಕ ಅವರಿಗೆ ತಿರುಗಿ ಹೊಡೆಯಿತೆಂಬುದು ಸ್ಪಷ್ಟ.

ಭುಟ್ಟೋ ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಗಳನ್ನು ಪ್ರಕಟಪಡಿಸದೆ ಗೋಪ್ಯವಾಗಿರಿಸಲಾಯಿತೆಂದೂ ಆದರೆ ಪ್ರತಿವಾದಗಳನ್ನು ಮತ್ತು ಹೇಳಿಕೆಗಳನ್ನು ಪ್ರಕಟಿಸಲಾಯಿತೆಂದೂ ಭುಟ್ಟೋ ಮತ್ತು ಪಾರ್ಟಿಯವರು ಆರೋಪಿಸಿದರು. ಅಲ್ಲದೆ ಸರಕಾರ ಶ್ವೇತಪತ್ರವನ್ನು ಪ್ರಕಟಿಸಿತು. ಏಕಪಕ್ಷೀಯವಾದ ಆ ವಿರುದ್ಧ ಪ್ರಚಾರವನ್ನು ಭುಟ್ಟೋ ಮತ್ತು ಪಕ್ಷದವರು ಅತ್ಯಂತ ಪ್ರತಿಭಟಿಸಿದರು. ಆದರೆ ಪ್ರಯೋಜನವಾಗಲಿಲ್ಲ.

ಭುಟ್ಟೋ ಅಹ್ಮದಿಯರಿಗೆ ವಿರುದ್ಧವಾಗಿ ಪ್ರಯೋಗಿಸಿದ ತಂತ್ರ ಅದೇ ಪ್ರಕಾರವಾಗಿತ್ತು. ಸಮದಾನಿ ಕಮಿಷನಿನ ವರದಿ ಬೆಳಕು ಕಾಣಲಿಲ್ಲ. ಅದು ಅಹ್ಮದಿಯರ ನಿರಪರಾಧಿತ್ವವನ್ನು ರುಜುಪಡಿಸುತ್ತದೆಯೆಂದು ಕಂಡ ಭುಟ್ಟೋ ಅದನ್ನು ಗೋಪ್ಯವಾಗಿರಿಸಿದರು.

ಪಾರ್ಲಿಮೆಂಟ್ ಸಮಿತಿಯ ಮುಂದೆ ಅಹ್ಮದಿಯಾ ಇಮಾಂ ನೀಡಿದ ಹೇಳಿಕೆಗಳನ್ನೂ ಸಾಕ್ಷ್ಯಗಳನ್ನೂ ಭುಟ್ಟೋ ಗುಪ್ತವಾಗಿರಿಸಿದರು. ಅದು ಬಹಿರಂಗವಾದರೆ ಅಹ್ಮದಿಯತ್ತಿನ ಮತ್ತು ಅಹ್ಮದಿಯಾ ಸಂಘಟನೆಯ ಸತ್ಯಸ್ಥಿತಿ ವ್ಯಕ್ತವಾಗಬಹುದೆಂದು ಭುಟ್ಟೋ ಹೆದರಿದ್ದರು.

ಲಾಹೋರ್ ಹೈಕೋರ್ಟು ಭುಟ್ಟೋರನ್ನು ನಾಮಮಾತ್ರ ಮುಸ್ಲಿಂ ಎಂದು ಹೇಳಿದುದಕ್ಕೆ ವಿರುದ್ಧವಾಗಿ ಅವರು ಸುಪ್ರೀಂ ಕೋರ್ಟಿನಲ್ಲಿ ಪ್ರತಿಭಟಿಸಿ ವಾದಿಸಿದರು. ಅಹ್ಮದಿಯಾ ಜಮಾಅತ್ ತಮ್ಮ ಕುರಿತು ಹೇಳುವ ನ್ಯಾಯವಾದವನ್ನು ಭುಟ್ಟೋ ತನಗಾಗಿ ಅನುಕರಿಸಿ ಹೇಳಿದರು. ತಾನು 'ಕಲಿಮ' ಹೇಳುವ ಮುಸ್ಲಿಮನಾದುದರಿಂದ ತನ್ನನ್ನು ಅಮುಸ್ಲಿಮನೆಂದು ಹೇಳಲು ಬೇರೆ ಯಾರಿಗೂ ಅಧಿಕಾರವಿಲ್ಲವೆಂದು ಅವರು ವಾದಿಸಿದರು. ತನ್ನನ್ನು ಮುಸ್ಲಿಮನಲ್ಲವೆಂದು ಆಪಾದಿಸುವುದಕ್ಕಿಂತ ತೂಗುಮರದಲ್ಲಿ ನೇತಾಡಿಸುವುದನ್ನು ಇಷ್ಟಪಡುವೆನೆಂದು ಸಹ ಅವರು ವಿಲಾಪಿಸಿದರು. ಆ ವಾದ ಸಹ ಫಲಕಾರಿಯಾಗಲಿಲ್ಲ. ಮಾತ್ರವಲ್ಲ ಭುಟ್ಟೋ ಮುಸ್ಲಿಮನಾಗಿ ಮೃತಪಟ್ಟಿಲ್ಲವೆಂದು ಪಾಕಿಸ್ತಾನ ಸರಕಾರ ಹೇಳುತ್ತದೆ. (ಚಂದ್ರಿಕ 7–4–'79).

"ನಾಥಾ! ನನಗೆ ಸಹಾಯ ನೀಡು. ನಾನು ನಿರಪರಾಧಿ" ಎಂದು ಭುಟ್ಟೋ ಕೊನೆಗೆ ಹೇಳಿರುವರೆಂಬ ಬಿ. ಬಿ. ಸಿ. ವರದಿ ಸರಿಯಲ್ಲವೆಂದಾಗಿದೆ_ಪಾಕ್ ಸರಕಾರದ ಹೇಳಿಕೆ. (ಮಾತೃಭೂಮಿ 6-4-79). ಹಾಗೆ ಅಹ್ಮದಿಯರು

ಅಮುಸ್ಲಿಮರೆಂಬ ನಿಯಮವನ್ನು ತಂದ ಭುಟ್ಟೋ ಮುಸ್ಲಿಮನಲ್ಲವೆಂದು ಅದೇ ಸರಕಾರ ಮುದ್ರೆಯೊತ್ತಿದೆ.

### ಫೈಜಲರ ಪರ್ಯವಸಾನ

ಫೈಜಲ್ ರಾಜ ಒಳ್ಳೆಯ ಮನುಷ್ಯರಾಗಿದ್ದರು. ಪಂಡಿತನೂ ಬುದ್ಧಿಶಾಲಿಯೂ ಭಕ್ತನೂ ಶಕ್ತನೂ ಆಗಿದ್ದರು. ಮಕ್ಕಾಮದೀನದ ಅಧಿಪತಿಯೆಂಬ ನೆಲೆಯಲ್ಲಿ ಗೌರವಾರ್ಹನೂ ಅರಬಿ ಐಕ್ಯದ ಪ್ರತೀಕವೂ ಆಗಿದ್ದರು. ಅವರಿಗೆ ಅಹ್ಮದಿಯಾ ಸಂಘಟನೆಯ ಕುರಿತು ಸಾಕಷ್ಟು ಪರಿಚಯವಿದೆ. ಇತ್ತೀಚೆಗಿನ ಕಾಲದ ವರೆಗೆ ಅವರು ಅಹ್ಮದಿಯರ ವೈರಿಯಾಗಿರಲಿಲ್ಲ. ಅವರು ಮುಹಮ್ಮದ್ ಝಫರುಲ್ಲಾ ಖಾನರ ಸ್ನೇಹಿತರಾಗಿದ್ದರು. ಆದರೆ ಕೊನೆಗೆ ರಾಬಿತದ ಪಂಡಿತರು ಅವರನ್ನು ತಪ್ಪುದಾರಿಗೆಳೆದರು. ಖಲೀಫತುಲ್ ಮುಸ್ಲಿಮೀನ್ ಆಗಬೇಕೆಂದು ಫೈಜಲ್ ಇಚ್ಛಿಸಿದರು. ಬಾಹ್ಯ ದೃಷ್ಟಿಯಲ್ಲಿ ಇಂದಿನ ಸ್ಥಿತಿಗತಿಗಳನ್ನು ನೋಡುವಾಗ ಆ ಸ್ಥಾನಕ್ಕೆ ಅತ್ಯಂತ ಅರ್ಹ ವ್ಯಕ್ತಿ ಅವರೇ ಆಗಿದ್ದರು. ಆದರೆ ಅಲ್ಲಾಹು ಅದನ್ನು ಅಂಗೀಕರಿಸಲಿಲ್ಲ. ಅದಕ್ಕೆ ಕಾರಣ ನಾನು ಮೇಲೆ ಹೇಳಿದುದಾಗಿದೆ. ಅದರಿಂದಾಗಿ ಅವರಿಗೆ ಅದು ಸಿದ್ಧಿಸಲಿಲ್ಲ. ಅಹ್ಮದಿಯಾ ಸಂಘಟನೆಯನ್ನು ಲೋಕದಿಂದ ನಿರ್ಮೂಲನಗೊಳಿಸಬೇಕೆಂಬ ಅವರ ಇಚ್ಛೆ ಸಫಲವಾಗಲಿಲ್ಲ. 1975 ಎಪ್ರಿಲ್ ತಿಂಗಳಿನಲ್ಲಿ ಅವರ ಸ್ವಂತ ಸೋದರಪುತ್ರನ ಕೈಯಿಂದ ಅವರು ವಧಿಸಲ್ಪಟ್ಟರು.

### ಇದಿ ಅಮೀನ್ ಎಲ್ಲಿ?

ಅಲ್‌ಹಾಜ್ ಫೀಲ್ಡ್ ಮಾರ್ಷಲ್ ಇದಿ ಅಮೀನ್ ಉಗಾಂಡದ ಶಿರೋಮಣಿಯಾಗಿದ್ದರು. ಫೈಜಲ್ ರಾಜನನ್ನು ಖಲೀಫರನ್ನಾಗಿ ಮಾಡಲು ಶತಪ್ರಯತ್ನ ಮಾಡಿದ ವ್ಯಕ್ತಿಯಾಗಿದ್ದಾರೆ ಇದಿ ಅಮೀನ್. ಉಗಾಂಡದಲ್ಲಿ ಅಹ್ಮದಿಯಾ ಜಮಾಅತಿನ ಚಟುವಟಿಕೆಗಳನ್ನು ನಿರೋಧಿಸಿ ಅಹ್ಮದಿಯಾ ಮಸೀದಿಗಳನ್ನು ಬಲಾತ್ಕಾರದಿಂದ ವಶಪಡಿಸಿ ಅಹ್ಮದಿಯಾ ಮಿಶನರಿಯನ್ನು ಹೊರತಳ್ಳಿದ ನಂತರ ಅವರು ಫೈಜಲ್ ರಾಜನನ್ನು ಖಲೀಫರನ್ನಾಗಿ ಮಾಡಲು ಹೊರಟರು. ಉಗಾಂಡದ ಸರ್ವಾಧಿಪತಿಯಾಗಿದ್ದ ಇದಿ ಅಮೀನ್ ಆ ಸ್ಥಾನದಿಂದ ಹೊರತಳ್ಳಲ್ಪಟ್ಟಿರುವರು. ಈಗ ಅವರು ಎಲ್ಲಿದ್ದಾರೆ?

### ವಿಫಲ ಪ್ರಯತ್ನಗಳು

ಸಂಕ್ಷಿಪ್ತವಾಗಿ ಭುಟ್ಟೋರನ್ನು ರಕ್ಷಿಸಲಿಕ್ಕೆ ಲೋಕದ ಹಲವು ನಾಯಕರು ಪ್ರಯತ್ನಿಸಿದರು. ಹಲವು ರಾಷ್ಟ್ರಗಳೂ ಸಂಘ ಸಂಸ್ಥೆಗಳೂ ಸಾಕಷ್ಟು ಪರಿಶ್ರಮಿಸಿದುವು. ಆದರೆ ಭುಟ್ಟೋ ರಕ್ಷಿಸಲ್ಪಡಲಿಲ್ಲ. ಎಲ್ಲರೂ ಪರಾಜಯಗೊಂಡರು.

ಇನ್ನೊಂದು ಕಡೆಯಲ್ಲಿ ಭುಟ್ಟೋರವರೂ ಪ್ರತಿಪಕ್ಷದವರೂ ರಾಬಿತವೂ ಹಲವು ರಾಷ್ಟ್ರ ನಾಯಕರೂ ಒಂದುಗೂಡಿ ಅಹ್ಮದಿಯಾ ಸಂಘಟನೆಯನ್ನು ನಿರ್ನಾಮಗೊಳಿಸಲು ತಮ್ಮ ಸಾಮರ್ಥ್ಯದ ಪರಾಕಾಷ್ಠೆಯ ವರೆಗೆ ಪ್ರಯತ್ನಿಸಿ ನೋಡಿದರು ಆದರೆ ಎಲ್ಲರೂ ಪರಾಜಿತರಾದರು. ಅಹ್ಮದಿಯಾ ಸಂಘಟನೆ ನಾಶವಾಗಲಿಲ್ಲ. ಅದು ನಾಶಗೊಳ್ಳುವುದೂ ಇಲ್ಲ.

### ಹಝ್ರತ್ ಅಹ್ಮದ್ (ಅ.) ಹೇಳುತ್ತಾರೆ:

"ಸತ್ಯದ ವೈರಿಗಳಿಗೆ ಮೊದಲು ಯಾವಾಗಲಾದರೂ ಈ ರೀತಿಯ ಕುಕೃತ್ಯಗಳಲ್ಲಿ ವಿಜಯ ಸಿದ್ಧಿಸಿರುತ್ತಿದ್ದರೆ ಈ ಜನರಿಗೂ ವಿಜಯ ಲಭಿಸುತ್ತಿತ್ತು. ಆದರೆ ದೇವರಿಗೆ ವಿರೋಧವಾಗಿ ವರ್ತಿಸಿ, ಅವನು ಇಚ್ಛಿಸಿದ ಸಂಗತಿಯನ್ನು ಎದುರಿಸುವವರಿಗೆ ಯಾವಾಗಲೂ ಅಪಮಾನ ಮತ್ತು ಸೋಲುಂಟಾಗುವುದೆಂಬುದು ಒಂದು ಪರಮ ಸತ್ಯವೆಂದಾದರೆ ಅಪಜಯದ ಮತ್ತು ಅಪಮಾನದ ಕಾಲ ಇವರಿಗೂ ಬಂದೊದಗುವುದು. ದೇವರ ವಚನ ಎಂದಿಗೂ ಸುಳ್ಳಾಗಲಿಲ್ಲ. ಎಂದಿಗೂ ಸುಳ್ಳಾಗಲಾರದು. ತಾನು ಮತ್ತು ತನ್ನ ದೂತರು ಜಯಗಳಿಸುವರೆಂದು ಅಲ್ಲಾಹು ಮೊದಲೇ ವಿಧಿಸಿ ಅವನು ಅದನ್ನು ಒಂದು ನಿಯಮವನ್ನಾಗಿ ಮಾಡಿದ್ದಾನೆಂದು ಖುರ್‌ಆನ್ ಹೇಳುತ್ತದೆ... ಆದ್ದರಿಂದ ಆದಮರ ಕಾಲದಿಂದ ಪೈಗಂಬರರ ಕಾಲದ ವರೆಗೆ ಪ್ರಸ್ತುತ ನಿಯಮ ಸತ್ಯವೆಂದು ಸ್ಪಷ್ಟವಾದ ರೀತಿಯಲ್ಲೇ ಅದು ನನ್ನ ಸಂಗತಿಯಲ್ಲಿಯೂ ವ್ಯಕ್ತವಾಗುವುದೆಂದು ನಾನು ಇದೋ ಘೋಷಿಸುತ್ತೇನೆ" (ನುಸೂಲುಲ್ ಮಸೀಹ್).

# ★ ಒಂದು ತಪ್ಪುಭಾವನೆ ★

ಭುಟ್ಟೋರನ್ನು ವಧಿಸಿದ ಕಾರ್ಯದಲ್ಲಿ ಅಹ್ಮದಿಯರಿಗೆ ಪಾತ್ರವಿದೆಯೆಂದು ಕೆಲವರು ಭಾವಿಸಿಕೊಂಡಿರುವರು. ಜನರಲ್ ಜಿಯಾವುಲ್ ಹಕ್ ಖಾದಿಯಾನಿ ಎಂದು ಸಹ ಪ್ರಚಾರದಲ್ಲಿದೆ. ಆದರೆ ಆ ಭಾವನೆಗಳೆಲ್ಲಾ ಸಂಪೂರ್ಣ ತಪ್ಪಾಗಿವೆ. ಭುಟ್ಟೋರ ವಧೆಯಲ್ಲಿ ಅಹ್ಮದಿಯರಿಗೆ ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಯಾವುದೇ ಸಂಬಂಧವಿಲ್ಲ. ಜಿಯಾವುಲ್ ಹಕ್ ಅಹ್ಮದಿಯಲ್ಲವೆಂದು ಮಾತ್ರವಲ್ಲ, ತಿಳಿದಷ್ಟರ ಮಟ್ಟಿಗೆ ಹೇಳುವುದಾದರೆ ಅವರು ಅಹ್ಮದಿಯರಿಗೆ ಭುಟ್ಟೋರಿಗಿಂತ ಕಠಿಣ ಶತ್ರುವಾಗಿದ್ದಾರೆ. ಭುಟ್ಟೋರ ವಿರುದ್ಧವಾಗಿ ಮೊಕದ್ದಮೆ ಹೂಡಿದ ಅಹ್ಮದ್ ರ ಜಾ ಕಸೂರಿ ಸಹ ಅಹ್ಮದಿಯಲ್ಲ. ಆ ನ್ಯಾಯಾಲಯದ ಕ್ರಮಗಳನ್ನು ಅಹ್ಮದಿಯರು ನ್ಯಾಯೀಕರಿಸಲೂ ಇಲ್ಲ. ಭುಟ್ಟೋ ವಧಿಸಲ್ಪಡಬೇಕೆಂದು ನಾವು ಪ್ರಾರ್ಥಿಸಲೂ ಇಲ್ಲ. ಇಚ್ಛಿಸಲೂ ಇಲ್ಲ. ವಧಿಸಲ್ಪಟ್ಟ ಬಗ್ಗೆ ಸಂತೋಷ ಪಡಲೂ ಇಲ್ಲ. ತದ್ವಿರುದ್ಧವಾಗಿ ಈ ದುರಂತಕ್ಕಾಗಿ ನಾವು ವ್ಯಸನಿಸಿ ಸಹತಾಪ ಪಡುತ್ತೇವೆ. ಇದಾಗಿದೆ ವಾಸ್ತವ.

ಆದರೆ ಭುಟ್ಟೋ ವಧಿಸಲ್ಪಟ್ಟಾಗ ರೋಷಾಕುಲರಾದ ಜನಕೂಟ ಸಾವಿರಗಟ್ಟಲೆಯಲ್ಲಿ ಸಂಘಟಿಸಿ ಜಮ್ಮು ಮತ್ತು ಕಾಶ್ಮೀರದ ಹಲವು ಸ್ಥಳಗಳಲ್ಲಿ ಅಹ್ಮದಿಯರನ್ನು ವ್ಯಾಪಕವಾಗಿ ಆಕ್ರಮಿಸಿ ಗುರುತರ ನಾಶ ನಷ್ಟಗಳನ್ನುಂಟು ಮಾಡಿದರು. ಅಕ್ರಮಿಗಳು ಮುಸ್ಲಿಮರು. ಅವರು ಶಿಯಾ ಪಂಗಡದವರೋ ಸುನ್ನಿ ಪಂಗಡದವರೋ ಅಥವಾ ಎರಡು ಪಂಗಡಗಳು ಸಹಅದರಲ್ಲಿ ಸೇರಿದ್ದಾರೋ ಎಂದು ತಿಳಿಯಲಿಲ್ಲ. ಅವರು ಅಹ್ಮದಿಯರ ನೂರಾರು ಮನೆಗಳನ್ನೂ ಅಂಗಡಿಗಳನ್ನೂ ಸುಲಿಗೆ ಮಾಡಿದರು. ಹಲವನ್ನು ಅಗ್ನಿಗಾಹುತಿ ಮಾಡಿದರು. ಅನೇಕ ತೋಟಗಳನ್ನು ನಾಶಪಡಿಸಿದರು. ನೂರ್ ಅಹ್ಮದ್ ಎಂಬ ಓರ್ವ ಅಹ್ಮದಿ ಅಕ್ರಮಿಗಳನ್ನು ಎದುರಿಸಿ ಮೃತ್ಯುವಶರಾದರು. ಕೆಲವು ಅಹ್ಮದಿಯಾ ಮಸೀದಿಗಳಿಗೆ ಬೆಂಕಿ ಇಡಲಾಯಿತು. ಶ್ರೀನಗರ ಮತ್ತು ಜಮ್ಮುವಿನ ಅಹ್ಮದಿಯಾ ಮಸೀದಿಗಳ ಮೇಲೆ ಭಯಂಕರವಾಗಿ ಕಲ್ಲೆಸೆದರೂ ತಕ್ಕ ಸಮಯದಲ್ಲಿ ಪೋಲೀಸರು ಬಂದು ಮುಟ್ಟಿದುದರಿಂದ ಸಣ್ಣಪುಟ್ಟ ಹಾನಿಗಳು ಮಾತ್ರವೇ ಉಂಟಾದುವು. ಅನೇಕ ಅಹ್ಮದಿಯರಿಗೆ ಗಂಭೀರ ಗಾಯಗಳಾಗಿವೆ. ಪ್ರಜ್ವಲಿಸುತ್ತಿರುವ ಬೆಂಕಿಗೆ ಎಸೆಯಲ್ಪಟ್ಟ ಇಬ್ಬರು ಹೆಣ್ಮಕ್ಕಳಿಗೆ ತೀವ್ರ ಸುಟ್ಟ ಗಾಯಗಳಾಗಿವೆ. 200 ರಕ್ಕಿಂತ ಮಿಕ್ಕಿದ ಅಹ್ಮದಿ ಕುಟುಂಬಗಳು ವಸತಿ ರಹಿತರಾಗಿದ್ದಾರೆ. ಅಹ್ಮದಿಯರಿಗೆ ಸುಮಾರು 3 ಕೋಟಿ ರೂಪಾಯಿಗಳ ನಷ್ಟವುಂಟಾಗಿದೆಯೆಂದು ಲೆಕ್ಕ ಹಾಕಲಾಗಿದೆ. ಇದೇ ರೀತಿಯ ಕೆಲವು ಅಕ್ರಮ ಕೃತ್ಯಗಳು ಒರಿಸ್ಸಾದ ಭದ್ರಕ್‌ನಲ್ಲೂ ಬಿಹಾರಿನ ಬರ್‌ಪುರದಲ್ಲೂ ನಡೆದಿವೆಯೆಂದು ವರದಿಯಾಗಿದೆ.

ಶಾಂತಿಪ್ರಿಯರೂ ನಿರಪರಾಧಿಗಳೂ ಆದ ಅಹ್ಮದಿಯರಿಗೆದುರಾಗಿ ಹೀಗೆ ಗೊಂದಲವೆಬ್ಬಿಸಲು ಯಾವುದೇ ಕಾರಣ ತೋಚುವುದಿಲ್ಲ. ಭುಟ್ಟೋರ ವಧೆಯ ಸಂಗತಿಯಲ್ಲಿ ಅಹ್ಮದಿಯಾ ಸಂಘಟನೆಗೆ ದೂರದ ಸಂಬಂಧ ಕೂಡ ಇಲ್ಲ. ಅವರಿಗೆ ದೈವಶಿಕ್ಷೆ ಲಭಿಸಿದ್ದರೆ ಅದಕ್ಕೆ ಅಹ್ಮದಿಯರು ಹೊಣೆಗಾರರಲ್ಲವಷ್ಟೇ. ಭುಟ್ಟೋರೊಡನೆ ಪಾಕಿಸ್ತಾನದ ಅಧಿಕಾರಿಗಳು ಅನ್ಯಾಯವಾಗಿ ವರ್ತಿಸಿದ್ದರೆ ಅದರ ಸೇಡು ಅವರೊಡನೆ ತೀರಿಸ ಬೇಕಾಗಿದೆ; ಭಾರತದ ನಿರಪರಾಧಿಗಳೊಡನೆ ಅಲ್ಲ.

ಕಾಶ್ಮೀರದಲ್ಲಿ ಅಹ್ಮದಿ ಮುಸ್ಲಿಮರಲ್ಲದೆ, ಜಮಾಅತೆ ಇಸ್ಲಾಮಿ, ಅಹ್ಲೆ ಅದೀಸ್ ಪಂಗಡಗಳಿಗೆ ಸೇರಿದ ಮುಸ್ಲಿಮರೂ ಕ್ರೈಸ್ತ ಬಾಂಧವರೂ ಗೂಂಡಾಗಳ ಮೃಗೀಯ ಆಕ್ರಮಣಕ್ಕೆ ಗುರಿಯಾಗಿದ್ದಾರೆಂದೂ ಅವರಿಗೆ ಸಹ ದೊಡ್ಡ ನಾಶ ನಷ್ಟಗಳುಂಟಾಗಿವೆಯೆಂದೂ ತಿಳಿದು ನಾವು ವ್ಯಸನಿಸುತ್ತೇವೆ. ಈ ಅಕ್ರಮಗಳನ್ನು ಎಲ್ಲಾ ಮಾನವ ಸ್ನೇಹಿಗಳು ದ್ವೇಷಿಸಬೇಕಾಗಿದೆ. ಈ ಕಾರ್ಯದಲ್ಲಿ ಸರಕಾರ ಯೋಗ್ಯ ಕ್ರಮ ಕೈಗೊಳ್ಳಬಹುದೆಂದು ಆಶಿಸಲಾಗಿದೆ.

# ಕಾಶ್ಮೀರ ಮತ್ತು ಭಾರತದ ಇತರ ಸ್ಥಳಗಳಲ್ಲಿ ಹಾನಿಗೊಳಗಾದ ಅಹ್ಮದಿಯರಿಗೆ ಅಹ್ಮದಿಯಾ ಸರ್ವೋನ್ನತ ನಾಯಕ ಹಝ್ರತ್ ಖಲೀಫತುಲ್ ಮಸೀಹ್ III ಅವರ ಸಂದೇಶ

ಕಾಶ್ಮೀರದ ಸುಂದರ ಕಣಿವೆ ಮತ್ತು ಭಾರತದ ಇನ್ನಿತರ ಸ್ಥಳಗಳ ನಿವಾಸಿಗಳಾದ ದುಃಖಾಕ್ರಾಂತರಾದ ಸ್ನೇಹಿತರೇ, ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು. (ನಿಮ್ಮ ಮೇಲೆ ಅಲ್ಲಾಹು ಶಾಂತಿಯನ್ನೂ ದಯೆಯನ್ನೂ ಅನುಗ್ರಹವನ್ನೂ ಸುರಿಸಲಿ)

ದೇವರ ಶಾಂತಿ ನಿಮ್ಮ ಮೇಲೆ ಪ್ರತಿಕ್ಷಣದಲ್ಲೂ ಸುರಿಯಲಿ. ಎಲ್ಲಾ ಕ್ಷಣಗಳಲ್ಲೂ ಆತನು ನಿಮ್ಮ ಸಂರಕ್ಷಕನೂ ಸಹಾಯಕನೂ ಆಗಿರಲಿ. ನಿಮ್ಮ ವಿಶ್ವಾಸ ಮತ್ತು ನಿಷ್ಠೆಯಲ್ಲಿ ಅನುಗ್ರಹವನ್ನು ಸುರಿಸಲಿ. ಎಲ್ಲಾ ಸ್ಥಿತಿಗಳಲ್ಲೂ ನಿಮಗೆ ದೇವರು ಸ್ಥಿರತೆಯನ್ನು ದಯಪಾಲಿಸಲಿ ಮತ್ತು ಪವಿತ್ರಾತ್ಮದಿಂದ ನಿಮ್ಮ ಸಹಾಯ ಮಾಡಲಿ (ಆಮೀನ್).

ಭಾರತದ ಕೆಲವೆಡೆಗಳಲ್ಲಿ ಅಹ್ಮದಿಯಾ ಸಂಘಟನೆಗೆ ಒದಗಿದ ಪರಿಸ್ಥಿತಿಯಿಂದ ಪ್ರಪಂಚದಾದ್ಯಂತವಿರುವ ಅಹ್ಮದಿಯಾ ಸ್ನೇಹಿತರಿಗೆ ವ್ಯಸನವಾಗಿದೆ. ಅವರು ದುಃಖಿತರಾಗಿರುವರು. ಅವರು ನಿಮಗಾಗಿ ಚಿಂತಾಕ್ರಾಂತರಾಗಿರುವರು. ನನ್ನ ಹೃದಯದ ಪ್ರತಿಯೊಂದು ಬಡಿತವೂ ಅವರೆಲ್ಲರ ವ್ಯಸನ ಮತ್ತು ಚಿಂತೆಯಿಂದ ಕೂಡಿದೆ. ನನ್ನ ಪ್ರತಿಯೊಂದು ಕ್ಷಣವೂ “ನನ್ನ ದುಃಖವನ್ನೂ ಚಿಂತೆಯನ್ನೂ ದೇವರೊಡನೆ ಮಾತ್ರ ನಿವೇದಿಸುತ್ತೇನೆ” ಎಂಬ ವಚನವನ್ನು ಆದರಿಸಿದೆ. ಈ ಪರಿಸ್ಥಿತಿಯಲ್ಲಿ ನಾವೇನು ಮಾಡಬೇಕೆಂದು ಸ್ನೇಹಿತರು ಕೇಳುತ್ತಿದ್ದಾರೆ ನನ್ನ ಉತ್ತರ ಇದಾಗಿದೆ: ಪವಿತ್ರ ಖುರ್‌ಆನಿನ ಈ ಉಪದೇಶವನ್ನು ಅನುಸರಿಸಿರಿ:– “ಇಸ್ತಯಿೂನೂ ಬಿಸ್ಸಬರಿ ವಸ್ಸಲಾತಿ”— “ಸಹನೆ ಮತ್ತು ಪ್ರಾರ್ಥನೆಯ ಮೂಲಕ ನಿಮ್ಮ ಸೃಷ್ಟಿಕರ್ತನಿಂದಸಹಾಯ ಯಾಚಿಸಿರಿ.” ಆದುದರಿಂದ ಸಹನೆದೋರಿರಿ ಮತ್ತು ಪ್ರಾರ್ಥಿಸಿರಿ. ಸಹನೆದೋರಿರಿ ಮತ್ತು ಪ್ರಾರ್ಥಿಸಿರಿ. ಸಹನೆದೋರಿರಿ ಮತ್ತು ಪ್ರಾರ್ಥಿಸಿರಿ. ನಿಮ್ಮ ಪ್ರಾರ್ಥನಾ ಸ್ಥಳವನ್ನು ಕಣ್ಣೀರಿನಿಂದ ಒದ್ದೆಗೊಳಿಸಿರಿ. ಪ್ರತಿ ಕ್ಷಣವನ್ನೂ ಪ್ರಾರ್ಥನೆಯಲ್ಲಿ ಕಳೆಯಿರಿ. ಇದೇ ನಿಮ್ಮನ್ನು ಇತರರಿಂದ ಬೇರ್ಪಡಿಸಿ ತೋರಿಸುವ ವೈಶಿಷ್ಟ್ಯವಾಗಿದೆ. ಇದೇ ನಿಮ್ಮ ಧಾರ್ಮಿಕ ಮತ್ತು ಲೌಕಿಕ ವಿಜಯಕ್ಕೆ ಕೀಲಿಗೈಯಾಗಿದೆ. ದೇವರ ಸನ್ನಿಧಿಯಲ್ಲಿ ಹೃತ್ಪೂರ್ವಕವಾಗಿ ಅತ್ತು ಪ್ರಾರ್ಥಿಸಿದಾಗ ಆತನು ನಿಮ್ಮ ಸಹಾಯಕ್ಕೆ ಬಾರದ ಸಂದರ್ಭವೊಂದಾದರೂ ಇದೆಯೇ ? ಆತನು ಎಲ್ಲಾ ನಿಷ್ಠಾವಂತರಿಗಿಂತ ಹೆಚ್ಚು ನಿಷ್ಠಾವಂತನಾಗಿದ್ದಾನೆ. ಆತನು ಎಲ್ಲಾ ಕ್ಷಮಾಶೀಲರಿಗಿಂತ ಹೆಚ್ಚು ಕ್ಷಮಾಶೀಲನಾಗಿದ್ದಾನೆ. ಎಲ್ಲಾ ಪ್ರೀತಿಸುವವರಿಗಿಂತ ಹೆಚ್ಚು ಪ್ರೀತಿಸುವವನಾಗಿದ್ದಾನೆ. ತನ್ನ ಕಂದನ ಆಕ್ರಂದನವನ್ನು ಕೇಳಿ ಧಾವಿಸಿ ಬರುವ ತಾಯಿಗಿಂತ ಶೀಘ್ರವಾಗಿ ಆತನು ತನ್ನ ಭಕ್ತರ ಅಳಲನ್ನು ಕೇಳಿ ಧಾವಿಸಿ ಬರುತ್ತಾನೆ. ರಾತ್ರಿಯ ಸಮಯ ಎದ್ದು ಮನಪೂರ್ವಕವಾಗಿ ಅತ್ತು ಪ್ರಾರ್ಥಿಸಿರಿ. ಹಗಲು ಹೊತ್ತನ್ನು ಸಹ ಪ್ರಾರ್ಥಿಸುತ್ತಾ ಕಳೆಯಿರಿ; ನೀವು ಪ್ರಾರ್ಥನೆಯೇ ಮೂರ್ತಿವೆತ್ತಂತೆ ಆಗಿರಿ. ಪ್ರತಿಕ್ಷಣ ದೇವರ ಸಹಾಯವನ್ನು ಪ್ರತೀಕ್ಷಿಸುತ್ತಾ ಇರಿ.

ಏಕ ದೇವರ ಮೇಲೆ ನಮ್ಮ ಪೂರ್ಣ ಭರವಸೆಯಿದೆ. ಆತನ ದಯೆಯ ನೆರಳು ನಮ್ಮ ಶಿರಗಳ ಮೇಲಿದೆ. ಆತನು ನಮ್ಮನ್ನು ಆಶ್ರಯ ವಿಹೀನರನ್ನಾಗಿ ಮಾಡಲಾರನು.

ಪವಿತ್ರ ಖುರ್‌ಆನ್ ದೇವರವಾಣಿಯೆಂದು ನಮ್ಮ ಪೂರ್ಣ ವಿಶ್ವಾಸವಾಗಿದೆ. ಆ ಗ್ರಂಥದಲ್ಲಿ ದೈವವಾಣಿಯಲ್ಲದೆ ಇನ್ನೇನೂ ಸೇರಿಲ್ಲ. ಇನ್ನು ಮುಂದೆ ಸಹ ಅದರಲ್ಲಿ ಇನ್ನಾವುದೂ ಸೇರಲಾರದು. ಶೈತಾನನ ಪ್ರವೇಶವಾಗದಂತೆ ಅದನ್ನು ದೇವರು ಸಂರಕ್ಷಿಸಿರುವನು. ಇದು ನಮ್ಮ ವಿಶ್ವಾಸವಾಗಿದೆ. ಈ ವಿಶ್ವಾಸ ಕೇವಲ ತಾತ್ವಿಕವಾದುದಲ್ಲ. ನಮ್ಮ ಜೀವಿತ ಈ ಸತ್ಯವನ್ನು ನೂರಾರು ಬಾರಿ ಪ್ರತ್ಯಕ್ಷವಾಗಿ ಕಂಡಿದೆ. ದೇವರ ವಾಣಿ ದೇವರ ವಾಣಿಯೇ ಆಗಿದೆ. ದೇವರಲ್ಲದವರಿಗೆ ಅದರಲ್ಲಿ ಯಾವುದೇ ಪಾತ್ರವಿಲ್ಲ. ನಾವು ಪ್ರತ್ಯಕ್ಷವಾಗಿ ನಮ್ಮ ನಾಲಗೆಯ ಮೂಲಕವೂ ನಮ್ಮ ಪ್ರವೃತ್ತಿಗಳ ಮೂಲಕವಾಗಿಯೂ ನಮ್ಮ ಭಾವಾವೇಶಗಳ

ನಮೂಲಕವೂ ಮತ್ತು ನಮ್ಮ ಆತ್ಮದ ಪ್ರತಿಯೊಂದು ಅಂಶ ದಿಂದಲೂ ಪ್ರಪಂಚದಲ್ಲಿ ಈ ರೀತಿ ಪ್ರಕಟಿಸಲು ಇಚ್ಛಿಸು ತ್ತೇವೆ: "ದೇವರ ಈ ವಾಣಿಯಲ್ಲಿ ಬೇರೆ ಯಾರ ಪಾತ್ರವೂ ಇಲ್ಲ" ಎಂದು. ದೇವರ ವಚನ ಸಂಹಿತೆಯಾದ ಪವಿತ್ರ ಖುರ್‌ಆನ್ ಬಹಳ ಪ್ರೇಮದಿಂದ ನಮ್ಮ ಪೈಕಿ ಪ್ರತಿ ಯೋರ್ವರ ಕಿವಿಯಲ್ಲಿ ಈ ರೀತಿ ಹೇಳುತ್ತದೆ:— "ಅಂತು ಮುಲ್ ಅಲ್‌ಲವ್ನ– "ನೀವೇ ವಿಜಯಿಗಳಾಗುವಿರಿ" ಎಂದು.

ದೇವರಿಂದ ದೂರ ಸರಿದವರು, ದೇವರ ಜ್ಞಾನ ವನ್ನು ಗಳಿಸದವರು ಮತ್ತು ತಪ್ಪು ಗ್ರಹಿಕೆಗಳಲ್ಲಿ ಮುಳುಗಿ ರುವವರು ತಮ್ಮ ಅಜ್ಞಾನದ ಫಲವಾಗಿ ತಪ್ಪು ಪ್ರಚಾರ ಗಳನ್ನು ಮಾಡುತ್ತಿರುವರು. ಅವರ ಮಾತುಗಳು ಸುಳ್ಳಾ ಗಿವೆ. ಅವುಗಳು ಅಳಿಸಲ್ಪಡುವುವು.

ನಮ್ಮ ಇಂದಿನ ವಿರೋಧಿಯಾಗಿರುವವರು ಚೆನ್ನಾಗಿ ಈ ಸತ್ಯವನ್ನು ನೆನಪಿನಲ್ಲಿಡಲಿ, ಅವರು ನಾಳೆ ನಮ್ಮ ಸ್ನೇಹಿ ತರಾಗುವರು. ಅವರು ತಾವು ಮಾಡಿದುದಕ್ಕೆ ಪಶ್ಚಾತ್ತಾಪ ಗೊಳ್ಳುವರು. ಅವರು ನಮ್ಮೊಡನೆ ಹಸ್ತ ಲಾಘವ ಮಾಡು ವುದು ಅಭಿಮಾನಕರವೆಂದು ಗ್ರಹಿಸುವರು. "ಈ ಸಮು ದಾಯವನ್ನು ನಮಗೆ ಗುರುತಿಸಲಾಗಲಿಲ್ಲ. ಈ ಸಂಘವನ್ನು ಧಿಕ್ಕರಿಸಲಾಯಿತು, ಬಲಹೀನವೆಂದು ಗ್ರಹಿಸಲಾಯಿತು; ಈ ಸಂಘಕ್ಕೆ ಕಷ್ಟ ಕೊಡಲು ಪ್ರಯತ್ನಿಸಿ ಸಂಕಷ್ಟಗಳಿಗೆ ಗುರಿಪಡಿಸಲಾಯಿತು. ಆದರೆ ಇದೊಂದೇ ಸಂಘ ಸತ್ಯದ ಮೇಲೆ ನೆಲೆ ನಿಂತಿದೆಯೆಂದು ದೇವರ ವರ್ತನೆಯಿಂದ ಸ್ಪಷ್ಟ ವಾಯಿತು" ಎಂದು ಅವರು ಹೇಳುವರು.

ದೇವರು ಹೇಳುತ್ತಿದ್ದಾನೆ "ನೀವೇ ವಿಜಯಿಗಳಾಗು ವಿರಿ" ಎಂದು. ಸಂಘದ ರೂಪದಲ್ಲಿ ನೀವೇ ವಿಜಯಿಗಳಾ ಗುವಿರೆಂದು ಇದರಿಂದ ವ್ಯಕ್ತವಾಗುತ್ತದೆ. ಯಾವುದಾದರೂ ಸಂಘಟನೆಗೆ ಈ ರೀತಿಯ ದೃಢ ವಿಶ್ವಾಸವಿದ್ದರೆ, ಇದೇ ಸಂಘಟನೆ ವಿಜಯಿಯಾಗುವುದೆಂದು ದೇವರು ನಿರ್ಣಯಿಸಿ ರುವನೆಂಬ ದೃಢ ವಿಶ್ವಾಸ ಯಾವುದಾದರೂ ಸಂಘಟನೆಗೆ ಇದ್ದರೆ ಮತ್ತು ಆ ಸಂಘಟನೆಯವರು ವಿಶ್ವಾಸದ ಶರ್ತಗ ಳನ್ನೂ ಇಸ್ಲಾಮ್ ಧರ್ಮದ ಅನುಷ್ಠಾನ ಕರ್ಮಗಳನ್ನೂ ಪೂರ್ಣವಾಗಿ ಅನುಸರಿಸುವವರಾಗಿದ್ದರೆ ಅಂತಹ ಸಂಘಟ ನೆಯವರಿಗೆ ಯಾವ ಹೆದರಿಕೆಯಿದೆ?. ಅವರಿಗೆ ದೇವರ ಸನ್ನಿಧಿಯಲ್ಲಿ ಬಲಿಯರ್ಪಿಸಲು ಯಾವ ಹೆದರಿಕೆಯಿದೆ?

ವ್ಯಕ್ತಿಗಳು ತ್ಯಾಗಗಳನ್ನು ಮಾಡಲೇ ಬೇಕಾಗಿದೆ. ಇಸ್ಲಾಮ್ ಧರ್ಮದ ಪ್ರಾರಂಭ ಘಟ್ಟದಲ್ಲಿ ಎಷ್ಟೋ ಜನರು ತ್ಯಾಗ ಬಲಿದಾನಗಳನ್ನು ಮಾಡಬೇಕಾಯಿತು. ಇಸ್ಲಾಮಿನ ವಿರೋ ಧಿಗಳು ಆ ಕಾಲದಲ್ಲಿ ಯುದ್ಧ ಪ್ರಾರಂಭಿಸಿರಲಿಲ್ಲ. ಅದು ಮಕ್ಕಾದ ಜೀವಿತ ಕಾಲದಲ್ಲಿ. ಆ ಕಾಲ ಬಾಹ್ಯ ದೃಷ್ಟಿ ಯಿಂದ ನೋಡಿದರೆ ಮುಸ್ಲಿಮರ ಬಲಹೀನತೆಯ ಕಾಲ ವಾಗಿತ್ತು. (ಸತ್ಯ ವಿಶ್ವಾಸಿಯ ಆಧ್ಯಾತ್ಮಿಕ ಜೀವನ ಎಂದೂ ಬಲಹೀನವಾಗಿರುವುದಿಲ್ಲ. ಏಕೆಂದರೆ ಶೈತಾನೀ ಶಕ್ತಿಗಳನ್ನು ಅದು ಎದುರಿಸುತ್ತಲೇ ಇರುತ್ತದೆ). ಬಾಹ್ಯದೃಷ್ಟಿಯಿಂದ ಅವರು ಬಲಹೀನರಾಗಿದ್ದರು. ಅವರ ಮತ್ತು ನಮ್ಮ ಆದರ ಣೀಯ ಮಹಿಳೆಯರಲ್ಲಿ ಹಲವರನ್ನು ಆ ಕಾಲದಲ್ಲಿ ನಗ್ನ ರನ್ನಾಗಿ ಮಾಡಿ ಅವರ ಗುಹ್ಯಾಂಗಗಳಿಗೆ ಈಟಿಯಿಂದ ತಿವಿದು ಕೊಲ್ಲಲಾಯಿತು. ಆ ಮಹಿಳೆಯರ ಮಾನ ಸಂರಕ್ಷಿ ಸುವ ಶಕ್ತಿ ಆ ಕಾಲದ ಮುಸ್ಲಿಮರಿಗಿರಲಿಲ್ಲ. "ನಮ್ಮ ಆಜ್ಞೆ ಗಳನ್ನು ಕೇಳಿ ಅದರ ಪ್ರಕಾರ ನಡೆಯುವ ಜವಾಬ್ದಾರಿಕೆ ನಿಮಗೆಷ್ಟಿದೆಯೋ ಅಷ್ಟು ಜವಾಬ್ದಾರಿಕೆ ಈ ಮಹಿಳೆಯರ ಸಂರಕ್ಷಣೆಯಲ್ಲಿ ನಿಮಗಿಲ್ಲ" ಎಂಬುದು ದೈವೇಚ್ಛೆಯಾಗಿತ್ತು. ಸಹನೆ ಮತ್ತು ಪ್ರಾರ್ಥನೆಯ ಮೂಲಕ ಈ ಆಪತ್ತುಗ ಳನ್ನೂ ಈ ಕಷ್ಟಗಳನ್ನೂ ವಿರೋಧಿಗಳ ಈ ತಂತ್ರಗಳ ನ್ನೂ ಎದುರಿಸ ಬೇಕೆಂದು ಆಜ್ಞೆಯೀಯಲಾಗಿತ್ತು. ಬೈಗ ಳಿಗೆ ಉತ್ತರ ಬೈಗಳಿಂದ ನೀಡಬೇಡಿರಿ. ಕಲ್ಲೇಟಿಗೆ ಉತ್ತರ ವಾಗಿ ಕಲ್ಲೆಸೆಯಬೇಡಿರಿ. ಕಲ್ಲೇಟನ್ನು ತಿನ್ನಿರಿ ಮತ್ತು ಸಹನೆ ದೋರಿರಿ ಮತ್ತು ಪ್ರಾರ್ಥಿಸಿರಿ. ಪ್ರಾರ್ಥನೆ ನಿಮಗಾಗಿ ಮತ್ತು ನಿಮಗೆ ಕಲ್ಲೆಸೆಯುವವರಿಗಾಗಿಯೂ ಮಾಡಿರಿ. ಇದು ಒಬ್ಬ ಅಹ್ಮದಿಯ ಸ್ಥಾನವಾಗಿದೆ. ಈ ಸ್ಥಾನವನ್ನು ತೊರೆಯಬೇಡಿರಿ. "ನೀವೇ ವಿಜಯಿಗಳಾಗುವಿರಿ" ಎಂಬ ವಾಗ್ದಾನ ಪೂರ್ತಿಯಾಗಲು ನೀವು ದೇವರ ಅನುಸರಣೆಯ ಲ್ಲಿಯೂ ಪೈಗಂಬರರ ಅನುಸರಣೆಯಲ್ಲಿಯೂ ಅಲ್ಪಸ್ವಲ್ಪ ವೂ ಪಥ ಭ್ರಷ್ಟರಾಗಬೇಡಿರಿ ನೀವು ದೇವರ ಮತ್ತು ಪೈಗಂಬರರ ಅನುಸರಣೆಯನ್ನು ದೃಢವಾಗಿ ಯಾವುದೇ ಲೋಪ ದೋಷವಿಲ್ಲದೆ ಮಾಡಿದರೆ ಮತ್ತು ದೇವರನ್ನು ದೃಢವಾಗಿ ಮತ್ತು ಪ್ರೇಮ ಪೂರ್ವಕವಾಗಿ ಆಶ್ರಯ ನೀಡು ವಂತೆ ಕೇಳಿದರೆ ದೇವರು ನಿಮ್ಮನ್ನು ವಿಜಯಿಗಳಾಗುವಂತೆ ಮಾಡುವನಲ್ಲದೆ ಮೊದಲಿಗಿಂತ ಹೆಚ್ಚು ಸುಂದರವೂ ಹೆಚ್ಚು ಸ್ವೀಕೃತವೂ ಆಗುವಂತಹ ಕೃತ್ಯಗಳನ್ನು ಮಾಡುವಂತೆ ನಿಮಗೆ ಆಸ್ಪದ ಕೊಡುತ್ತಾ ಹೋಗುವನು. ನಿಮ್ಮ ಸತ್ಕೃತ್ಯ ಗಳಲ್ಲಿ ಕೊರತೆಯುಂಟಾಗದು. ಅವುಗಳು ಹೆಚ್ಚುತ್ತಾ

ಹೋಗಿ ನಿಮಗೆ ಸಿಗುವ ಬಹುಮಾನಗಳು ಮುಗಿಯಲಾರವು. ಬಹುಮಾನಗಳಿಗೆ ಯಾವುದೇ ಮಿತಿ ಇರುವುದಿಲ್ಲ. "ನನ್ನನ್ನು ಮತ್ತು ಪೈಗಂಬರರನ್ನು ಸ್ನೇಹಿಸಿ ಅದಕ್ಕಾಗಿ ತ್ಯಾಗ ಮಾಡುವ ವ್ಯಕ್ತಿಗಳಿರುವ ಜನಾಂಗವನ್ನು ನಾನು ಅನುಗ್ರಹಿಸುತ್ತಲೇ ಹೋಗುವೆನ್"ಎಂದು ದೇವರು ಹೇಳಿರುವನು.

ನೀವು ಯಾವ ವ್ಯಕ್ತಿಗಳೊಡನೆ ಸಿಟ್ಟು ಮಾಡುತ್ತಿರುವಿರಿ? ಅವರ ಮಕ್ಕಳು ಇಸ್ಲಾಮಿನ ಸೇವೆಗಾಗಿ ನಿಮ್ಮ ಭುಜಕ್ಕೆ ಭುಜ ತಗಲಿಸಿ ತ್ಯಾಗ ಮಾಡುವಂತಾಗುವರು. ಇದೆಂತಹ ವಿವೇಕ ಶೂನ್ಯವಾದ ಸಂಗತಿ; ಯಾರು ನಿಮ್ಮೊಡನೆ ಈ ರೀತಿ ಉಪದೇಶಿಸಿದರು? ಪವಿತ್ರ ಖುರ್‌ಆನಿನ ಯಾವ ವಚನ ನಿಮಗೆ ಕಲಿಸಿ ಕೊಡುತ್ತದೆ: "ವಿರೋಧಿಗೆ ಆತನ ಜೀವಿತ ಕಾಲದಲ್ಲಿಯೇ ಶಾಶ್ವತ ಶಾಪದ ನೊಗವನ್ನು ಹೊರಿಸಲಾಗುವುದು" ಎಂದು. ಇಸ್ಲಾಮಿನ ವಿರೋಧಿಗಳಿಗೂ ಸತ್ಯವನ್ನು ಎದುರಿಸುವವರಿಗೂ ನಾವು ಸಮಯ ಕೊಡುತ್ತೇವೆಂದು ಪವಿತ್ರ ಖುರ್‌ಆನ್ ಹೇಳುತ್ತಿದೆ. "ಕೆಲವೊಮ್ಮೆ ಅವರನ್ನು ಹಿಡಿಯಲಾಗುತ್ತದೆ. ಕೆಲವೊಮ್ಮೆ ಬಿಟ್ಟು ಬಿಡಲಾಗುತ್ತದೆ". ದೇವರನ್ನು ತಿಳಿಯುವಂತೆ ಮಾಡಿ ಆತನ ಸ್ನೇಹವನ್ನು ಗಳಿಸುವಂತೆ ಮಾಡುವುದೇ ಇದರ ಉದ್ದೇಶವೆಂದು ತಿಳಿಯುತ್ತದೆ. ನೀವು ದೇವರ ದಾಸರಾಗಿದ್ದರೆ ನಿಮ್ಮ ಪ್ರಯತ್ನವೂ ಈ ರೀತಿಯಾಗಲಿ.

ನೀವು ವಿರೋಧಿಗಳಿಗಾಗಿಯೂ ಪ್ರಾರ್ಥಿಸಿರಿ. ನಿಮಗಾಗಿಯೂ ಪ್ರಾರ್ಥನೆ ಮಾಡಿರಿ. ಸಹನೆಯ ಮಾದರಿ ತೋರಿಸಿರಿ. ಸೇವೆ ಮತ್ತು ಉತ್ತಮ ಹಾರೈಕೆಯ ಮಾದರಿ ತೋರಿಸಿರಿ. ನಿಮ್ಮ ಇಂದಿನ ಕಠಿಣ ಶತ್ರು ಸಹ ನಿಮ್ಮ ಸೇವೆ ಮತ್ತು ಉತ್ತಮ ಹಾರೈಕೆಯ ತೀಕ್ಷ್ಣತೆಯ ಧಾರೆಯಿಂದ ಗಾಯಗೊಂಡವನಾಗಲಿ. ಇಂದು ಹೊರಗಿರುವವರು ನಾಳೆ ಒಳಗಿನವರಾಗುವಂತೆ ನಾವೆಲ್ಲರೂ ಪ್ರಯತ್ನಿಸೋಣ. ನಾವೆಲ್ಲರೂ ಇಸ್ಲಾಮಿನ ಸೇವೆ ಕೈಗೊಂಡು ಇಸ್ಲಾಮನ್ನು ಶೀಘ್ರವಾಗಿ ಪ್ರಪಂಚದಾದ್ಯಂತ ಹಬ್ಬಿಸಲಿರುವ ದೈವೇಚ್ಛೆ ಪೂರ್ತಿಗೊಳ್ಳುವಂತಾಗಲಿ. ಪೈಗಂಬರ್ ಮಹಮ್ಮದರ ಪತಾಕೆ ಎಲ್ಲೆಡೆ ಉನ್ನತವಾಗಿ ಹಾರಾಡುವಂತಾಗಲಿ. ಅವರ ಮೇಲಿನ ಪ್ರೇಮ ಹೃದಯದ ಬಡಿತದಂತೆ ಸ್ವಾಭಾವಿಕವಾಗಿ ಪ್ರತಿಯೊಂದು ಹೃದಯದಲ್ಲೂ ನೆಲೆಸುವಂತಾಗಲಿ. ಶಾರೀರಿಕವಾದ ಹೃದಯದ ಬಡಿತಕ್ಕಿಂತ ದೇವರ ಮತ್ತು ಪೈಗಂಬರರ ಮೇಲಿನ ಪ್ರೇಮದ ಬಡಿತವು ಒಬ್ಬನ ಹೃದಯದಲ್ಲುಂಟಾದರೆ ಆ ವ್ಯಕ್ತಿಗಾಗಿ ಪ್ರಪಂಚವೇ ಬಲಿಯರ್ಪಿಸಲ್ಪಡುತ್ತದೆ. ಅಂತಹ ಹೃದಯವನ್ನು ತಮ್ಮ ಎದೆಯಲ್ಲಿ ಪ್ರತಿಷ್ಠಾಪಿಸಿರಿ. ನೀವು ಅವರ ವೈರಿಗಳೆಂದು ಅಜ್ಞಾನದಿಂದ ಗ್ರಹಿಸುವವರ ಹೃದಯವನ್ನು ಪ್ರೇಮದಿಂದ ಗೆಲ್ಲಲು ಪ್ರಯತ್ನಿಸಿರಿ. ನೀವು ಅವರ ವೈರಿಗಳಲ್ಲ ಅವರ ಯಥಾರ್ಥ ಹಿತ ಚಿಂತಕರೆಂದು ನೀವು ತೋರಿಸಿ ಕೊಡಬೇಕಾಗಿದೆ. ನೀವೇ ಯಥಾರ್ಥವಾಗಿ ಅವರನ್ನು ಪ್ರೀತಿಸುವವರೆಂದು ತೋರಿಸಿ ಕೊಡಬೇಕಾಗಿದೆ. ಅವರ ದುಃಖವನ್ನು ಪರಿಹರಿಸಲು ನಿಮ್ಮನ್ನು ಸೃಷ್ಟಿಸಲಾಗಿದೆಯೆಂದು ನೀವು ತೋರಿಸಿ ಕೊಡಬೇಕಾಗಿದೆ. ನೀವು ಅವರಿಗೆ ಮಾಡುವ ಉಪಕಾರದಿಂದ ಮುಹಮ್ಮದ್ ಪೈಗಂಬರರು ಲೋಕಕ್ಕೆ ಮಾಡಿದ ಉಪಕಾರದ ಜ್ಞಾನವುಂಟಾಗುವಂತೆ ಮಾಡಬೇಕಾಗಿದೆ. ಮುಹಮ್ಮದ್ ಪೈಗಂಬರರ ಉಪಕಾರ ತಲುಪಿದ ಶಿಖರ ಬಹಳ ಉನ್ನತವಾಗಿದೆ. ಆದರೆ ಮುಳ್ಳಿನ ಪೊದೆಗಳೂ ಗಿಡಗಳೂ ಆ ಉನ್ನತಿ ತಲುಪಲು ತಡೆಯಾಗಿವೆ. ಅವು ಕಣ್ಣಿಗೆ ಕಾಣಿಸುವುದಿಲ್ಲ. ನೀವು ಸ್ನೇಹದಿಂದಲೂ ಪ್ರೇಮದಿಂದಲೂ ಆ ಮುಳ್ಳಿನ ಗಿಡಗಳನ್ನು ನಿವಾರಿಸಬೇಕಾಗಿದೆ. ನೀವು ಸ್ನೇಹ ಮತ್ತು ಪ್ರೇಮದಿಂದ ಉಂಟು ಮಾಡುವಂತಹ ಆತ್ಮೀಯ ವಾತಾವರಣದಲ್ಲಿ ಅವರಿಗೆ ಲೋಕಾನುಗ್ರಹಿಯಾದ ಪೈಗಂಬರರ ಸ್ಥಾನವೇನೆಂದು ತಿಳಿಯುವುದು. ಅದಕ್ಕಾಗಿ ನೀವು ಪ್ರಯತ್ನಶೀಲರಾಗಿರಿ. ಚಿಕ್ಕ ಪುಟ್ಟ ವಿಷಯಗಳ ಹಿಂದೆಬಿದ್ದು ನಿಮ್ಮ ಸಮಯ ಹಾಳು ಮಾಡ ಬೇಡಿರಿ. ಸ್ವಲ್ಪ ಸಮಯಕ್ಕಾಗಿಯಾದರೂ ಯಾರನ್ನೂ ಪರೀಕ್ಷೆಗೆ ಗುರಿ ಮಾಡ ಬೇಡಿರಿ. ಇಸ್ಲಾಮಿನ ವಿಜಯದ ಮಾರ್ಗವನ್ನು ಅಡ್ಡಿಗೊಳಿಸುವಂತಹ ಕಾರ್ಯ ಕ್ರಮಗಳಲ್ಲಿ ನೀವು ಪ್ರವೇಶಿಸಬೇಡಿರಿ. ನೀವು ಅಂತಹ ಕಾರ್ಯಗಳಿಗಾಗಿ ಸೃಷ್ಟಿಸಲ್ಪಡಲಿಲ್ಲ. ನೀವು ಪ್ರಾರ್ಥನೆ ಮಾಡಿರಿ, ಸಹನೆದೋರಿರಿ. ಎಲ್ಲಾ ಸಮಯದಲ್ಲಿ ಸೇವೆಗಾಗಿ ಸನ್ನದ್ಧರಾಗಿರಿ. ಯಾರಿಗಾದರೂ ನಿಮ್ಮ ಕುರಿತು ನೀವು ಅವರ ಕಠಿಣ ಶತ್ರುವೆಂಬ ಭಾವನೆಯಿದ್ದರೆ ನಿಮ್ಮ ಸ್ನೇಹ ಪೂರ್ವಕವಾದ ಸೇವೆಯಿಂದ ಆ ಭಾವನೆಯನ್ನು ಅವರ ಹೃದಯದಿಂದ ದೂರಗೊಳಿಸಲು ಪ್ರಯತ್ನಿಸಿರಿ. ಹೀಗೆ ಮಾಡಿದರೆ ಮಾತ್ರ ನಾವು ಇಚ್ಛಿಸುವುದು ನಮಗೆ ಬೇಗನೇ ದೊರಕುವುದು. ದೇವರ ದಯದಿಂದ ಹಾಗೆಯೇ ಆಗಲಿ.

ನಿಮ್ಮನ್ನು ಎಲ್ಲರಿಗಿಂತಲೂ ಹೆಚ್ಚಾಗಿ ಪ್ರೀತಿಸುವ, ನಿಮಗಾಗಿ ರಾತ್ರಿ ಹಗಲು ಚಿಂತಿಸುತ್ತಾ ಸ್ನೇಹದಿಂದ ಪ್ರಾರ್ಥಿಸುತ್ತಾ ಇರುವ ದೇವರ ವಿನೀತ ದಾಸ,

**ಮಿರ್ಝಾ ನಾಸಿರ್ ಅಹ್ಮದ್**

ಖಲೀಫತುಲ್‌ಮಸೀಹ್ III

# ಸಂಪಾದಕರಿಗೆ ಪತ್ರ

ಮಾನ್ಯ ಸಂಪಾದಕರಿಗೆ,

ತಮ್ಮ ತ್ರೈಮಾಸಿಕ ಪತ್ರಿಕೆಯಾದ "ಯುಗರಶ್ಮಿ" ಓದಿ ನನಗೆ ಬಹಳ ಆನಂದವಾಯಿತು. ನಾನು ಹಿಂದೂ ಧರ್ಮದವನಿದ್ದರೂ ಎಲ್ಲ ಧರ್ಮಗಳ ಬಗ್ಗೆ ಗೌರವಭಾವನೆಯುಳ್ಳವನಾಗಿರುತ್ತೇನೆ. ಇಸ್ಲಾಮ್ ಧರ್ಮದ ಬೋಧನೆ, ಮುಹಮ್ಮದ್ ಪೈಗಂಬರರು ಹೇಳಿದ ದೇವವಾಣಿ ಹಾಗೂ ಅವರು ಅಂದಿನ ಕಾಲದಲ್ಲಿ ನಡೆದು ತೋರಿಸಿದ, ನುಡಿದಂತಹ ವಚನಗಳ ಸಮಗ್ರಸಾರವನ್ನು ಕನ್ನಡದಲ್ಲಿ ಪ್ರಕಟಿಸಿ ಇಸ್ಲಾಮ್ ಧರ್ಮದ ಮಹತ್ವವನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತಿರುವ ತಮಗೆ ನನ್ನ ಅಭಿನಂದನೆಗಳು. ತಮ್ಮ ಪತ್ರಿಕೆ ಹೀಗೆಯೇ ಇಸ್ಲಾಮ್ ಧರ್ಮದ ಮಹತ್ವವನ್ನು ಹಾಗೂ ಅದಕ್ಕಾಗಿ ಪ್ರವಾದಿಗಳು ಪಟ್ಟ ಪರಿಶ್ರಮದ ಇತಿಹಾಸವನ್ನು ಇನ್ನೂ ಹೆಚ್ಚಿಗೆ ತಿಳಿಸುವಂತಾಗಲಿ ಎಂದು ಹಾರೈಸುತ್ತೇನೆ. ಇಸ್ಲಾಮ್ ಧರ್ಮ ಹಾಗೂ ಹಿಂದೂ ಧರ್ಮ ಇವೆರಡರ ಉಪದೇಶ, ಗುರಿ ಏನೆಂಬುದನ್ನು ಹಾಗೂ ನಡೆದು ಬರುತ್ತಿರುವ ದಾರಿಯನ್ನು ತಮ್ಮ ಪತ್ರಿಕೆ ತಿಳಿಸಿಕೊಡಬೇಕೆಂದು ನಾನು ಇಚ್ಛಿಸುತ್ತೇನೆ. ಮುಹಮ್ಮದ್ ಪೈಗಂಬರರು ಹಾಗೂ ಶ್ರೀ ಜಗಜ್ಜ್ಯೋತಿ ಬಸವೇಶ್ವರರು ಹೇಳಿದ ತತ್ವ ವಚನಗಳು ಒಂದೇ ಎಂದು ನಾನು ಭಾವಿಸಿದ್ದೇನೆ.

ಯಾವ ಧರ್ಮವಾದರೂ ಇಡೀ ಮಾನವ ಕುಲಕ್ಕೆ ಒಳ್ಳೆಯದಾಗಲಿ, ಸುಖವಾಗಿ ಬಾಳಲಿ, ಪರಸ್ಪರರು ಪ್ರೀತಿಯಿಂದ ಇರಲಿ, ಎಲ್ಲರೂ ದೇವರ ಆಧೀನ, ಎಲ್ಲರೂ ಅವನ ಅಪ್ಪಣೆಯಂತೆ ನಡೆಯಬೇಕೆಂದು ಹೇಳುತ್ತವೆ. ಅದರಂತೆ ಇಸ್ಲಾಮ್ ಧರ್ಮವು ಸಕಲರ ಒಳಿತಿಗಾಗಿಯೇ ಹುಟ್ಟಿಬಂದಿರುತ್ತದೆ. ಅದರ ತತ್ವವನ್ನು ಎಲ್ಲರೂ ತಿಳಿದುಕೊಂಡು ಅದರಂತೆ ನಡೆದುಕೊಂಡು ಹೋಗಲು ದೇವರು ನಮಗೆ ಬುದ್ಧಿ ಕೊಡಲಿ ಎಂದು ನಾನು ಬೇಡಿಕೊಳ್ಳುತ್ತೇನೆ.

ತಮ್ಮ ಪತ್ರಿಕೆ ಜನತೆಗೆ, ಅದರಲ್ಲಿಯೂ ತಮ್ಮ ಮತಾವಲಂಬಿಗಳಿಗೆ ಹೆಚ್ಚಿನ ಮಾರ್ಗದರ್ಶನ ಮಾಡಿ, ಅವರನ್ನು ಸನ್ಮಾರ್ಗಿಗಳನ್ನಾಗಿ ಮಾಡಲಿ ಎಂದು ತಮ್ಮ ಪತ್ರಿಕೆಗೆ ಶುಭಕೋರುತ್ತೇನೆ.

ತಮ್ಮ ಆತ್ಮೀಯ ವಾಚಕ,

**ಬೈಲಹೊಂಗಲ.** **ಮೋಹನ ಮುರಗೋಡ.**

ಪ್ರಿಯ ಸಂಪಾದಕರೇ,

ಯುಗರಶ್ಮಿಯ ಒಂದು ಸಂಚಿಕೆಯನ್ನು ನನಗೆ ಯಾರೋ ಕೊಟ್ಟಿದ್ದರು. ಅದನ್ನು ಓದಿ ತುಂಬಾ ಸಂತೋಷವಾಯಿತು. ಅಹ್ಮದಿಯಾ ಸಂಘಟನೆಯ ಕುರಿತು ಅದರ ಸರಿಯಾದ ತತ್ವಜ್ಞಾನಗಳನ್ನು ತಿಳಿದುಕೊಳ್ಳಲು ಸ್ನೇಹಪೂರ್ವಕವಾಗಿ ನಾನು ಬಯಸಿದ್ದೇನೆ. ತಾವು ನನ್ನ ಆಶೆಯನ್ನು ಪೂರೈಸಿಕೊಡುವಿರಾದರೆ ತುಂಬಾ ಸಂತೋಷ.

**ಸಜೀಪ.** **— ಓರ್ವ ಮೌಲವಿ ಸಾಹೇಬರು.**

# ಅಹ್ಮದಿಯಾ ವಾರ್ತೆಗಳು

## ಪ್ರಧಾನ ಮಂತ್ರಿಯ ಜತೆ ಅಹ್ಮದಿಯಾ ನಿಯೋಗದ ಭೇಟಿ

ಪಾಕಿಸ್ತಾನದ ಮಾಜಿಪ್ರಧಾನಿ ಮಿಸ್ಟರ್ ಭುಟ್ಟೋ ರವರನ್ನು ಗಲ್ಲಿಗೇರಿಸಿದ ನಂತರ ಕಾಶ್ಮೀರದ ವಿವಿಧ ಸ್ಥಳಗಳಲ್ಲಿ ನಿರಪರಾಧಿ ಅಹ್ಮದಿಯರ ಮೇಲೆ ಅಕ್ರಮಗಳು ನಡೆದು ಬಹಳ ನಾಶ ನಷ್ಟಗಳು ಸಂಭವಿಸಿದುವು. ಈ ವಿಷಯದ ಕುರಿತು ಪ್ರಧಾನ ಮಂತ್ರಿಗಳಾದ ಶ್ರೀ ಮುರಾರ್ಜಿ ದೇಸಾಯಿ ಅವರನ್ನು ಅಹ್ಮದಿಯರ ಒಂದು ನಿಯೋಗ ಮೇ 10ನೇ ತಾರೀಕಿನಂದು ಭೇಟಿಯಾಗಿ ಮನವಿಯನ್ನು ಸಮರ್ಪಿಸಿತು. ಈ ನಿಯೋಗದಲ್ಲಿ ಜನಾಬ್ ಶೇಖ್ ಅಬ್ದುಲ್ ಹಮೀದ್ ಆಜಿಝ್ ಸಾಹೇಬ್, ಮೌಲಾನಾ ಬಶೀರ್ ಅಹ್ಮದ್ ಸಾಹೇಬ್, ಸೇಠ್ ಮುಯಿನುದ್ದೀನ್ ಸಾಹೇಬ್ ಮತ್ತು ಸೇಟ್ ಇಲ್ಯಾಸ್ ಸಾಹೇಬ್ ಇದ್ದರು. ಇವರ ಜೊತೆ ಹೈದರಾಬಾದಿನ ಜನತಾ ಪಾರ್ಟಿಯ ಓರ್ವ ಪದಾಧಿಕಾರಿಯಾದ ಜನಾಬ್ ಕೆ. ಎಂ. ಖಾನ್ ಸಹ ಇದ್ದರು.

ಮೇ ಹತ್ತರಂದು ಮಧ್ಯಾಹ್ನ 2–30ಕ್ಕೆ ಪಾರ್ಲಿಮೆಂಟ್ ಹೌಸಿನಲ್ಲಿ ಈ ನಿಯೋಗ ಪ್ರಧಾನ ಮಂತ್ರಿಯನ್ನು ಭೇಟಿಯಾಯಿತು. ಜನಾಬ್ ಶೇಖ್ ಅಬ್ದುಲ್ ಹಮೀದ್ ಆಜಿಝ್ ಸಾಹೇಬರು ಈ ನಿಯೋಗದ ನೇತೃತ್ವವನ್ನು ವಹಿಸುತ್ತಾ ಪ್ರಧಾನಿಗಳಿಗೆ ಅಹ್ಮದಿಯಾ ಸಂಘಟನೆಯ ಪರಿಚಯ ಮಾಡಿ ಕಾಶ್ಮೀರದ ಅಹ್ಮದಿಯರಿಗೆ ಸಂಭವಿಸಿದ ನಾಶ ನಷ್ಟಗಳ ವಿವರವನ್ನಿತ್ತು ಕೂಡಲೇ ಪರಿಹಾರ ನೀಡಲು ಭಿನ್ನವಿಸಿದರು. ಮೌಲಾನಾ ಬಶೀರ್ ಅಹ್ಮದ್ ಸಾಹೇಬರು ತಾವು ಇತ್ತೀಚೆಗೆ ಕಾಶ್ಮೀರವನ್ನು ಸಂದರ್ಶಿಸಿ ಸ್ವತಃ ಕಂಡುದನ್ನು ವಿವರಿಸಿ, ಬೆಂಕಿಹಚ್ಚಲಾದ ಮನೆಗಳ ಫೊಟೋಗಳನ್ನು ತೋರಿಸಿದರು. ಡಿಲ್ಲಿಯಿಂದ ಪ್ರಕಟವಾಗುತ್ತಿರುವ "ಅವಾಮ್" ಎಂಬ ಉರ್ದು ಪತ್ರಿಕೆಯಲ್ಲಿ "ಮಹಾ ಕೊಲೆಗಡುಕ ಝಿಯಾಉಲ್ ಹಕ್ ಖಾದಿಯಾನಿ" ಎಂಬ ಸುಳ್ಳು ಸುದ್ದಿ ಪ್ರಕಟವಾದುದನ್ನು ಪ್ರಧಾನಿಯವರ ಗಮನಕ್ಕೆ ತರಲಾಯಿತು. ಪ್ರಧಾನಿಯವರು ಈ ಪತ್ರಿಕೆಯನ್ನು ನೋಡಿ "ಇದು ಶುದ್ಧ ಸುಳ್ಳು" ಎಂದು ಹೇಳಿದರು. "ಭುಟ್ಟೋ ಪ್ರಕರಣ ಪಾಕಿಸ್ತಾನದ ಆಂತರಿಕ ಸಂಗತಿಯೆಂದೂ ಭುಟ್ಟೋರ ಆಡಳಿತದ ಕಾಲದಲ್ಲಿ ಪಾಕಿಸ್ತಾನದ ಅಹ್ಮದಿಯಾ ಸಂಘಟನೆಯನ್ನು "ಅಮುಸ್ಲಿಮ್" ಎಂದು ಘೋಷಿಸಲಾಗಿದ್ದರೂ ನಾವು ಸಹನೆಯಿಂದ ವರ್ತಿಸಿ ಈ ವಿಷಯವನ್ನು ದೇವರಿಗೆ ವಹಿಸಿಕೊಟ್ಟೆವು" ಎಂದು ನಿಯೋಗದ ಪರವಾಗಿ ಪ್ರಧಾನಿಯವರೊಡನೆ ಹೇಳಿದಾಗ ಅವರು "ಈ ಸಂಗತಿ ಪಾಕಿಸ್ತಾನದ ಆಂತರಿಕ ವಿಷಯವೆಂಬುದು ತಾತ್ವಿಕವಾಗಿ ಸ್ಪಷ್ಟವಾಗಿದೆ. ನಾನು ಭುಟ್ಟೋರವರ ಕುರಿತು ಝಿಯಾವುಲ್ ಹಕ್‌ರೊಡನೆ ಕ್ಷಮಾಪಣೆಗಾಗಿ ಮನವಿಯೇಕೆ ಮಾಡಲಿಲ್ಲ ಎಂದು ಹಲವರು ನನ್ನೊಡನೆ ಸಿಟ್ಟುಗೊಂಡಿರುವರು. ನಾನು ಯಾವ ರೀತಿ ಮನವಿ ಮಾಡಲಿ? ಝಿಯಾವುಲ್ ಹಕ್ ಸರಿಯಾದ ತೀರ್ಮಾನ ಮಾಡಿರುವರೋ ತಪ್ಪು ತೀರ್ಮಾನ ಮಾಡಿರುವರೋ ಎಂದು ಪಾಕಿಸ್ತಾನಿಗಳೇ ನಿರ್ಣಯಿಸಲಿ" ಎಂದು ಹೇಳಿದರು. ಪ್ರಧಾನಿಯವರು ಮನವಿ ಪತ್ರವನ್ನು ಪರಿಶೀಲಿಸಿ ಸಂಭವಗಳ ಕುರಿತು ಖೇದ ವ್ಯಕ್ತಗೊಳಿಸಿದರು. ಹಾನಿಗೀಡಾದವರಿಗೆ ಪರಿಹಾರ ನೀಡಲು ಕಾಶ್ಮೀರದ ಮುಖ್ಯ ಮಂತ್ರಿಗೆ ಬರೆದುದಾಗಿ ತಿಳಿಸಿದರು. ಅವರ ಪುನರ್ವಸತಿಗೆ ಬೇಕಾದ ಏರ್ಪಾಡು ಮಾಡಬೇಕೆಂದು ಬರೆದುದಾಗಿಯೂ ಪುನಃ ಈ ಸಂಗತಿಯ ಕುರಿತು ಬರೆಯುವುದಾಗಿ ಸಹ ಹೇಳಿದರು. ಅಗತ್ಯವಿದ್ದರೆ ಕೇಂದ್ರದ ಸಹಾಯದ ಕುರಿತು ಸಹ ಪರಿಶೀಲಿಸಲಾಗುವುದೆಂದು ಅವರು ಆಶ್ವಾಸನೆಯಿತ್ತರು.

ಈ ಭೇಟಿಯ ವಾರ್ತೆ ಆಕಾಶವಾಣಿ ತನ್ನ ಸಂಜೆಯ ಪ್ರಸಾರದಲ್ಲಿ ಬಿತ್ತರಿಸಿತು. ಅಲ್ಲದೆ ಸ್ಟೇಟ್ಸ್‌ಮೇನ್ ಪತ್ರಿಕೆಯಲ್ಲಿ ಪಿ.ಟಿ.ಐ. ವಾರ್ತಾ ಸಂಸ್ಥೆಯ ವರದಿ ಸಹ ಪ್ರಕಟವಾಗಿದೆ.

ಕೇಂದ್ರದ ವಸತಿ ಮತ್ತು ಕಾಮಗಾರಿ ಸಚಿವರಾದ ಸಿಕಂದರ್ ಭಕ್ತ್‌ರವರನ್ನು ಈ ನಿಯೋಗ ಅಂದೇ ಭೇಟಿಯಾಯಿತು. ಅವರು ಯೋಗ್ಯ ರೀತಿಯ ಕಾರ್ಯವಿಧಾನ ಕೈಗೊಳ್ಳುವುದಾಗಿ ಭರವಸೆ ನೀಡಿದರು.

## ಖುರ್‌ಆನಿನ ಮಹಾತ್ಮೆ—ಕಲ್ಲಿಕೋಟೆ ಯಲ್ಲಿ ಸೆಮಿನಾರ್

ಕಳೆದ ಎಪ್ರಿಲ್ 23ರಂದು ಸಂಜೆ ಕಲ್ಲಿಕೋಟೆಯ ಪುರಭವನದಲ್ಲಿ ಸ್ಥಳೀಯ ಅಹ್ಮದಿಯಾ ಶಾಖೆಯ ವತಿಯಿಂದ "ಖುರ್‌ಆನಿನ ಮಹಾತ್ಮೆ" ಎಂಬ ಸೆಮಿನಾರನ್ನು ಏರ್ಪಡಿಸಲಾಯಿತು.

ಎಲ್ಲಾ ಮತಾಚಾರ್ಯರನ್ನು ಗೌರವಿಸುವ ಪವಿತ್ರ ಖುರ್‌ಆನಿನ ಅಧ್ಯಾಪನೆಗಳು ಮತರಂಗದಲ್ಲೂ ಸೌಹಾರ್ದ ಮತ್ತು ಮೈತ್ರಿಯ ವಾತಾವರಣವನ್ನು ಸೃಷ್ಟಿಸುತ್ತದೆಂದು ಹೈದರಾಬಾದ್ ಉಸ್ಮಾನಿಯಾ ಯುನಿವರ್ಸಿಟಿಯ ಪ್ರೊಫೆಸರ್ ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾವುದ್ದೀನ್ ಸಾಹೇಬರು ಸಭೆಯನ್ನು ಉದ್ಘಾಟಿಸುತ್ತಾ ಹೇಳಿದರು. ಮಾನವನ ಮಾರ್ಗದರ್ಶಕವಾಗಿರುವ ಖುರ್‌ಆನ್ ನೈತಿಕ ಹಾಗೂ ಆಧ್ಯಾತ್ಮಿಕ ಪುರೋಭಿವೃದ್ಧಿಗೆ ಉತ್ಕೃಷ್ಟ ಉಪದೇಶಗಳನ್ನು ನೀಡುವುದಲ್ಲದೆ ಮನುಷ್ಯನ ಸಕಲ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತದೆಂದು ಸಹ ಅವರು ನುಡಿದರು.

"ಮುಸ್ಲಿಂ ರಾಷ್ಟ್ರ"ಗಳೆಂದು ಕರೆಯಲ್ಪಡುವ ಕೆಲವು ದೇಶಗಳಲ್ಲಿ ಇಸ್ಲಾಮಿನ ಹೆಸರಿನಲ್ಲಿ ಅನ್ಯಾಯಗಳು ನಡೆಯುತ್ತಿವೆಯೆಂದೂ ಆದರೆ ಖುರ್‌ಆನಿನ ಅಧ್ಯಾಪನಗಳಿಗೆ ಅವು ಕಟು ವಿರುದ್ಧವಾಗಿವೆಯೆಂದೂ ಬಲತ್ಕಾರದಿಂದ ಧರ್ಮವನ್ನು ಹೇರಲು ಖುರ್‌ಆನ್ ಪ್ರಬೋಧಿಸುವುದಿಲ್ಲವೆಂದೂ ಅಧ್ಯಕ್ಷತೆ ವಹಿಸಿದ್ದ ಕೇರಳ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಅಬುಲ್ ವಫಾ ಸಾಹೇಬರು ಹೇಳಿದರು.

ಒಳಿತು ಅಥವಾ ಕೆಡುಕನ್ನು ಆರಿಸುವ ಸ್ವಾತಂತ್ರ್ಯವನ್ನು ಮನುಷ್ಯನಿಗೆ ಅಲ್ಲಾಹು ನೀಡಿರುವನೆಂದು ಖುರ್‌ಆನ್ ಹೇಳುತ್ತದೆ; ಮುಹಮ್ಮದ್ ಪೈಗಂಬರರನ್ನು ಅಲ್ಲಾಹು ಸಂದೇಶವಾಹಕನಾಗಿ ಮಾತ್ರ ಕಳುಹಿಸಿದ್ದಲ್ಲದೆ, ಕಾವಲುಗಾರನನ್ನಾಗಿ ನೇಮಿಸಲಿಲ್ಲ; ಬಲವನ್ನು ಪ್ರಯೋಗಿಸಲು ಅವರಿಗೆ ಅಧಿಕಾರವನ್ನು ನೀಡಲಿಲ್ಲ: ಹಾಗಿರುವಾಗ "ಮುಸ್ಲಿಮರ"ೆಂದು ಹೇಳಿಕೊಳ್ಳುವ ಕೆಲವು ಆಡಳಿತಾಧಿಕಾರಿಗಳಿಗೆ ಬಲಪ್ರಯೋಗಿಸಲು ಯಾರು ಅಧಿಕಾರ ಕೊಟ್ಟರೆಂದು ಕೇರಳ ಅಹ್ಮದಿಯಾ ಕೇಂದ್ರ ಸಮಿತಿ ಅಧ್ಯಕ್ಷ ಎಸ್. ಅಮೀರಲಿ ಸಾಹೇಬರು ತನ್ನ ಭಾಷಣದಲ್ಲಿ ಪ್ರಶ್ನಿಸಿದರು.

ಜನಾಬ್ ಎಂ. ಮುಹಮ್ಮದ್ ಎಂ.ಎ., ಜ। ಬಿ. ಮಹಮೂದ್ ಅಹ್ಮದ್ ಎಂ.ಎ., ಜ। ಮೌಲವಿ ಮುಹಮ್ಮದ್ ಉಮರ್ ಎಚ್.ಎ., ಮತ್ತು ಜ। ಇ. ತಾಹಿರ್ ಖುರ್‌ಆನಿನ ವೈಶಿಷ್ಟ್ಯಗಳ ಕುರಿತು ಭಾಷಣಮಾಡಿದರು.

ಪವಿತ್ರ ಖುರ್‌ಆನಿನ (ಅರಬಿ ಮೂಲ ಸಹಿತ) ಇಂಗ್ಲಿಷ್ ಭಾಷಾಂತರಗಳನ್ನು ಕೇರಳದ ಎಲ್ಲಾ ವಾಚನಾಲಯಗಳಿಗೆ ಉಚಿತವಾಗಿ ನೀಡುವುದರ ಉದ್ಘಾಟನೆಯನ್ನು ಲೋಕಲ್ ಲೈಬ್ರರಿ ಅಥೋರಿಟಿ ಚೆಯರ್‌ಮನ್ ಶ್ರೀ ಎಂ. ಬಾಲಗೋಪಾಲನರಿಗೆ ಒಂದು ಪ್ರತಿಯನ್ನು ನೀಡಿ ಪ್ರೊ। ಹಾಫಿಝ್ ಸಾಹೇಬರು ನಿರ್ವಹಿಸಿದರು.

ಕೊನೆಗೆ ಜ। ವಿ. ಪಿ. ಮಮ್ಮು ಸಾಹೇಬರು ಧನ್ಯವಾದ ಅರ್ಪಿಸಿದರು.

---

## ಕಂಬನಿ

ತಾರೀಕು 23—4—1979ರಂದು ಜನಾಬ್ ಕೆ. ಎ. ಫಕ್ರುದ್ದೀನ್ ಸಾಹೇಬರು ಅತ್ಯಲ್ಪಕಾಲದ ಅಸ್ವಸ್ಥೆಯ ನಂತರ ಮಡಿಕೇರಿಯಲ್ಲಿ ನಿಧನ ಹೊಂದಿದರು. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್. ಮೃತರಿಗೆ ಅಂದಾಜು 44 ವರ್ಷ ಪ್ರಾಯವಾಗಿತ್ತು. ಅವರು ಮಡಿಕೇರಿಯಲ್ಲಿ ಕ್ರಿ. ಶ. 1951ರಲ್ಲಿ ಅಹ್ಮದಿ ಮೌಲವಿಗಳಿಗೂ ಸುನ್ನಿ ಮೌಲವಿಗಳಿಗೂ ನಡೆದ ವಾದ ಪ್ರತಿವಾದದ ನಂತರ ಅಹ್ಮದಿಯಾ ಜಮಾಅತನ್ನು ಪ್ರವೇಶಿಸಿದರು. ಮೃತರು ಆರು ಮಂದಿ ಹೆಣ್ಣುಮಕ್ಕಳನ್ನು ಒಬ್ಬ ಪುತ್ರನನ್ನು ಮತ್ತು ಪತ್ನಿಯನ್ನು ತನ್ನ ಸ್ಮಾರಕವಾಗಿ ಬಿಟ್ಟು ಹೋಗಿರುವರು. ಮೃತೆರ ಮರಣದಿಂದಾಗಿ ಅವರ ಬಂಧು ಮಿತ್ರರಿಗೆ ಉಂಟಾಗಿರುವ ಅಪಾರ ದುಃಖದಲ್ಲಿ ನಾವು ಸಹಭಾಗಿಗಳಾಗಿದ್ದೇವೆ. ಅಲ್ಲಾಹು ಮೃತರಿಗೆ ಶಾಂತಿಯನ್ನೂ ಬಂಧುಗಳಿಗೆ ಸಹನೆಯನ್ನೂ ದಯಪಾಲಿಸಲಿ.

---

## ತಿದ್ದುಪಡಿ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| 1 | 2–3 | ನೆರವಿವಾಗಿ | ನೆರವಿಗಾಗಿ |
| 5 | 4 | ಅವನಿಚ್ಚೆ | ಅವನಿಗಿಚ್ಚೆ |
| 5 | 19 | ಆನೇಕ | ಅನೇಕ |
| 6 | 9 | ಮರಣವನ್ನು | ಜೀವವನ್ನು |
| 7 | 27 | ನಾಪು | ನಾವು |
| 8 | 5 | ಸುಪತ್ತು | ಸಂಪತ್ತು |
| 11 | 33 | ಜ್ಯಾರಿಗೊಳಿಸುವರ್ಯೆ | ಜಾರಿಗೊಳಿಸುವರೆ |
| 11 | 34 | ಲಕ್ಷ | ಲಕ್ಷ್ಯ |
| 17 | 18 | ಒಂದ | ಒಂದು |
| 17 | 23–24 | ವಿಚಾವಣೆ | ವಿಚಾರಣೆ |
| 19 | 15 | ಪಟ್ಟಣವನ್ನಾಗಿಸಬೇಕೆಂದಾಗಿತ್ತು | ಪಟ್ಟಣವನ್ನಾಗಿರಿಸಬೇಕೆಂದಾಗಿತ್ತು |
| 20 | 16–17 | ಸೂತ್ರದಾರಿಕೆಯಾಗಿತ್ತು. ಅದು. | ಸೂತ್ರದಾರಿಕೆಯಾಗಿತ್ತು ಅದು. |
| 24 | 23 | ಇಸ್ರ್ರಯೊನೂ | ಇಸ್ತಯೊನೂ |
| 25 | 1 | ಽಮಾಲಕವೂ | ಮೂಲಕವೂ |




# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಪುಟ: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHI Kannada Quarterly,
23/1008, Ansari Road, Bunder, Mangalore-575001.

ಪುಸ್ತಕ ವಿಭಾಗ

# ಇಸ್ಲಾಂ ಮತ ತತ್ತ್ವಜ್ಞಾನ

## (4)

ಲೇಖಕ: ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್.

ಅನುವಾದಕ: ಮುಹಮ್ಮದ್ ಯೂಸುಫ್.

"ಇನ್ನಲ್ಲಾಹ ಯಅ್‌ಮುರುಕುಂ ಅನ್ ತುಅದ್ದುಲ್ ಅಮಾನಾತಿ ಇಲಾ ಅಹ್ಲಿಹಾ" (4:59) — ವಿಶ್ವಾಸಾರ್ಪಿತ ವಸ್ತುಗಳನ್ನು ಅವುಗಳ ಹಕ್ಕುದಾರರಿಗೆ ಹಿಂತಿರುಗಿಸಿ ಕೊಡಲು ಅಲ್ಲಾಹು ನಿಮಗೆ ಆಜ್ಞಾಪಿಸುತ್ತಾನೆ.

"ಇನ್ನಲ್ಲಾಹ ಲಾ ಯುಹಿಬ್ಬುಲ್ ಖಾಇನೀನ್" (8:59) — ಅಲ್ಲಾಹು ವಿಶ್ವಾಸವಂಚಕರನ್ನು ಪ್ರೀತಿಸುವುದಿಲ್ಲ.

"ವ ಔಫುಲ್ ಕೈಲ ಇದಾ ಕಿಲ್ತುಂ ವಜಿನೂ ಬಿಲ್‌ಕಿಸ್ತಾಸಿಲ್‌ಮುಸ್ತಕೀಂ" (17:36)—ನೀವು ಅಳೆದು ಕೊಡುವಾಗ ಸರಿಯಾಗಿ ಅಳೆದುಕೊಡಿರಿ; ತೂಕಮಾಡಿ ಕೊಡುವಾಗ ಸರಿಯಾದ ತಕ್ಕಡಿಯಲ್ಲಿ ತೂಕಮಾಡಿ ಕೊಡಿರಿ.

"ವಲಾ ತಬ್‌ಖಸುನ್ನಾಸ ಅಶ್ಯಾಅಹುಂ ವಲಾ ತಅ್‌ಸೌ ಫಿಲ್ ಅರ್‌ಲೆ ಮುಫ್ಸಿದೀನ್" (26:184)—ಯಾವ ರೀತಿಯಲ್ಲೂ ಜನರ ವಸ್ತುಗಳಿಗೆ ಹಾನಿಯನ್ನುಂಟುಮಾಡಬೇಡಿರಿ. ದುರುದ್ದೇಶದಿಂದ, ಎಂದರೆ ಚೋರತನ, ಕೊಳ್ಳೆಹೊಡೆಯುವುದು, ಕಿಸೆಗಳ್ಳತನ ಅಥವಾ ಬೇರೆ ಯಾವ ಮಾರ್ಗಗಳಿಂದಲೂ ಅನ್ಯರ ಸಂಪತ್ತನ್ನು ವಶಪಡಿಸುವ ಉದ್ದೇಶದಿಂದ ನೀವು ಭೂಮಿಯಲ್ಲಿ ಸಂಚರಿಸಬೇಡಿರಿ.

"ವಲಾ ತತಬದ್ದಲುಲ್ ಖಬೀಸ ಬಿತ್ತಯ್ಯಿಬಿ" (4:3)—ನೀವು ಒಳ್ಳೆಯ ವಸ್ತುಗಳ ಬದಲಿಗೆ ಹಾಳು ವಸ್ತುಗಳನ್ನು ಕೊಡಬಾರದು. ಅರ್ಥಾತ್ ಅನ್ಯರ ವಸ್ತುಗಳನ್ನು ಅಪಹರಿಸುವಂತೆಯೇ, ಅಯೋಗ್ಯ ವಸ್ತುಗಳನ್ನು ಮಾರುವುದು ಮತ್ತು ಒಳ್ಳೆಯದರ ಬದಲಿಗೆ ಕೆಟ್ಟದ್ದನ್ನು ಕೊಡುವುದು ಸಹ ಅನ್ಯಾಯವಾಗಿದೆ.

ಪ್ರಸ್ತುತ ವಾಕ್ಯಗಳಲ್ಲಿ ವಿಶ್ವಾಸವಂಚನೆಯ ಸಕಲ ವಿಧಗಳನ್ನು ವಿವರಿಸಲಾಗಿದೆ. ಯಾವ ಬಗೆಯ ವಂಚನೆಯನ್ನೂ ಹೊರತುಪಡಿಸದ ರೀತಿಯಲ್ಲಿ ಸಂಪೂರ್ಣವಾದೊಂದು ವಿವರಣೆ ಅವುಗಳಲ್ಲಿ ಅಡಕವಾಗಿದೆ. ಕಳ್ಳತನ ಮಾಡಬಾರದೆಂದು ಮಾತ್ರ ಹೇಳಿದ್ದರೆ, ಅದರ ಹೊರತು ಬೇರೆಲ್ಲಾ ಅಹಿತ ಮತ್ತು ಅನ್ಯಾಯದ ಅಪಹರಣ ರೀತಿಗಳನ್ನು ಯೋಗ್ಯಮಾರ್ಗಗಳೆಂದು ಅಜ್ಞರು ತಿಳಿದುಕೊಳ್ಳುವ ಅವಕಾಶವಿದೆ. ಆದ್ದರಿಂದಲೇ, ಸಕಲ ವಿಧ ಅಪಹರಣವನ್ನೂ ಅನ್ಯಾಯವನ್ನೂ ವಿರೋಧಿಸಿ ವ್ಯಾಪಕಾರ್ಥವುಳ್ಳ ವಚನಗಳು ಪ್ರಯುಕ್ತವಾಗಿವೆ. ಸಂಕ್ಷಿಪ್ತವಾಗಿ ಓರ್ವನು ತನ್ನ ಪ್ರಾಮಾಣಿಕತೆಯ ಸ್ವಭಾವವನ್ನು ಅದರ ಸಕಲ ಅಂಶಗಳನ್ನು ಗಮನಿಸಿ ವಿವೇಚನೆಯಿಂದ ಪ್ರಕಟಿಸದೆ ಕೆಲವು ಸಂಗತಿಗಳಲ್ಲಿ ಮಾತ್ರ ಪ್ರಾಮಾಣಿಕತೆಯನ್ನು ತೋರಿಸುವನಾದರೆ, ಅದನ್ನು ಯಥಾರ್ಥದಲ್ಲಿ ನೈತಿಕ ಗುಣವೆಂದು ಪರಿಗಣಿಸಲಾಗದು. ಅದು ಯುಕ್ತಾಯುಕ್ತ ಪ್ರಜ್ಞೆಯಿಲ್ಲದ ಸ್ವಭಾವಪ್ರಕಟನೆ ಮಾತ್ರವೇ ಆಗುವುದು.

### ಸೌಮ್ಯಶೀಲತೆ

ಅಹಿಂಸಾತ್ಮಕ ಸ್ವಭಾವ ವರ್ಗದಲ್ಲಿ ಒಳಗೊಂಡ ಮೂರನೆಯ ನೈತಿಕ ಗುಣವನ್ನು ಅರಬಿ ಭಾಷೆಯಲ್ಲಿ 'ಹುದ್ನ' ಎಂದೂ 'ಹೌನ್' ಎಂದೂ ಹೇಳುತ್ತಾರೆ. ಇತರರಿಗೆ ದೈಹಿಕವಾಗಿ ಯಾವ ಉಪದ್ರವವನ್ನೂ ಮಾಡದೆ ಸೌಮ್ಯತೆಯಿಂದಲೂ ಸಮಾಧಾನದಿಂದಲೂ ಜೀವಿಸುವುದು ಎಂದಾಗಿದೆ ಪ್ರಸ್ತುತ ಪದಗಳ ಅರ್ಥ. ಈ ಸೌಮ್ಯಶೀಲತೆ ಉತ್ಕೃಷ್ಟ ನೈತಿಕಗುಣವೆಂಬುದರಲ್ಲಿ ಸಂಶಯವಿಲ್ಲ. ಮಾತ್ರವಲ್ಲ, ಅದು ಮಾನವತೆಗೆ ಅತ್ಯಾವಶ್ಯಕವೂ ಅನು

ಗ್ರಹದಾಯಕವೂ ಆದ ಒಂದು ಸತ್‌ಸ್ವಭಾವವಾಗಿದೆ. ಈ ನೈತಿಕ ಗುಣಕ್ಕೆ ಅನುರೂಪವಾದ ಒಂದು ಸ್ವಾಭಾವಿಕ ಗುಣ ಶಿಶುಗಳಲ್ಲಿ ತೋರಲ್ಪಡುತ್ತದೆ. ಈ ಸಹಜ ಸ್ವಭಾವ ವನ್ನು ಸರಿಯಾದ ರೀತಿಯಲ್ಲಿ ಕ್ರಮೀಕರಿಸುವುದರಿಂದಾಗಿ ಸೌಮ್ಯಶೀಲವೆಂಬ ನೈತಿಕಗುಣ ಸಿದ್ಧಿಸುತ್ತದೆ. ಮನುಷ್ಯ ನು ವಿವೇಕಜ್ಞಾನವಿಲ್ಲದ ಸ್ವಾಭಾವಿಕ ಘಟ್ಟದಲ್ಲಿ ಸೌಮ್ಯತೆ ಯ ಅಥವಾ ಪರಾಕ್ರಮದ ತತ್ವವನ್ನು ಗ್ರಹಿಸಲು ಪ್ರಾಪ್ತ ನಲ್ಲ. ಆದರೆ ಈ ಸ್ಥಿತಿಯಲ್ಲಿ ಅವನಲ್ಲಿ ಒಂದು ಬಗೆಯ ಶಾಂತತೆಯು ಗೋಚರಿಸುತ್ತದೆ. ಸೌಮ್ಯಶೀಲತೆಯ ಮೂಲ ಇದೇ ಆಗಿದೆ. ಆದರೆ ಅದು ವಿವೇಕಜ್ಞಾನ ದಿಂದಲೂ ವಿವೇಚನೆಯಿಂದಲೂ ಪ್ರತ್ಯೇಕ ಉದ್ದೇಶ ದಿಂದಲೂ ಸ್ಫುರಣಗೊಂಡದ್ದಲ್ಲವಾದ ಕಾರಣ ಅದನ್ನು ನೈತಿಕ ಗುಣವೆಂದು ಪರಿಗಣಿಸಲಾಗದು. ಓರ್ವನು ಸ್ವೇಚ್ಛೆಯಿಂದ ದುಷ್ಕೃತ್ಯಗಳನ್ನು ತ್ಯಜಿಸಿ, ಸೌಮ್ಯಶೀಲತೆ ಯನ್ನು ಯಥೋಚಿತವಾಗಿ ತೋರಿಸುವಾಗ ಮಾತ್ರ ಅದು ನೈತಿಕಗುಣವೆಂದು ಪರಿಗಣಿಸಲ್ಪಡುತ್ತದೆ. ಈ ವಿಷಯ ದಲ್ಲಿ ಅಲ್ಲಾಹು ಹೀಗೆ ಉಪದೇಶಿಸುತ್ತಾನೆ:

"ವ ಅಸ್ಲಿಹೂ ದಾತ ಬೈನಿಕುಂ" (8:2) — ನೀವು ಪರಸ್ಪರ ಸೌಮ್ಯತೆಯಿಂದಲೂ ಸಮಾಧಾನದಿಂದ ಲೂ ವರ್ತಿಸಿರಿ.

"ಅಸ್ಸುಲ್‌ಹು ಖೈರುನ್" (4:129) — ಸಮಾ ಧಾನ ಅಥವಾ ಮೈತ್ರಿ ಅತ್ಯುತ್ತಮವಾದುದು.

"ವ ಇನ್ ಜನಹೂ ಲಿಸ್ಸಲ್ಮಿ ಫಜ್ನಹ್ ಲಹಾ" (8:62)—ಅವರು ಸಮಾಧಾನಕ್ಕೆ ಬರುವರಾದರೆ ನೀವು ಸಹ ಅದನ್ನು ಅನುಕೂಲಿಸಿರಿ.

"ವ ಇಬಾದುರ್ರಹ್ಮಾನಿಲ್ಲದೀನ ಯಂಶೂನ ಅಲಲ್ ಅರ್‌ಲಿ ಹೌನಾ" (25:64)—ಕರುಣಾನಿಧಿಯಾದ ಪರ ಮಾತ್ಮನ ಭಕ್ತದಾಸರು ಭೂಮಿಯಲ್ಲಿ ಸಮಾಧಾನ ಮತ್ತು ಸೌಮ್ಯತೆಯಿಂದ ಕೂಡಿದವರಾಗಿ ನಡೆಯುತ್ತಾರೆ.

"ವ ಇದಾ ಮರ್ರೂ ಬಿಲ್ಲಗ್‌ವಿ ಮರ್ರೂ ಕಿರಾಮಾ" (25:73) — ಅವರು ಅನುಚಿತ ಮಾತುಗಳನ್ನು ಕೇಳಿದರೆ ಅದು ಕಲಹಕ್ಕೆ ನಾಂದಿಯಾಗಬಹುದೆಂದು ಶಂಕಿಸಿ ಗೌರವ ದಿಂದ ಹಾದು ಹೋಗುತ್ತಾರೆ; ಕ್ಷುಲ್ಲಕ ಕಾರಣಕ್ಕಾಗಿ ಅವರು ಕಲಹವನ್ನುಂಟುಮಾಡಲಾರರು.

ಎಂದರೆ, ಅವರಿಗೆ ಹೆಚ್ಚಿಗೆ ತೊಂದರೆಯಾಗದಿದ್ದರೆ ಎದುರಿಸಲು ಅವರು ಇಚ್ಛಿಸುವುದಿಲ್ಲ. ಅಲ್ಪವಿಚಾರ ಗಳನ್ನು ಗಣ್ಯಮಾಡದೆ ಸಹನೆ ತೋರಿಸುವುದು ಸೌಮ್ಯ ಶೀಲತೆಯ ತತ್ವವಾಗಿದೆ. ಪ್ರಸ್ತುತ ವಾಕ್ಯದಲ್ಲಿ 'ಕ್ಷುಲ್ಲಕ' ಅಥವಾ 'ಅಲ್ಪವಿಚಾರ' ಎಂಬ ಅರ್ಥದಲ್ಲಿ ಪ್ರಯೋಗಿಸ ಲ್ಪಟ್ಟ 'ಲಗ್ವ್' ಎಂಬ ಶಬ್ದಕ್ಕೆ ಇಲ್ಲಿ ಒಂದು ವಿವರಣೆ ಅತ್ಯಾವಶ್ಯಕವಾಗಿದೆ. ಒಬ್ಬ ಮನುಷ್ಯನು ದುರುದ್ದೇಶ ದಿಂದ ಏನನ್ನಾದರೂ ನುಡಿಯುವನಾದರೂ ಅಥವಾ ಮಾಡುವನಾದರೂ ಅದರಿಂದ ಅವನು ಉದ್ದೇಶಿಸಿದ ಫಲ ಸಿದ್ಧಿಸುವುದಿಲ್ಲವೆಂದಾದರೆ, ಅದಕ್ಕೆ ಅರಬಿ ಭಾಷೆಯಲ್ಲಿ "ಲಗ್ವ್" ಎಂದು ಹೇಳುತ್ತಾರೆ. ಅಂತಹ ತುಚ್ಛವಾದ ಸಂಗತಿಯನ್ನು ಗಮನಿಸದೆ ಗೌರವದಿಂದ ವರ್ತಿಸು ವುದು ಸೌಮ್ಯತೆಯ ಲಕ್ಷಣವಾಗಿದೆ. ಆದರೆ ಆ ಕೃತ್ಯವು ನಿಸ್ಸಾರವೆಂದು ಗಣಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಜೀವಕ್ಕೋ ಸಂಪತ್ತಿಗೋ ಮಾನಕ್ಕೋ ಘಾತಕವೆಂದಾ ದಾಗ ತೋರಿಸುವ ತಾಳ್ಮೆಗೆ ಸೌಮ್ಯತೆ ಎಂಬ ನೈತಿಕ ಗುಣ ದೊಡನೆ ಸಂಬಂಧವಿಲ್ಲ. ಅಂತಹ ಅಪರಾಧಕ್ಕೆ ಕ್ಷಮೆ ತೋರುವುದನ್ನು 'ಅಫ್‌ವ್' ಅಥವಾ 'ಕ್ಷಮಾಗುಣ' ಎಂದು ಹೇಳುತ್ತಾರೆ. ಈ ಗುಣವಿಶೇಷದ ಕುರಿತು ಬೇರೆಡೆ ಯಲ್ಲಿ ಪ್ರತಿಪಾದಿಸಲಾಗುವುದು.

ಇನ್ನೊಂದೆಡೆಯಲ್ಲಿ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

"ಇದ್ಫಅ್ ಬಿಲ್ಲತೀ ಹಿಯಾ ಅಹ್ಸನು ಫಇದಲ್ಲದೀ ಬೈನಕ ವ ಬೈನಹೂ ಅದಾವತುನ್ ಕಅನ್ನಹೂ ವಲಿ ಯ್ಯುನ್ ಹಮೀಂ" (41:35)— ಯಾರಾದರೂ ದುಷ್ಟ ವಾಗಿ ಮಾತನಾಡುವರಾದರೆ ನೀವು ಉತ್ತಮ ರೀತಿಯಲ್ಲಿ ಸೌಮ್ಯವಾಗಿ ಉತ್ತರಕೊಡಿರಿ; ಈ ಸ್ವಭಾವದಿಂದ ಶತ್ರು ಮಿತ್ರನಾಗುವನು.

ಸಂಕ್ಷಿಪ್ತವಾಗಿ, ಯಥಾರ್ಥದಲ್ಲಿ ಯಾವ ನಷ್ಟ ವನ್ನೂ ಉಂಟುಮಾಡಲಾರದ, ಕ್ಷುಲ್ಲಕವಾದ ದ್ರೋಹಕೃತ್ಯ ಮಾತ್ರವೇ ಸೌಮ್ಯತೆಯ ತತ್ವಪ್ರಕಾರ ಅವಗಣಿಸಲ್ಪಡು ತ್ತದೆ.

### ಸಭ್ಯತೆ

ಅಹಿಂಸಾತ್ಮಕ ಸ್ವಭಾವ ಯಾದಿಯಲ್ಲಿ ಒಳಗೊಂಡ ನೈತಿಕ ಗುಣಗಳಲ್ಲಿ ನಾಲ್ಕನೆಯದಕ್ಕೆ ಅರಬಿ ಭಾಷೆಯಲ್ಲಿ 'ರಿಫ್‌ಖ್' ಎಂದು ಹೇಳುತ್ತಾರೆ. ಇದಕ್ಕೆ 'ಸಭ್ಯತೆ'

ಎಂದು ಅರ್ಥಕೊಡಬಹುದು. ಇದರ ಬೀಜರೂಪವೆಂಬಂತೆ ಶಿಶುಗಳಲ್ಲಿ ಗೋಚರಿಸುವ ಸ್ವಾಭಾವಿಕ ಗುಣಕ್ಕೆ 'ತಲಾಖತ್' ಅಥವಾ 'ಪ್ರಸನ್ನಭಾವ' ಎಂದು ಹೇಳುತ್ತಾರೆ. ಮಗು ಮಾತನಾಡಲು ಶಕ್ತವಾಗುವ ಮೊದಲು ಸಭ್ಯತೆಯ ಬದಲಿಗೆ ಈ ಪ್ರಸನ್ನಭಾವವನ್ನು ಪ್ರದರ್ಶಿಸುದನ್ನು ಕಾಣಬಹುದು. ಸಭ್ಯತೆಯ ಮೂಲವಾದ ಶಿಶುಪ್ರಾಯದ ಈ ಪ್ರಸನ್ನಭಾವ ನೈಸರ್ಗಿಕವಾದ ಒಂದು ಗುಣವಿಶೇಷವಾಗಿದೆ. ಶೈಶವಾವಸ್ಥೆಯಲ್ಲೇ ಇರುವ ಈ ಶಕ್ತಿಯನ್ನು ಸಂದರ್ಭೋಚಿತವಾಗಿ ಪ್ರಯೋಗಿಸುವಾಗ ಸಭ್ಯತೆ ಎಂಬ ನೈತಿಕ ಗುಣವು ಸಂಜಾತವಾಗುತ್ತದೆ. ಈ ಬಗ್ಗೆ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

"ವ ಕೂಲೂ ಲಿನ್ನಾಸಿ ಹುಸ್ನನನ್" (2:84) — ನೀವು ಜನರೊಡನೆ ಒಳ್ಳೆಯ ಮಾತನ್ನಾಡಿರಿ.

"ಲಾ ಯಸ್‌ಖರ್ ಕೌಮುನ್ ಮ್ಮಿನ್‌ಕೌಮಿನ್ ಅಸಾ ಅನ್‌ಯ್ಯಕೂನೂ ಖೈರನ್‌ಮ್ಮಿನ್‌ಹುಂ ವಲಾ ನಿಸಾಉನ್‌ಮ್ಮಿನ್‌ನ್ನಿಸಾಇನ್ ಅಸಾ ಅನ್‌ಯ್ಯಕುನ್ನ ಖೈರನ್‌ಮ್ಮಿನ್‌ಹುನ್ನ ವಲಾ ತಲ್ಮಿಸೂ ಅನ್‌ಫುಸಕುಂ ವಲಾ ತನಾಬಸೂ ಬಿಲ್ ಅಲ್ಕಾಬಿ" (49:12) — ಒಂದು ಸಮುದಾಯದವರು ಇನ್ನೊಂದು ಸಮುದಾಯದವರನ್ನು ಅಪಹಾಸ್ಯ ಮಾಡದಿರಲಿ; ಅವರು (ಅಪಹಾಸ್ಯಕ್ಕೆ ಗುರಿಯಾದವರು) ಇನ್ನೊಂದು ಸಮುದಾಯದವರಿಗಿಂತ ಉತ್ತಮರಾಗಿರಬಹುದು. ಸ್ತ್ರೀಯರು ಇತರ ಸ್ತ್ರೀಯರನ್ನು ಅಪಹಾಸ್ಯ ಮಾಡದಿರಲಿ; ಅಪಹಾಸ್ಯಕ್ಕೆ ಗುರಿಯಾದ ಸ್ತ್ರೀಯರು ಇತರ ಸ್ತ್ರೀಯರಿಗಿಂತ ಉತ್ತಮರಾಗಿರಬಹುದು. ನೀವು ಪರಸ್ಪರ ದೋಷಾರೋಪಮಾಡಬೇಡಿರಿ; ಅಡ್ಡ ಹೆಸರಿನಿಂದ ಕರೆಯಬೇಡಿರಿ.

"ಇಜ್ತನಿಬೂ ಕಸೀರನ್‌ಮ್ಮಿನಲ್ಲನ್ನಿ ಇನ್ನ ಬಯಲಲ್ಲನ್ನಿ ಇಸ್ಮುನ್ ವ್ವಲಾ ತಜಸ್ಸಸೂ ವಲಾ ಯಗ್‌ತಬ್‌ಬ್ಬಅ್‌ಲುಕುಂ ಬಅ್‌ಲನ್.... ವತ್ತಕುಲ್ಲಾಹ ಇನ್ನಲ್ಲಾಹ ತವ್ವಾಬುರ್‍ರ್ರಹೀಂ" (49:13) — ಅತಿಯಾದ ಸಂಶಯವನ್ನು ವರ್ಜಿಸಿರಿ. ಕೆಲವು ಸಂದರ್ಭಗಳಲ್ಲಿ ಸಂಶಯಪಡುವುದು ಪಾಪಕರವಾಗುವುದು. ಇತರರ ನ್ಯೂನತೆಗಳನ್ನು ಕೆದಕಿ ನೋಡಬೇಡಿರಿ. ಅನ್ಯೋನ್ಯ ನಿಂದಿಸಬೇಡಿರಿ.... ಅಲ್ಲಾಹುವಿಗೆ ಭಯಪಡಿರಿ: ಅಲ್ಲಾಹು ದಯಾಮಯನೂ ಕರುಣಾ ನಿಧಿಯೂ ಆಗಿರುವನು.

"ವಲಾ ತಕ್ಫು ಮಾ ಲೈಸಲಕ ಬಿಹೀ ಇಲ್ಮುನ್ ಇನ್ನಸ್ಸಮ್‌ಅ ವಲ್ಬಸರ ವಲ್‌ಫುಆದ ಕುಲ್ಲು ಉಲಾಇಕ ಕಾನ ಅನ್‌ಹು ಮಸ್‌ಊಲಾ" (17:37)— ನಿಮ್ಮೊಡನೆ ಸಾಕ್ಷ್ಯವಿಲ್ಲದೆ ನೀವು ಯಾರ ಮೇಲೆಯೂ ಆರೋಪಣೆ ಮಾಡಬಾರದು; ಖಂಡಿತವಾಗಿಯೂ ಕಿವಿ, ಕಣ್ಣು ಮತ್ತು ಹೃದಯ ಆ ಬಗ್ಗೆ ಪ್ರಶ್ನೆಗೆ ಗುರಿಯಾಗುವುವು.

ಅಹಿಂಸಾತ್ಮಕ ಸ್ವಭಾವಗಳ ವರ್ಗದಲ್ಲಿ ಒಳಗೊಂಡ ಸದ್ಗುಣಗಳ ಸಂಬಂಧಿಸಿ ಪ್ರತಿಪಾದಿಸಲಾಯಿತು. ಇನ್ನು ಪರೋಪಕಾರಾತ್ಮಕ ಸ್ವಭಾವಗಳು ಅಡಕವಾದ ಎರಡನೆಯ ವರ್ಗದಲ್ಲಿ ಒಳಗೊಂಡ ನೈತಿಕ ಗುಣಗಳನ್ನು ವಿವರಿಸೋಣ.

## ಕ್ಷಮಾಗುಣ

ಪರೋಪಕಾರಾತ್ಮಕ ವರ್ಗದ ಸದ್ಗುಣಗಳಲ್ಲಿ ಒಂದನೆಯದು 'ಅಫ್‌ವ್' ಅಥವಾ ಕ್ಷಮಾಗುಣವಾಗಿದೆ–ತಪ್ಪನ್ನು ಕ್ಷಮಿಸುವ ಸ್ವಭಾವ. ಅಪರಾಧಿಯನ್ನು ನ್ಯಾಯವಿಧಿಯ ಮೂಲಕ ಶಿಕ್ಷಿಸಬಹುದು, ಅಥವಾ ಸೆರೆಯಲ್ಲಿಡಬಹುದು ಅಥವಾ ಅವನಿಗೆ ದಂಡಹೊರಿಸಬಹುದು; ಅಥವಾ ದ್ರೋಹಿತನು ತಾನೇ ಅವನಿಗೆ ತಕ್ಕ ಶಾಸ್ತಿಮಾಡಬಹುದು. ಆದರೆ ಅಪರಾಧವನ್ನು ಕ್ಷಮಿಸುವುದರಿಂದ ಅವನಿಗೆ ಒಳಿತುಂಟಾಗುವುದಾದರೆ, ಪ್ರತೀಕಾರವನ್ನು ಮಾಡದೆ ಕ್ಷಮೆನೀಡುವುದು ಯಥಾರ್ಥದಲ್ಲಿ ಅವನಿಗೆ ಮಾಡುವ ಒಂದು ಉಪಕಾರವಾದೀತು. ಇದರ ಸಂಬಂಧಿಸಿ ಪವಿತ್ರ ಖುರ್‌ಆನ್ ನೀಡುವ ಪಾಠ ಇದಾಗಿದೆ:

"ವಲ್ ಕಾಲಿಮೀನಲ್‌ಗೈಲ ವಲ್‌ಆಫೀನ ಅನಿನ್ನಾಸಿ" (3:135) — ಸಂದರ್ಭ ನೋಡಿ ಕೋಪವನ್ನು ತಡೆಹಿಡಿಯುವವರೂ ಜನರಿಗೆ ಕ್ಷಮೆ ನೀಡುವವರೂ ಸತ್ಕರ್ಮಿಗಳಾಗಿದ್ದಾರೆ.

"ವ ಜಝಾಉ ಸಯ್ಯಿಅತಿನ್ ಸಯ್ಯಿಅತುನ್ ಮ್ಮಿಸ್‌ಲುಹಾ ಫಮನ್ ಅಫಾ ವ ಅಸ್ಲಹ ಫಅಜ್ರುಹೂ ಅಲಲ್ಲಾಹಿ" (42:41)—ಅಪರಾಧಕ್ಕಿರುವ ಪ್ರತಿಕ್ರಿಯೆ ಅದಕ್ಕೆ ತುಲ್ಯವಾದ ಶಿಕ್ಷೆಯಾಗಿದೆ; ಆದರೆ ಯಾವೊಬ್ಬನು ಕ್ಷಮೆ ನೀಡಿ ಒಳಿತನ್ನುಂಟುಮಾಡುತ್ತಾನೋ — ಕ್ಷಮೆ ನೀಡಬೇಕಾದ ಸರಿಯಾದ ಸಂದರ್ಭದಲ್ಲಿ ಹಾಗೆ ಮಾಡುತ್ತಾನಾದರೆ–ಅವನಿಗೆ ದೇವರಿಂದ ಅದರ ಪ್ರತಿಫಲ ಲಭಿಸುವುದು.

ಯಾವ್ಯಾವ ಸಂದರ್ಭಗಳಲ್ಲಿ ಅಪರಾಧಗಳನ್ನು ಕ್ಷಮಿಸಬೇಕಾಗಿದೆ ಎಂದು ಪ್ರಸ್ತುತ ವಾಕ್ಯಗಳು ಸರಿಯಾದ ಮಾರ್ಗದರ್ಶನ ನೀಡುತ್ತವೆ. ಯಾವುದೇ ಸಂದರ್ಭದಲ್ಲೂ

ದುಷ್ಟತೆಯನ್ನು ವಿರೋಧಿಸಬಾರದೆಂದಾಗಲೀ, ದುಷ್ಟರನ್ನೂ ದ್ರೋಹಿಗಳನ್ನೂ ಶಿಕ್ಷಿಸಬಾರದೆಂದಾಗಲೀ ಪವಿತ್ರ ಖುರ್‌ಆನ್ ಕಲಿಸುವುದಿಲ್ಲವೆಂಬುದು ಸ್ಪಷ್ಟ. ಅಪರಾಧವು ಕ್ಷಮಾರ್ಹವೇ ಯಾ ಶಿಕ್ಷಾರ್ಹವೇ ಎಂದು ಸಂದರ್ಭವನ್ನೂ ಸ್ಥಿತಿಯನ್ನೂ ನೋಡಿ ನಿರ್ಣಯಿಸಿ ಅದರ ಪ್ರಕಾರ ವರ್ತಿಸಬೇಕೆಂದು ಖುರ್‌ಆನ್ ಉಪದೇಶಿಸುತ್ತದೆ. ಒಟ್ಟಾರೆ, ತಪ್ಪಿತಸ್ಥನ ಮತ್ತು ಇತರರ ಒಳಿತನ್ನು ಮುಂದಿಟ್ಟು ಗುಣಕರವಾದ ಮಾರ್ಗ ಯಾವುದೆಂದು ನೋಡಿ ಅದನ್ನು ಸ್ವೀಕರಿಸಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಅಪರಾಧಿ ಕ್ಷಮಾದಾನದ ಕಾರಣದಿಂದಾಗಿ ತನ್ನ ಅಪರಾಧಗಳಿಗಾಗಿ ಪಶ್ಚಾತ್ತಾಪಪಟ್ಟು ತನ್ನ ಸ್ವಭಾವದಲ್ಲಿ ಬದಲಾವಣೆಯನ್ನು ಉಂಟುಮಾಡುತ್ತಾನೆ. ಕೆಲವು ಸಂದರ್ಭಗಳಲ್ಲಿ ಕ್ಷಮಾದಾನದ ಕಾರಣ ಅಪರಾಧಿ ಮೊದಲಿಗಿಂತ ಹೆಚ್ಚು ದುಷ್ಕೃತ್ಯಗಳನ್ನು ಮಾಡಲು ಧೈರ್ಯಪಡುತ್ತಾನೆ. ಆದುದರಿಂದ ಔಚಿತ್ಯವನ್ನು ನೋಡದೆ ಅಂಧವಾದ ರೀತಿಯಲ್ಲಿ ಕ್ಷಮಾಶೀಲವನ್ನು ಕೈಗೊಳ್ಳಬಾರದೆಂದೂ ನಿಜವಾಗಿ ಗುಣಕರ ಕ್ಷಮಿಸುವುದೋ ಶಿಕ್ಷಿಸುವುದೋ ಎಂದು ವಿವೇಚಿಸಿ ಅರ್ಹವಾದ ರೀತಿಯಲ್ಲಿ ವರ್ತಿಸಬೇಕೆಂದೂ ದೈವವಾಕ್ಯ ನಮಗೆ ಬೋಧಿಸುತ್ತದೆ. ಮನುಷ್ಯ ಸ್ವಭಾವ ವಿಭಿನ್ನವಷ್ಟೇ. ಕೆಲವರು, ತಮಗೆ ಮಾತ್ರವಲ್ಲ, ತಮ್ಮ ಮುತ್ತಜ್ಜರಿಗೆ ಮಾಡಿದ ಹಾನಿಯನ್ನೂ ಮರೆಯದೆ ಪ್ರತೀಕಾರವನ್ನು ಮಾಡಲು ಬಯಸುವವರಾದರೆ, ಕೆಲವರು ಕ್ಷಮಿಸುವ ಸ್ವಭಾವವನ್ನು ಬಹಳ ಹೆಚ್ಚಾಗಿ ಹಚ್ಚಿಕೊಂಡು ಸೀಮೆಯನ್ನು ಉಲ್ಲಂಘಿಸಿ ವರ್ತಿಸುತ್ತಾರೆ; ಕೆಲವು ಸಂದರ್ಭಗಳಲ್ಲಿ ಅವರು ತಮ್ಮ ಮನೆಯಲ್ಲೇ ನಡೆಯುವ ದುರ್ನಡತೆಗಳನ್ನು ಸಹ ನಿರ್ಲಕ್ಷಿಸಿದವರಾಗಿ ಕಾಣಬಹುದು. ಹೀಗೆ ಲಜ್ಜಾಕರವಾದ ರೀತಿಯಲ್ಲಿ ಕ್ಷಮಾಶೀಲತೆಯನ್ನೂ ಅಲಕ್ಷ್ಯತೆಯನ್ನೂ ಪ್ರದರ್ಶಿಸುವುದು ಸ್ವಾಭಿಮಾನಕ್ಕೂ ಗೌರವಕ್ಕೂ ಚಾರಿತ್ರ್ಯಕ್ಕೂ ಹಾನಿಕರವಾಗಿದೆ. ಈ ಸೀಮಾತೀತವಾದ ಕ್ಷಮೆಯ ಅಂತ್ಯಫಲ ಆಪತ್ಕರವಾಗುವುದು. ಈ ಕಾರಣದಿಂದಾಗಿ ಪವಿತ್ರ ಖುರ್‌ಆನ್ ಸದ್ಗುಣಗಳಿಗೆ ಸಂದರ್ಭೌಚಿತ್ಯವನ್ನು ಒಂದು ನಿಬಂಧನೆಯಾಗಿ ನಿಶ್ಚಯಿಸಿ, ಯಥಾರ್ಹವಾಗಿ ತೋರ್ಪಡಿಸದ ಸ್ವಭಾವವನ್ನು ಸದ್ಗುಣವೆಂದು ಅಂಗೀಕರಿಸುವುದಿಲ್ಲ.

ಯುಕ್ತಾಯುಕ್ತತೆಯ ಅರಿವಿಲ್ಲದ ಕ್ಷಮಾಗುಣವು ಮಕ್ಕಳಲ್ಲಿ ಸಹ ಕಾಣಬಹುದಾದ ಒಂದು ಸಹಜ ಸ್ವಭಾವವಾದುದರಿಂದ ಅದನ್ನು ಒಂದು ನೈತಿಕಗುಣವೆಂದು ಪರಿಗಣಿಸಲಾಗದು. ಮಗು ತನಗೆ ನೋಯಿಸಿದವನ ಬಳಿಗೆ ಕೂಡ ಸ್ವಲ್ಪ ಸಮಯದ ನಂತರ, ಆ ವಿಚಾರವನ್ನು ಮರೆತು ಸ್ನೇಹದಿಂದ ಹೋಗುವುದನ್ನು ನಾವು ಕಾಣುತ್ತೇವಷ್ಟೇ. ಆ ಮನುಷ್ಯನು ಮಗುವನ್ನು ಕೊಲ್ಲಲು ಸಿದ್ಧನಾಗಿದ್ದವನಾದರೂ ಅದು ಅವನ ಮಧುರ ಮಾತಿನಿಂದ ಸಂತುಷ್ಟವಾಗುತ್ತದೆ. ಇಂತಹ ಕ್ಷಮಾಗುಣವು ಯಾವ ರೀತಿಯಲ್ಲೂ ಸದ್ಗುಣವೆಂದು ಎಣಿಸಲ್ಪಡಲಾರದು. ಈ ಗುಣವನ್ನು ವಿವೇಚನೆಯಿಂದ ಯಥೋಚಿತವಾಗಿ ಬಹಿರಂಗಪಡಿಸುವಾಗ ಮಾತ್ರವೇ ಅದು ಸದ್ಗುಣವಾಗುವುದು. ಹಾಗಲ್ಲವಾದರೆ ಅದು ನೈಸರ್ಗಿಕವಾದ ಒಂದು ಸ್ವಭಾವ ಮಾತ್ರವಾಗಿರುತ್ತದೆ. ಸಹಜಗುಣ ಮತ್ತು ಸದ್ಗುಣದ ವ್ಯತ್ಯಾಸವನ್ನು ತಿಳಿಯಬಲ್ಲವರು ಲೋಕದಲ್ಲೇ ಬಹಳ ವಿರಳವೆಂದು ಹೇಳಬಹುದು. ಯಥಾರ್ಥ ಸದ್ಗುಣ, ಸ್ಥಳ ಸಂದರ್ಭಗಳ ಔಚಿತ್ಯದಿಂದ ಕೂಡಿ ಪ್ರಕಟವಾಗುತ್ತದೆ; ಸಹಜಗುಣ ಯುಕ್ತಾಯುಕ್ತತೆಯ ಪ್ರಜ್ಞೆಯಿಲ್ಲದೆ ಸ್ವಾಭಾವಿಕ ಪ್ರೇರಣೆಯನ್ನನುಸರಿಸಿ ಪ್ರಕಟವಾಗುತ್ತದೆ — ಇದು ಎರಡರೊಳಗಿನ ವ್ಯತ್ಯಾಸವಾಗಿದೆ. ಪ್ರಾಣಿಗಳಲ್ಲಿ ನಿರುಪದ್ರವಿಗಳನ್ನೂ ಪ್ರತೀಕಾರ ಸ್ವಭಾವವಿಲ್ಲದವುಗಳನ್ನೂ ನಾವು ಕಾಣುತ್ತೇವೆ. ಉದಾಹರಣೆಗೆ ಹಸುವನ್ನು ನಿರುಪದ್ರವಿಯೆಂದೂ ಆಡನ್ನು ಸೌಮ್ಯ ಸ್ವಭಾವದ್ದೆಂದೂ ಹೇಳಬಹುದು. ಆದರೆ ಅವುಗಳಿಗೆ ಔಚಿತ್ಯನೌಚಿತ್ಯಗಳ ವ್ಯತ್ಯಾಸವನ್ನು ತಿಳಿಯಲು ವಿವೇಕವಿಲ್ಲದುದರಿಂದ ಅವುಗಳ ಈ ರೀತಿಯ ಸ್ವಭಾವವನ್ನು ಸದ್ಗುಣವೆಂದು ಗಣಿಸಲಾಗದು. ದೇವರ ಸತ್ಯವೇದ ಗ್ರಂಥವಾದ ಪವಿತ್ರ ಖುರ್‌ಆನ್ ಎಲ್ಲಾ ನೈತಿಕಗುಣಗಳು ಸಮಯ ಮತ್ತು ಸಂದರ್ಭ ಸಹಿತ ಬಹಿರಂಗಗೊಳ್ಳಬೇಕೆಂಬ ನಿಬಂಧನೆಯನ್ನು ವಿಧಿಸಿದೆ,

## ಉಪಕಾರಶೀಲತೆ

ಪರೋಪಕಾರಾತ್ಮಕ ಸ್ವಭಾವ ವರ್ಗದಲ್ಲಿ ಒಳಗೊಂಡ ಎರಡನೆಯ ಸದ್ಗುಣ ಅರಬಿ ಭಾಷೆಯಲ್ಲಿ 'ಅದ್‌ಲ್' ಎಂದು ಕರೆಯಲ್ಪಡುವ 'ಪ್ರತ್ಯುಪಕಾರ'ವೂ ಮೂರನೆಯದು 'ಇನ್‌ಸಾನ್' ಎಂಬ 'ಔದಾರ್ಯ'ವೂ ನಾಲ್ಕನೆಯದು 'ಈತಾಯಿದಿಲ್ ಖುರ್ಬಾ' ಅಥವಾ 'ಬಂಧು ಬಳಗದೊಡನೆ ಪ್ರೀತಿ'ಯೂ ಆಗಿದೆ. ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಇನ್ನಲ್ಲಾಹ ಯಅ್‌ಮುರು ಬಿಲ್‌ಅದ್ಲಿ ವಲ್ ಇಹ್ಸಾನಿ ವ ಈತಾಯಿದಿಲ್ ಖುರ್ಬಾ ವ ಯನ್‌ಹಾ ಅನಿಲ್ ಫಹ್‌ಷಾಇ ವಲ್ ಮುಂಕರಿ ವಲ್ ಬಗೀ" (16:91)—ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಲಿಕ್ಕೂ, ಅದಕ್ಕಿಂತ ಮಿಗಿಲಾಗಿ ಔದಾರ್ಯವನ್ನು ತೋರಿಸುವ ಸಂದರ್ಭ ಬಂದರೆ ಔದಾರ್ಯ ತೋರಿಸಲಿಕ್ಕೂ, ಅದಕ್ಕಿಂತ ಮೀರಿದ ಬಂಧುತ್ವಪರವಾದ ಅನುಕಂಪವನ್ನು ತೋರಿಸುವ ಅವಕಾಶವೊದಗಿದರೆ ಆ ಮಟ್ಟದ ಸಹಾನುಭೂತಿಯನ್ನು ತೋರಿಸಲಿಕ್ಕೂ ಅಲ್ಲಾಹು ಆಜ್ಞಾಪಿಸುತ್ತಾನೆ. ನೀತಿಧರ್ಮದ ಸೀಮೆಯನ್ನು ಉಲ್ಲಂಘಿಸುವುದನ್ನೂ ಔದಾರ್ಯದ ವಿಷಯದಲ್ಲಿ ಅವಿವೇಕತನವನ್ನು ಪ್ರದರ್ಶಿಸುವುದನ್ನೂ (ಯುಕ್ತವಲ್ಲದ ಸಮಯದಲ್ಲಿ ಒಳಿತುಂಟುಮಾಡುವ ಉತ್ಸುಕತೆ ಅಥವಾ ಯುಕ್ತ ಸಂದರ್ಭದಲ್ಲಿ ಒಳಿತುಂಟುಮಾಡಲು ಅನಾಸಕ್ತಿ ತೋರ್ಪಡಿಸುವುದನ್ನೂ) ಬಂಧು ಬಳಗದೊಡನೆ ಸಹತಾಪವನ್ನು ತೋರಿಸಬೇಕಾದ ಸಂದರ್ಭದಲ್ಲಿ ಕೊರತೆಯನ್ನುಂಟು ಮಾಡುವುದನ್ನೂ ಮಿತಿಮೀರಿ ದಯಾರ್ದ್ರತೆಯನ್ನು ಪ್ರಕಟಿಸುವುದನ್ನೂ ಅವನು ವಿರೋಧಿಸುತ್ತಾನೆ.

ಈ ಪವಿತ್ರ ವಾಕ್ಯ ಉಪಕಾರಧರ್ಮದ ಮೂರು ಸ್ಥಾನಗಳನ್ನು ಪ್ರತಿಪಾದಿಸುತ್ತದೆ. ಒಂದನೆಯದು ಒಳಿತಿನ ಬದಲಿಗೆ ಒಳಿತನ್ನುಂಟುಮಾಡುವ ಪ್ರತ್ಯುಪಕಾರ ಸ್ವಭಾವ. ಇದು ಕೆಳಮಟ್ಟದ ಗುಣವಾಗಿದೆ. ತನಗೆ ಉಪಕಾರ ಮಾಡಿದವನಿಗೆ ಪ್ರತ್ಯುಪಕಾರ ಮಾಡುವ ಸ್ವಭಾವ ಒಬ್ಬ ಸಾಮಾನ್ಯನಿಗೆ ಸಹ ಇರಬಹುದು. ಎರಡನೆಯ ಸ್ಥಾನ ಇದಕ್ಕಿಂತ ಪ್ರಯಾಸಕರವಾದುದು. ಪ್ರಥಮದಲ್ಲಿ ತಾನೇ ಉಪಕಾರ ಮಾಡುವ ಹಾಗೂ ಯಾವುದೇ ಋಣಾನುಬಂಧವಿಲ್ಲದೆಯೇ ಇತರರಿಗೆ ಗುಣವನ್ನುಂಟುಮಾಡುವ ಈ ಸ್ವಭಾವ ಶ್ಲಾಘನೀಯವಾದರೂ ಮಧ್ಯಮ ಮಟ್ಟದ್ದಾಗಿದೆ. ಹೆಚ್ಚಿನವರು ಬಡಜನರಿಗೆ ಔದಾರ್ಯವನ್ನು ತೋರಿಸುವರಾದರೂ ಆ ಸಹಾಯದಲ್ಲಿ ಒಂದು ನ್ಯೂನತೆ ಅಡಕವಾಗಿರುವುದನ್ನು ಕಾಣಬಹುದು. ಸಹಾಯ ಮಾಡಿದವನು ತಾನೊಂದು ಉಪಕಾರವನ್ನು ಮಾಡಿರುವೆನೆಂದು ಭಾವಿಸುತ್ತಾನೆ. ಅದರ ಬದಲಿಗೆ ಕನಿಷ್ಠಪಕ್ಷ ಕೃತಜ್ಞತೆಯನ್ನಾಗಲೀ ಪ್ರಾರ್ಥನೆಯನ್ನಾಗಲೀ ಅಪೇಕ್ಷಿಸುತ್ತಾನೆ. ತನ್ನ ಉಪಕಾರಕ್ಕೆ ಋಣಿಯಾದವನು ಎಂದಾದರೂ ತನಗೆದುರಾಗಿ ವರ್ತಿಸಿದ ಪಕ್ಷದಲ್ಲಿ ಅವನನ್ನು ಉಪಕಾರ ಸ್ಮರಣೆ ಇಲ್ಲದವನೆಂದೂ ಕೃತಘ್ನನೆಂದೂ ಕರೆಯುತ್ತಾನೆ. ತಾನು ಮಾಡಿದ ಉಪಕಾರದ ಹೇತುವಾಗಿ ಅವನು ಕೆಲವು ಬಾರಿ ಋಣಿಯಾದ ಮನುಷ್ಯನ ಮೇಲೆ ವಹಿಸಲಾರದ ಭಾರ ಹೊರಿಸಿ ತನ್ನ ಉಪಕಾರದ ಕುರಿತು ಅವನಿಗೆ ನೆನಪನ್ನುಂಟುಮಾಡುತ್ತಾನೆ. ಈ ನ್ಯೂನತೆಯನ್ನು ಹೋಗಲಾಡಿಸಲಿಕ್ಕಾಗಿ ಪವಿತ್ರ ಖುರ್‌ಆನ್ ಉದಾರಿಗಳನ್ನು ಹೀಗೆ ಎಚ್ಚರಿಸುತ್ತದೆ:

"ಲಾ ತುಬ್ತಿಲೂ ಸದಕಾತಿಕುಂ ಬಿಲ್ ಮನ್ನಿ ವಲ್ ಅದಾ" (2:265)—ಎಲೈ ಉಪಕಾರಶೀಲರೆ, ನೀವು ಮಾಡುವ ಧಾನಧರ್ಮಗಳು ಸದುದ್ದೇಶದಿಂದ ಕೂಡಿರಲಿ; ಮಾಡಿದ ಉಪಕಾರದ ಕುರಿತು ಉಪಕಾರ ಪಡೆದವರಿಗೆ ನೆನಪು ಹುಟ್ಟಿಸುತ್ತಾ ದುಃಖವನ್ನು ಕೊಡುತ್ತಾ ನಿಮ್ಮ ದಾನವನ್ನು ನಿಷ್ಫಲ ಮಾಡಬೇಡಿರಿ.

ಪ್ರಸ್ತುತ ವಾಕ್ಯದಲ್ಲಿ 'ದಾನಧರ್ಮ' ಎಂದು ಭಾಷಾಂತರಿಸಲ್ಪಟ್ಟ 'ಸದಖಃ' ಎಂಬ ಮೂಲಪದ 'ಅಂತಃಶುದ್ಧಿ' ಎಂಬರ್ಥವುಳ್ಳ 'ಸಿದ್ಕ್' ಎಂಬ ಧಾತುವಿನಿಂದ ಉತ್ಪನ್ನವಾಗಿದೆ. ನಿಷ್ಕಪಟ ಮತ್ತು ನಿಷ್ಕಳಂಕ ಹೃದಯದಿಂದ ಮಾಡಿದ ಸಹಾಯ ಮಾತ್ರವೇ ಯಥಾರ್ಥ ದಾನಧರ್ಮವಾಗುತ್ತದೆ. ಇಲ್ಲವಾದರೆ ಅದು ತೋರಿಕೆ ಮಾತ್ರವಾಗುತ್ತದೆ. ಸಂಕ್ಷಿಪ್ತವಾಗಿ, ಪರೋಪಕಾರಿ ಕೆಲವು ಸಂದರ್ಭಗಳಲ್ಲಿ ತಾನು ಮಾಡಿದ ಉಪಕಾರದ ಕುರಿತು ನೆನಪು ಹುಟ್ಟಿಸುವುದು ಒಂದು ನ್ಯೂನತೆಯಾದುದರಿಂದ ಅದರ ಬಗ್ಗೆ ಖುರ್‌ಆನ್ ಪ್ರತ್ಯೇಕ ಎಚ್ಚರಿಕೆಯನ್ನಿತ್ತಿದೆ.

ಉಪಕಾರಧರ್ಮದ ಮೂರನೆಯ ಸ್ಥಾನ, ಉಪಕಾರ ಮಾಡುವುದೆಂಬ ಭಾವನೆಯಾಗಲಿ, ಕೃತಜ್ಞತೆಯ ಅಪೇಕ್ಷೆಯಾಗಲಿ ಇಲ್ಲದೆ ಅನುಕಂಪದ ಆವೇಶದಿಂದ ನಿಕಟ ಸಂಬಂಧಿಕರಿಗೆಂಬಂತೆ ಪರರಿಗೆ ಒಳಿತನ್ನುಂಟುಮಾಡುವುದಾಗಿದೆ. ಪ್ರತಿಫಲವನ್ನು ಇಚ್ಛಿಸದೆ ತಾಯಿ ತನ್ನ ಮಕ್ಕಳಿಗೆ ವಾತ್ಸಲ್ಯದಿಂದ ಸಹಾಯಮಾಡುವ ರೀತಿಯಲ್ಲಿ ಅನ್ಯರಿಗೆ ಉಪಕಾರ ಮಾಡುವುದೇ ಪರೋಪಕಾರದ ಅತ್ಯಂತ ಶ್ರೇಷ್ಠ ಸ್ಥಾನವಾಗಿದೆ. ಇದಕ್ಕಿಂತ ಉನ್ನತಿಗೇರಲು ಮನುಷ್ಯನಿಗೆ ಸಾಧ್ಯವಿಲ್ಲ. ಇದನ್ನು 'ಈತಾಯಿದಿಲ್ ಖುರ್ಬಾ' (ಬಂಧುತ್ವಪರವಾದ ಸಹಾಯ) ಎಂದು ಹೆಸರಿಸಲಾಗಿದೆ.

ಆದರೆ, ಪರೋಪಕಾರ ಧರ್ಮದ ಎಲ್ಲಾ ದರ್ಜೆಗಳ ಮೇಲೆ ಒಂದು ಮುಖ್ಯ ನಿಬಂಧನೆಯನ್ನು ಹೇರಲಾ

ಗಿದೆ. ಈ ಪರೋಪಕಾರ ಗುಣವು ಯುಕ್ತ ಸಂದರ್ಭದಲ್ಲಿ ಪ್ರಕಟಗೊಳ್ಳಬೇಕೆಂಬುದೇ ಆಗಿದೆ ಅದು. ಯಥೋಚಿತವಾಗಿ ಉಪಕಾರ ಮಾಡದಿದ್ದರೆ ಅದು ಅಪಕಾರವಾಗುವುದೆಂದು ಪ್ರಸ್ತುತ ಖುರ್‌ಆನ್ ವಾಕ್ಯ ವ್ಯಕ್ತಗೊಳಿಸುತ್ತದೆ. 'ಅದ್‌ಲ್' ಅಥವಾ 'ಪ್ರತ್ಯುಪಕಾರ' ಎಂಬ ಧರ್ಮ 'ಫಹ್‌ಶಾಅ್' ಅಥವಾ 'ಅಸಭ್ಯತೆ'ಯಾಗಿ ಪರಿಣಮಿಸುತ್ತದೆ. ಹಾಗೆಯೇ 'ಇಹ್‌ಸಾನ್' ಅಥವಾ ಔದಾರ್ಯ ಅನುಚಿತವಾದ ರೀತಿಯಲ್ಲಿ ಮಾಡಲ್ಪಡುವುದಾದರೆ ಅದು "ಮುಂಕರ್" ಅಥವಾ "ಹೀನಕೃತ್ಯ"ವಾಗುವುದು. ಎಂದರೆ, ಮನಸ್ಸಾಕ್ಷಿ ಇಷ್ಟಪಡದ ಬುದ್ಧಿ ಸಮ್ಮತಿಸದ ನಿಂದ್ಯಕೃತ್ಯವಾಗುವುದು. "ಈತಾಯಿದಿಲ್ ಖುರ್ಬಾ" ಅಥವಾ ನಿಕಟ ಬಂಧುಗಳೊಡನೆ ತೋರಿಸುವ ಪ್ರೀತಿ ಯಥೋಚಿತ ರಹಿತವಾದರೆ ಅದು "ಬಗೀ" ಅಥವಾ "ಪರಪೀಡನೆ" ಯಾದೀತು. "ಬಗೀ" ಎಂಬ ಪದದ ಧಾತ್ವರ್ಥ ಬೆಳೆಯ ನಾಶಕ್ಕೆ ಕಾರಣವಾಗುವ "ಅತಿವೃಷ್ಟಿ" ಎಂದಾಗಿದೆ. ಕರ್ತವ್ಯ ನಿರ್ವಹಣೆಯಲ್ಲಿ ಅಮಿತ ಅಥವಾ ನ್ಯೂನತೆಯು ನೆಲೆಯನ್ನು ಕೈಗೊಳ್ಳುವುದನ್ನು ಸಹ "ಬಗೀ" ಎಂದು ಹೇಳುತ್ತಾರೆ. ಸಂಕ್ಷಿಪ್ತದಲ್ಲಿ, ಪ್ರಸ್ತುತ ಮೂರು ವರ್ಗಗಳ ಒಳಿತುಗಳು ಯಥೋಚಿತವಾಗಿ ಮಾಡಲ್ಪಡದಿದ್ದರೆ ಅವು ಕೆಡುಕುಗಳಾಗಿ ಪರಿಣಮಿಸುತ್ತವೆ. ಆ ಕಾರಣದಿಂದಲೇ ಈ ಗುಣಕರ್ಮಗಳೊಂದಿಗೆ ಸಂದರ್ಭದ ಔಚಿತ್ಯವನ್ನು ಒಂದು ನಿಬಂಧನೆಯಾಗಿ ನಿಶ್ಚಯಿಸಲಾಗಿದೆ. ಯುಕ್ತಾಯುಕ್ತ ರಹಿತವಾದ ಪ್ರತ್ಯುಪಕಾರವಾಗಲಿ, ಔದಾರ್ಯವಾಗಲಿ, ನಿಕಟ ಸಂಬಂಧಿಕರೊಡನೆ ತೋರಿಸುವಂತಹ ಪ್ರೀತಿಯಾಗಲಿ, ನೈತಿಕ ಗುಣವೆಂದು ಪರಿಗಣಿಸಲ್ಪಡಲಾರದು. ಏಕೆಂದರೆ, ಈ ಗುಣಗಳೆಲ್ಲಾ ವಿವೇಕ ಬುದ್ಧಿ ಪಕ್ವವಾಗುವ ಮೊದಲೇ ಶಿಶುಗಳಲ್ಲಿ ಸಹ ನೈಸರ್ಗಿಕವಾಗಿಯೇ ಗೋಚರಿಸಲ್ಪಡುತ್ತವೆ. ಅವು ನೈತಿಕಗುಣಗಳಾಗಬೇಕಾದರೆ ವಿವೇಕ ಬುದ್ಧಿಯ ಸಹಿತ ಅವು ಪ್ರಕಾಶಗೊಳ್ಳಬೇಕಾಗಿವೆ. ಪ್ರತಿಯೊಂದು ಸಹಜಗುಣಗಳನ್ನು ವಿವೇಚನೆ ಸಹಿತವಾಗಿ ಯಥೋಚಿತ ತೋರ್ಪಡಿಸುವಾಗ ಅವು ನೈತಿಕ ಗುಣಗಳಾಗಿ ಮಾರ್ಪಾಟುಗೊಳ್ಳುತ್ತವೆ.

ಪವಿತ್ರ ಖುರ್‌ಆನ್ ಇಹ್‌ಸಾನ್ ಎಂಬ ಉದಾರ ಗುಣದ ಕುರಿತು ಇನ್ನೂ ಅತ್ಯಾವಶ್ಯಕ ಉಪದೇಶಗಳನ್ನು ನೀಡುತ್ತದೆ. ಈ ಆದೇಶಗಳೆಲ್ಲಾ 'ಅಲಿಫ್ ಲಾಂ' ಸಹಿತ ಪ್ರಯುಕ್ತವಾಗಿದ್ದು ಅವುಗಳ ವಿಶೇಷತೆಯನ್ನೂ ಔಚಿತ್ಯವನ್ನೂ ಸಂಕೇತಿಸುತ್ತದೆ. ಖುರ್‌ಆನ್ ಹೀಗೆ ಹೇಳುತ್ತದೆ:

"ಯಾ ಅಯ್ಯುಹಲ್ಲದೀನ ಆಮನೂ ಅನ್‌ಫಿಕೂ ಮಿನ್‌ತಯ್ಯಿಬಾತಿ ಮಾ ಕಸಬ್ತುಂ...... ವಲಾ ತಯಮ್ಮಮುಲ್ ಖಬೀಸ ಮಿನ್‌ಹು" (2:268)– ಎಲೈ ವಿಶ್ವಾಸಿಗಳೇ, ನೀವು ನ್ಯಾಯರೀತಿಯಲ್ಲಿ ಸಂಪಾದಿಸಿದ (ಕಳ್ಳತನ, ಲಂಚ, ಮೋಸ, ಅಪಹರಣ ಎಂಬೀ ದಾರಿಯಲ್ಲಿ ಅಥವಾ ಅನ್ಯಾಯವಾದ ಇನ್ನಾವುದೇ ಮಾರ್ಗದಲ್ಲಿ ಸಂಪಾದಿಸಿದ ಏನೂ ಬೆರೆಯದ) ಸಂಪತ್ತಿನಿಂದ ಜನರಿಗೆ ದಾನಧರ್ಮ, ಉಪಕಾರಗಳನ್ನು ಮಾಡಿರಿ. ಅನ್ಯಾಯವಾದ ಸಂಪಾದನೆಯಿಂದ ದಾನಮಾಡುವ ವಿಚಾರ ನಿಮ್ಮ ಹೃದಯದಿಂದ ದೂರವಾಗಿರಲಿ.

"ಲಾ ತುಬ್ತಿಲೂ ಸದಕಾತಿಕುಂ ಬಿಲ್‌ಮನ್ನಿವಲ್ ಅದಾ ಕಲ್ಲದೀ ಯುನ್‌ಫಿಕು ಮಾಲಹೂ ರಿಆಅನ್ನಾಸಿ" (2:265)– ನೀವು ಮಾಡಿದ ದಾನಧರ್ಮಗಳ ಕುರಿತು, ನಿಮ್ಮ ಉಪಕಾರ ಪಡೆದವರಿಗೆ ನೆನಪು ಮಾಡುತ್ತಾ ದುಃಖವನ್ನು ಕೊಡುತ್ತಾ ನಿಷ್ಪ್ರಯೋಜಕವನ್ನಾಗಿ ಮಾಡಬೇಡಿರಿ. (ಎಂದರೆ, ನಿಮ್ಮ ನೆರವು ಪಡೆದವರಿಗೆ, ಅದರ ಕುರಿತು ನೆನಪು ಹುಟ್ಟಿಸುತ್ತಾ ಅಥವಾ ಬೇರಾವುದೇ ವಿಧದಲ್ಲಿ ಅವರನ್ನು ದುಃಖಕ್ಕೆ ಈಡು ಮಾಡಬಾರದು, ಹಾಗೆ ಮಾಡುವಿರಾದರೆ ನಿಮ್ಮ ಉಪಕಾರ ವ್ಯರ್ಥವಾಗುವುದು); ಅನ್ಯರಿಗೆ ತೋರಿಸುವುದಕ್ಕೋಸ್ಕರ ನಿಮ್ಮ ಧನವನ್ನು ಖರ್ಚು ಮಾಡುವ ಸಂಪ್ರದಾಯವನ್ನು ಕೈಗೊಳ್ಳಬೇಡಿರಿ.

"ಅಹ್‌ಸಿನೂ ಇನ್ನಲ್ಲಾಹ ಯುಹಿಬ್ಬುಲ್ ಮುಹ್ಸಿನೀನ್" (2:196)— ನೀವು ಜನರಿಗೆ ಒಳಿತನ್ನು ಮಾಡಿರಿ; ಅಲ್ಲಾಹು ಉದಾರಿಗಳಾದ ಸಜ್ಜನರನ್ನು ಪ್ರೀತಿಸುತ್ತಾನೆ.

"ಇನ್ನಲ್ ಅಬ್ರಾರ ಯಶ್ರಬೂನ ಮಿನ್ ಕಅ್‌ಸಿನ್ ಕಾನ ಮಿಸಾಜುಹಾ ಕಾಫೂರಾ'' (76:6)— ಯಥಾರ್ಥ ರೀತಿಯಲ್ಲಿ ಉಪಕಾರ ಮಾಡುವ ಸಜ್ಜನರಿಗೆ ಕರ್ಪೂರ ಮಿಳಿತ ಪಾನೀಯ ಕುಡಿಸಲಾಗುವುದು. ಎಂದರೆ ಪ್ರಾಪಂಚಿಕ ಲಾಲಸೆಗಳೂ ಪರಿತಾಪಗಳೂ ಅಶುದ್ಧ ಇಚ್ಛೆಗಳೂ ಅವರ ಹೃದಯದಿಂದ ದೂರೀಕರಿಸಲ್ಪಡುವುವು.

ಕರ್ಪೂರ ಅಥವಾ 'ಕಾಫೂರ್' ಎಂಬ ಅರಬಿ ಪದ 'ನಿಗ್ರಹಿಸು' ಮತ್ತು 'ಮುಚ್ಚಿಡು' ಎಂದು ಅರ್ಥ ಕೊಡುವ 'ಕಫರ್' ಎಂಬ ಧಾತುವಿನಿಂದ ಉತ್ಪತ್ತಿಯಾಗಿದೆ. ಈ

ಕರ್ಪೂರ ಪಾನೀಯ ಸೇವನೆಯ ತಾತ್ಪರ್ಯ, ಅವರ ಅನುಚಿತ ಉದ್ವೇಗಗಳು ನಿಗ್ರಹಿಸಲ್ಪಡುವುವೆಂದೂ ಅವರ ಹೃದಯದಿಂದ ಅಶುದ್ಧತೆಗಳೆಲ್ಲಾ ನೀಗಿಸಲ್ಪಡುವುವೆಂದೂ ದೈವಜ್ಞಾನವೆಂಬ ತಂಪಿನಿಂದ ಅವರು ಶೀತಲೀಕೃತರಾಗುವರೆಂದೂ ಆಗಿದೆ.

"ಐನನ್ ಯಶ್ರಬು ಬಿಹಾ ಇಬಾದುಲ್ಲಾಹಿ ಯುಫಜ್ಜಿರೂನಹಾ ತಫ್‌ಜೀರಾ" (76:7) — ಆ ಸುಕೃತರಾದ ದೇವದಾಸರು ತಾವೀಗ ತಮ್ಮ ಕೈಗಳಿಂದಲೇ ನಿರ್ಮಿಸಿದ ಬುಗ್ಗೆಯಿಂದ ಪುನರುತ್ಥಾನ ದಿನದಂದು ನೀರು ಕುಡಿಯುವರು.

ಈ ವಾಕ್ಯವು ಸ್ವರ್ಗಕ್ಕೆ ಸಂಬಂಧಿಸಿದ ಗಹನ ತತ್ವರಹಸ್ಯವನ್ನು ಸೂಚಿಸುತ್ತದೆ. ತಿಳಿಯಲು ಇಷ್ಟವುಳ್ಳವರು ತಿಳಿದುಕೊಳ್ಳಲಿ.

ಪವಿತ್ರ ಖುರ್‌ಆನ್ ಮುಂದುವರಿಸುತ್ತಾ ಹೀಗೆ ಹೇಳುತ್ತದೆ:

"ವ ಯುತ್‌ಇಮೂನತ್ತಅಮ ಅಲಾ ಹುಬ್ಬಿಹೀ ಮಿಸ್ಕೀನನ್ ವ್ವಯತೀಮನ್ ವ್ವಅಸೀರಾ. ಇನ್ನಮಾ ನುತ್‌ಇಮುಕುಂ ಲಿವಜ್‌ಹಿಲ್ಲಾಹಿ ಲಾ ನುರೀದು ಮಿನ್‌ಕುಂ ಜಸಾಅನ್ ವ್ವಲಾ ಶುಕೂರಾ" (76:9, 10) — ಸತ್ಕರ್ಮಿಗಳು ಪರಮಾತ್ಮನೊಡನಿರುವ ಪ್ರೀತಿಯಿಂದ ತಾವು ಇಷ್ಟಪಡುವ ಆಹಾರವನ್ನು ಬಡವರಿಗೂ ಅನಾಥರಿಗೂ ಬಂಧನಕ್ಕೊಳಗಾದವರಿಗೂ ನೀಡಿ 'ನಿಮ್ಮ ಮೇಲೆ ನಾವು ಯಾವ ಋಣಾನುಬಂಧವನ್ನೂ ಹೊರಿಸುವುದಿಲ್ಲ; ಇದು ದೇವರು ನಮ್ಮನ್ನು ಪ್ರೀತಿಸುವುದಕ್ಕಾಗಿ ನಾವು ಅವನಿಗೆ ಅರ್ಪಿಸುವ ಸೇವೆಯಾಗಿದೆ; ನಿಮ್ಮಿಂದ ಯಾವ ಪ್ರತಿಫಲವನ್ನಾಗಲಿ ಕೃತಜ್ಞತೆಯನ್ನಾಗಲಿ ನಾವು ನಿರೀಕ್ಷಿಸುವುದಿಲ್ಲ' ಎಂದು ಹೇಳುವರು.

ಉಪಕಾರ ಧರ್ಮದ ಮೂರನೆಯ ಸ್ಥಾನ ಈ ರೀತಿಯಲ್ಲಿ ಪ್ರತಿಫಲವನ್ನು ಬಯಸದ ಬಂಧುತ್ವಪರವಾದ ಅನುಕಂಪವಾಗಿದೆಯೆಂದು ಈ ವಾಕ್ಯಗಳು ಸೂಚಿಸುತ್ತವೆ.

ಇನ್ನೂ ಖುರ್‌ಆನ್ ಹೇಳುತ್ತದೆ: "ಆತಲ್ ಮಾಲ ಅಲಾ ಹುಬ್ಬಿಹೀ ದವಿಲ್‌ಖುರ್ಬಾ ವಲ್‌ಯತಾಮಾ ವಲ್ ಮಸಾಕೀನ ವಬ್ನಸ್ಸಬೀಲಿ" (2:178) — ಯಥಾರ್ಥ ಸದ್ಧರ್ಮಿಗಳು ದೇವರ ಸಂತುಷ್ಟಿಗಾಗಿ ತಮ್ಮ ಧನವನ್ನು ವ್ಯಯಿಸಿ ಬಂಧುಗಳಿಗೆ ನೆರವು ನೀಡುತ್ತಾರೆ; ಅನಾಥ ಮಕ್ಕಳನ್ನು ಸಂರಕ್ಷಿಸುತ್ತಾರೆ, ಅವರ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡುತ್ತಾರೆ; ನಿರ್ಗತಿಕರನ್ನೂ ದರಿದ್ರರನ್ನೂ ಹಸಿವೆಯಿಂದ ಸಂರಕ್ಷಿಸುತ್ತಾರೆ; ದಾರಿಹೋಕರಿಗೆ ಸಹಾಯಮಾಡುತ್ತಾರೆ; ಭಿಕ್ಷುಕರಿಗೆ ದಾನಮಾಡುತ್ತಾರೆ: ಗುಲಾಮರನ್ನೂ ಸಾಲಗಾರರನ್ನೂ ವಿಮುಕ್ತಗೊಳಿಸುತ್ತಾರೆ.

"ಇದಾ ಅನ್‌ಫಕೂ ಲಂ ಯುಸ್ರಿಫೂ ವಲಂ ಯಕ್ತುರೂ ವ ಕಾನ ಬೈನ ದಾಲಿಕ ಕವಾಮಾ" (25;68)— ಅವರು ಖರ್ಚು ಮಾಡುವಾಗ ಮಿತಿಮೀರದೆಯೂ ಜಿಪುಣತೆ ತೋರಿಸದೆಯೂ ಮಧ್ಯಮ ಮಟ್ಟವನ್ನು ಕೈಗೊಳ್ಳುತ್ತಾರೆ.

"ವಲ್ಲದೀನ ಯಸಿಲೂನ ಮಾ ಅಮರಲ್ಲಾಹು ಬಿಹೀ ಅನ್‌ಯ್ಯೂಸಲ ವ ಯಖ್‌ಶೌನ ರಬ್ಬಹುಂ ವ ಯಖಾಫೂನ ಸೂಅಲ್ ಹಿಸಾಬ್" (13:22) — ಜೋಡಿಸಲ್ಪಡಲಿಕ್ಕಾಗಿ ಅಲ್ಲಾಹು ವಿಧಿಸಿದ್ದನ್ನು ಅವರು ಜೋಡಿಸುತ್ತಾರೆ; ತಮ್ಮ ರಕ್ಷಕನಾದ ಪರಮಾತ್ಮನಿಗೆ ಅವರು ಭಯಪಟ್ಟು, ಆಪತ್ಕರವಾದ ಲೆಕ್ಕತೆಗೆಯುವಿಕೆಯ ಕುರಿತು ಭೀತರಾಗುತ್ತಾರೆ.

"ವ ಫಿಲ್ ಅಮ್ವಾಲಿಹಿಂ ಹಕ್ಕುನ್ ಲ್ಲಿಸಾಇಲಿ ವಲ್ ಮಾಹ್‌ರೂಂ" (51:20) — ಅವರ ಸಂಪತ್ತಿನಲ್ಲಿ ಯಾಚಿಸುವವರಿಗೂ ಯಾಚಿಸಲಾಗದವರಿಗೂ ಹಕ್ಕಿದೆ. ಇಲ್ಲಿ 'ಯಾಚಿಸಲಾಗದವರು' ಎಂಬ ಅರ್ಥವ್ಯಾಪ್ತಿಯಲ್ಲಿ ನಾಯಿ, ಬೆಕ್ಕು, ಎತ್ತು, ಕತ್ತೆ, ಆಡು ಮುಂತಾದ ಇತರ ಜೀವಿಗಳೂ ಸೇರುತ್ತವೆ.

ಅಲ್ಲದೀನ ಯುನ್‌ಫಿಕೂನ ಫಿಸ್ಸರ್ರಾಇ ವಲ್ಲರ್ರಾಇ" (3:135)—ಅವರು ತಮ್ಮ ಸಮೃದ್ಧಿಯ ಕಾಲದಲ್ಲೆಂಬಂತೆಯೇ ದುರ್ಭಿಕ್ಷಕಾಲದಲ್ಲಿಯೂ ತಮ್ಮ ಶಕ್ತ್ಯಾನುಸಾರ ದಾನಧರ್ಮ ಮಾಡುತ್ತಾರೆ.

"ವ ಅನ್‌ಫಕೂ ಮಿಮ್ಮಾ ರಸಕ್ನಾಹುಂ ಸಿರ್ರನ್ ವ್ವಅಲಾ ನಿಯತನ್" (13:23)—ಅವರು ಕೆಲವು ಬಾರಿ ರಹಸ್ಯವಾಗಿಯೂ ಕೆಲವು ಬಾರಿ ಬಹಿರಂಗವಾಗಿಯೂ ದಾನ ನೀಡುತ್ತಾರೆ. ಡಾಂಭಿಕತನ ಉಂಟಾಗದಿರಲಿಕ್ಕೆ ಅವರು ರಹಸ್ಯವಾಗಿಯೂ, ಇತರರನ್ನು ಸಹ ಪ್ರೇರೇಪಿಸ

ಲಿಕ್ಕಾಗಿ ಅವರು ಬಹಿರಂಗವಾಗಿಯೂ ದಾನಮಾಡು ತ್ತಾರೆ.

"ಇನ್ನಮಸ್ಸದಕಾತು ಲಿಲ್‌ಫುಕರಾಇ ವಲ್‌ಮಸಾಕೀನಿ ವಲ್‌ಆಮಿಲೀನ ಅಲೈಹಾ ವಲ್‌ಮುಅಲ್ಲಫತಿ ಕುಲೂಬುಹುಂ ವ ಫಿರ್‍ರಿಕಾಬಿ ವಲ್‌ಗಾರಿಮೀನ ವ ಫೀ ಸಬೀಲಿಲ್ಲಾಹಿ ವಬ್ನಿಸ್ಸಬೀಲಿ ಫರೀಲತನ್ ಮಿನಲ್ಲಾಹಿ ವಲ್ಲಾಹು ಅಲೀಮುನ್ ಹಕೀಂ" (9:60)–ದಾನಧರ್ಮಗಳು ದರಿದ್ರರನ್ನೂ ನಿರ್ಗತಿಕರನ್ನೂ ಸಹಾಯಿಸಲಿಕ್ಕೂ, ಪ್ರಸ್ತುತ ಏರ್ಪಾಡುಗಳ ಕಾರ್ಯನಿರ್ವಾಹಕರಿಗೆ ಪ್ರತಿಫಲದ ರೀತಿಯಲ್ಲೂ ದುಷ್ಟವಲಯದಲ್ಲಿ ಸಿಲುಕಿದವರನ್ನು ಅದರಿಂದ ವಿಮೋಚಿಸಲಿಕ್ಕೂ ಗುಲಾಮರನ್ನು ವಿಮುಕ್ತಗೊಳಿಸಲಿಕ್ಕೂ ಸಾಲದಲ್ಲಿ ಮುಳುಗಿದವರನ್ನು ಮತ್ತು ಆಪತ್ತಿಗೆ ಗುರಿಯಾದವರನ್ನು ರಕ್ಷಿಸಲಿಕ್ಕೂ ಪರಮಾತ್ಮನ ಸಂತುಷ್ಟಿಯ ಇತರ ಕಾರ್ಯಗಳಿಗೂ ದಾರಿಹೋಕರಿಗೆ ಸಹಾಯವನ್ನೀಯಲಿಕ್ಕೂ ವ್ಯಯಿಸಲ್ಪಡಬೇಕಾಗಿದೆ. ಇದು ದೇವರ ಒಂದು ಆಜ್ಞೆಯಾಗಿದೆ. ದೇವರು ಎಲ್ಲವನ್ನೂ ಬಲ್ಲವನೂ ಅಗಾಧ ಜ್ಞಾನಿಯೂ ಆಗಿದ್ದಾನೆ.

"ಲನ್ ತನಾಲುಲ್ ಬಿರ್‍ರ ಹತ್ತಾ ತುನ್‌ಫಿಕೂ ಮಿಮ್ಮಾ ತುಹಿಬ್ಬೂನ'' (3:93) — ನೀವು ಪ್ರೀತಿಸುವ ನಿಮ್ಮ ಸಂಪತ್ತನ್ನು ಸಹಜೀವಿಗಳ ಸಹಾಯಕ್ಕಾಗಿ ವ್ಯಯಿಸದಿರುವ ತನಕ ನೀವು ಸತ್ಕರ್ಮಿಗಳಾಗಲಿಕ್ಕಿಲ್ಲ.

"ವ ಆತಿದಲ್ ಖುರ್ಬಾ ಹಕ್ಕಹೂ ವಲ್ ಮಿಸ್ಕೀನ ವಬ್ನಸ್ಸಬೀಲಿ ವಲಾ ತುಬದ್ದಿರ್ ತಬ್‌ದೀರಾ'' (17;27) —ಬಂಧುಗಳಿಗೆ ಅವರ ಹಕ್ಕನ್ನು ನೀಡಿರಿ; ಹಾಗೆಯೇ ದರಿದ್ರರಿಗೂ ನಿರ್ಗತಿಕರಿಗೂ ದಾನ ನೀಡಿರಿ: ಯಾತ್ರಿಕರಿಗೆ ನೆರವೀಯಿರಿ; ಆದರೆ ದುರ್ವ್ಯಯ ಮಾಡಿ ಧನವನ್ನು ನಾಶಪಡಿಸಬೇಡಿರಿ.

ಎಂದರೆ, ಮದುವೆ ಸಮಾರಂಭಗಳಿಗೂ ಆಡಂಭರಕ್ಕಾಗಿಯೂ ಶುಭಸಂದರ್ಭದ ಆಚಾರ ಸಂಪ್ರದಾಯಗಳಿಗಾಗಿಯೂ ಮಾಡಲಾಗುವ ದುರ್ವ್ಯಯಗಳಿಂದ ದೂರವಿರಿ.

"ವ ಬಿಲ್ ವಾಲಿದೈನಿ ಇಹ್‌ಸಾನನ್ ವ್ವಬಿದಿಲ್ ಖುರ್ಬಾ ವಲ್ ಯಾತಾಮಾ ವಲ್ ಮಸಾಕೀನಿ ವಲ್‌ಜಾರಿದಿಲ್‌ಖುರ್ಬಾ ವಲ್‌ಜಾರಿಲ್ ಜುನುಬಿ ವಸ್ಸಾಹಿಬಿ ಬಿಲ್ ಜನ್‌ಬಿ ವಬ್ನಿಸ್ಸಬೀಲಿ ವಮಾ ಮಲಕತ್ ಐಮಾನುಕುಂ ಇನ್ನಲ್ಲಾಹ ಲಾ ಯುಹಿಬ್ಬು ಮನ್‌ಕಾನ ಮುಖ್‌ತಾಲನ್ ಫಹೂರಾ. ಅಲ್ಲದೀನ ಯಬ್‌ಖಲೂನ ವ ಯಅ್‌ಮುರೂನನ್ನಾಸಬಿಲ್‌ಬುಖ್‌ಲಿ ವ ಯಕ್‌ತುಮೂನ ಮಾ ಆತಾಹುಮುಲ್ಲಾಹುಮಿನ್ ಫಲ್‌ಲಿಹೀ'' (4:37, 38) — ನೀವು ಮಾತಾಪಿತರಿಗೆ ಒಳಿತನ್ನುಂಟುಮಾಡಿರಿ. ಹಾಗೆಯೇ ಸಂಬಂಧಿಕರಿಗೂ ಅನಾಥ ಮಕ್ಕಳಿಗೂ ನಿರ್ಗತಿಕರಿಗೂ ಬಂಧುಗಳಾದ ನೆರೆಕರೆಯವರಿಗೂ ಬಂಧುಗಳಲ್ಲದ ನೆರೆಕರೆಯವರಿಗೂ ಸಹಯಾತ್ರಿಕರಿಗೂ ಪಥಿಕರಿಗೂ ನಿಮ್ಮ ಅಧೀನದಲ್ಲಿರುವ ಭೃತ್ಯರಿಗೂ ಕುದುರೆ, ಆಡು, ಹಸು ಮೊದಲಾದ ಮೃಗಗಳಿಗೆಲ್ಲಾ ಉಪಕಾರ ಮಾಡಿರಿ. ಈ ಸ್ವಭಾವ ದೇವರಿಗೆ ಪ್ರಿಯಕರವಾಗಿದೆ. ಅವನು ದಿಟವಾಗಿಯೂ ಗರ್ವಿಷ್ಟರನ್ನೂ ಸ್ವಾರ್ಥಿಗಳನ್ನೂ ಪ್ರೀತಿಸುವುದಿಲ್ಲ. ಲೋಭಿಗಳನ್ನೂ ಜನರಿಗೆ ಜಿಪುಣತೆ ಕಲಿಸುವವರನ್ನೂ ಧನವನ್ನು ಅಡಗಿಸಿಟ್ಟು ತಮ್ಮ ಬಳಿ ಏನೂ ಇಲ್ಲವೆಂದು ಬಡವರೊಡನೆ ಹೇಳುವವರನ್ನೂ ಅಲ್ಲಾಹು ಸ್ನೇಹಿಸುವುದಿಲ್ಲ.

(ಮುಂದುವರಿಯುವುದು)



ಆಫ್ರಿಕಾದ ಘಾನಾದಲ್ಲಿರುವ ಅಹ್ಮದಿಯಾ ಮಸೀದಿ.


## Books on Islam and Contemporary Religions

1. **Ahmadiyyat or The True Islam** — 8-00
   By Hazrat Mirza Bashiruddin Mahmud Ahmad
2. **The Teachings of Islam** — 6-00
   By Hazrat Mirza Ghulam Ahmad
3. **Characteristics of the Quaranic Teachings** — 1-00
   By Hazrat Mirza Bashiruddin Mahmud Ahmad
4. **Where did Jesus Die?** — 2-25
   By J. D. Shams, Ex-Imam, London Mosque
5. **The Tomb of Jesus** — 1-00
   By Sufi M. R. Bengali
6. **Jesus in India** — 2-25
7. **The Christian Doctrine of Atonement** — 1-50
8. **An Interpretation of Islam** — 1-50

Write to

**NARIR DAWAT-O-TABLIGH**


P. O. QADIAN-143516. (Punjab)

Regd. with the Registrar of Newspapers for India. Regd. No. R. N. 27354/75
YUGARASHMI Kannada Quarterly, April-June 1979/Shahadat-Ihsan 1358

# ENGLISH TRANSLATION OF THE HOLY QURAN

WITH

## ARABIC TEXT and EXTENSIVE INDEX




**Price: Rs. 15-00** **Postal Charges Extra**

Write to:

**NAZIR DAWAT-O-TABLIGH**

**QADIAN (Punjab)-143516**

Printed by: B. Madhava Kulal, at Chandra Printers, Lower Car Street, Mangalore
Edited and Published by Muhammad Yusuf on behalf of Jamath Ahamadiyya
Mangalore at 23/1008 Ansari Road, Bunder, Mangalore-575001.